

# ಖುರ್‌ಆನ್–ಹದೀಸು

## ಯಾವುದು ಮುಖ್ಯ?


ಗ್ರಂಥಕರ್ತ : ತ್ರಿಮತ ಏಕೈಕ ಗುರುವು

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (100) ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**


**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**


---





ಗ್ರಂಥ ಮುದ್ರಣ

**ಇಂದೂ ಜ್ಞಾನವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 44 ಪ್ರಥಮ ಮುದ್ರಣ : ನವೆಂಬರ್–2022

ಪ್ರತಿಗಳು : 1000 ಬೆಲೆ. /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ-ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು–ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ–ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ – ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು–ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ–ರಾವಣಬ್ರಹ್ಮ–ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ದ್ಯಾನ – ಪ್ರಾರ್ಥನೆ – ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಸಿದ್ಧಿ ಬೋಧನೆ.
100. ಸತ್ಯಾರ್ಥ ಪ್ರಕಾಶಣೆಯಲ್ಲಿ ಸತ್ಯವೆಷ್ಟು.
101. ಸೊನ್ನೆ.

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು, 02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ, 09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ, 20. ಭಗವಂತುಡು.
21. ದ್ರಾವಿಡುಲು–ಆರ್ಯುಲು.
22. ಪ್ರಭುವು–ಪ್ರಭುತ್ವಂ.
23. ಭೂತಂ–ಮಹಾಭೂತಂ, 24. ಪ್ರಭು–ಪ್ರಜ.
25. ಯಾದವ್, 26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು, 28. ಪ್ರಕೃತಿ–ವಿಕೃತಿ.
29. ಮಾಟ–ಮಂದು, 30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–ಮಾಯ ಮಹತ್ಯಮು.
46. ಸಮಾಧಿ. 47. ತಲ್ಲಿ ತಂಡ್ರಿ–ಗುರುವು ದೈವಮು.
48. ಕಲಿಯುಗಮು. 49. ಮತಮು–ಪಥಮು.
50. ದಿವ್ಯಖುರಾನ್–ಹದೀಸು, 51. ತಲ್ಲಿ.
52. ಪುಟ್ಟುಟ–ಗಿಟ್ಟುಟ.
53. ಗೋರು – ಗುರು. 54. ಆತ್ಮ,
55. ಕರ್ಮ ಮರ್ಮಮು.
56. ತಾತ, 57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು–ಹಿಂದುವು.
61. ಸ್ತ್ರೀ–ಪು/ಲಿಂಗಮು, 62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ–ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ.
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ–ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ,
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು– ಕರ್ಮವುನ್ನ ಕೃಷ್ಣುಡು.
79. ಭಯಂ, 80. ಸುಖಮು–ಆನಂದಮು.
81. ದಶ–ದಿಶಲು, 82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು– ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ ಮಹೇಂದ್ರಜಾಲ,ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ. (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು– ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು? 88. 6–3=6.
89. ತೆಲುಗುಲೋ ಮೂಡು–ಆರು ತೊಮ್ಮಿದಿ.
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 

**DVD's**

92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ-ಭಯಮು, 99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು-ಅಪಾರ್ಥಮು.
102. ತೋಲೇವಾಡು, 103. ಗುರು ಚಿಹ್ನಂ.
104. ಭಕ್ತಿ-ಶ್ರದ್ಧಲು, 105. ಮತದ್ವೇಷಮು.
106. ದೇವುಡು ಇದ್ದರಾ! ಒಕ್ಕರಾ!!
107. ಪುರುಷೋತ್ತಮ.
108. ನೀ ವೆನುಕವಾಡು.
109. ಗ್ರಂಥಮು-ಬೋಧ.
110. ಆಟ-ದೋಬೂಚುಲಾಟ.
111. ಪ್ರಜಲು-ಮಾನವುಲು.
112. ಆಸ್ತಿ-ದೋಸ್ತಿ
113. ದಂತಮು-ಅಂತಮು.
114. ಮಾಯ ಮರ್ಮಮು-ಆತ್ಮ ಧರ್ಮಮು.
115. ಶ್ರೀಕೃಷ್ಣುಡು ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು.
117. ಅದುರು-ಬೆದುರು
118. ಶವಮು-ಶಿವಮು.
119. ಧರ್ಮಚಕ್ರಮು, 120. ಗ್ರಾಹಿತಶಕ್ತಿ
121. ಭೌತಿಕಮು-ಅಭೌತಿಕಮು.
122. ದೇವುನಿ ಆಜ್ಞ ಮರಣಂ.
123. ಮತ ಸಾಮರಸ್ಯಂ.
124. ಮೋಕ್ಷಮು-ಮೋಸಮು.
125. ಅಕ್ಷರ ಜ್ಞಾನಮು, 126. ಲಲಾಜಲಮು.
127. ದೈವ ಧರ್ಮಗಳು- ಮತಸಾಂಪ್ರದಾಯಗಳು.
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ-ಮಂದು, 130. ಕಾಲಚಕ್ರಂ.
131. ಬ್ರಹ್ಮವಿದ್ಯ, 132. ಶಕ್ತಿ.
133. ಆಧ್ಯಾತ್ಮಿಕ ಪ್ರಶ್ನಲು-ಜವಾಬುಲು.
134. ಪೌರ್ಣಮಿ-ಅಮಾವಾಸ್ಯ.
135. ಈಶ್ವರ-ಪರಮೇಶ್ವರ.
136. ಪುರುಷೋತ್ತಮ-ಶ್ರೀರಾಮ.
137. ದೇವುನಿಕಿ ಒಕ್ಕಡೇ ಕುಮಾರುಡು- ದೇವುನಿಕಿ ಅನೇಕಮಂದಿ ಕುಮಾರುಲು.
138. ಜಲಂ, 139. ಅಧಿಪತಿ.
140. ಗ್ರಹಾಂತರವಾಸುಲು.
141. ದೇವುಡು ದ್ವಿತೀಯುಡಾ? ಅದ್ವಿತೀಯುಡಾ?
142. ಮನಿಷಿ ಚೇತಿಲೋ ಭಗವಂತುಡು- ದೇವುನಿ ಚೇತಿಲೋ ಮನಿಷಿ.
143. ಶರೀರಮುಲೋ ರಕ್ತಮು- ಗ್ರಂಥಮುಲೋ ಜ್ಞಾನಮು.
144. ಗ್ರಂಥಮುಲೋ ಜ್ಞಾನಮು- ಮನಿಷಿಲೋ ರಕ್ತಮು.
145. ತ್ರೈತ ಸಿದ್ಧಾಂತ ಚರಿತ್ರ.
146. ಕುಶಾಲ್ ಕುಶಾಲ್ ಲಂಜಮ್ಮ ನಾ ನೆತ್ತಿ ಮೀದ ರೆಂಡು ತನ್ನಮ್ಮ.
147. ರಾಜಾಧಿ ರಾಜಾ-ದೇವಾಧಿ ದೇವಾ.
148. ಎನಿಮಿದಿ ಮಂದಿ ಭಾರ್ಯಲುನ್ನ ಶ್ರೀ ಕೃಷ್ಣುನಿಕಿ ಗೋಪಿಕಲ ಮೀದ ಧ್ಯಾಸ ಎಂದುಕು?
149. ಕುಲಂ-ಮತಂ.
150. ಗುರುಪೌರ್ಣಮಿ ಸಂದರ್ಭಮುಗಾ.
151. ಭಗವಂತುಡು ಎವರು?
152. ವಿಶ್ವದಾಭಿರಾಮ ವಿನುರ ವೇಮಾ.
153. ಕಾಲಂ, 154. ಯಮಧರ್ಮ.
155. ಕುಡಿ ಧರ್ಮಮು-ಎಡಮ ಧರ್ಮಮು.
156. ಗುಡಿ.
157. ಇಂದುತ್ವಮು ಅಂದರಿಲೋ ಕಲದು -ಹಿಂದುತ್ವಮು ಕೊಂದರಿಲೋ ಕಲದು.
158. ಧರ್ಮಮುಲು ಮೂಡೇ ವುನ್ನವಿ- ಅಧರ್ಮಮುಲು ಆರು ಅಯಿನವಿ.
159. ನೇನು, ನಾ ತಂಡ್ರಿ, ನಾ ತಾತ- ನೇನು, ನಾ ಅಮ್ಮ, ನಾ ಅವ್ವ.
160. ಆದ್ಯ ಆತ್ಮೀಕಮು-ಆಧ್ಯಾತ್ಮಿಕಮು, ಆದ್ಯ ದೇವೀಕಮು-ಆಧ್ಯೇವೀಕಮು.
161. ವಿತ್ತನಮು ಲೇನಿ ಚೆಟ್ಟು ಶಿವುಡಾ! ಈಶ್ವರುಡಾ!!
162. ಮನಿಷಿನಿ ಜಂತುವು ಅಂಟೇ ಅವಮಾನಿಂಚಿನಟ್ಲು ಕಾದಾ!
163. ದೇವುಡು ಕರುಣಾಮಯುಡು ದೇವುಡು ಕಠಿನಾತ್ಮುಡು.

**ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)**
ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P
Cell : **ಲಕ್ಷ್ಮಿನಾರಾಯಣಾಚಾರಿ**–9440556968, 6305035254, 7981892957.

## ಇಂದೂ ಜ್ಞಾನ ವೇದಿಕೆ ಸದಸ್ಯರು

R. **ಶ್ರೀದೇವಿ**
ಹೊಸಪೇಟೆ, ವಿಜಯನಗರ (ಜಿಲ್ಲೆ)
Cell:9611133635, 8050309963.

B. **ಸುಧಾಕರ**
ತೋರಣಗಲ್ಲು, ಬಳ್ಳಾರಿ (ಜಿಲ್ಲೆ)
Cell:7348934963.

**ಶಿವರಾಜ**
ಕುಕನೂರು, ರಾಯಚೂರು (ಜಿಲ್ಲೆ),
Cell:9844369516,9632418716.

B. **ವಾತ್ಸಲ್ಯ – ರವೀಂದ್ರಾಚಾರಿ**
ದಾವಣಗೆರೆ.
Cell:9901534677,8880666529.

K. **ಭರತ್ ಕುಮಾರ್**
ಮೇಲಾಗಣಿ, ಮುಳಬಾಗಿಲು (ತಾ),
ಕೋಲಾರ (ಜಿಲ್ಲೆ), Cell:8095009014.

M. **ನಾರಾಯಣರೆಡ್ಡಿ**
ರಾಮಗುಂಡನಲ್ಲಿ ಪೋಸ್ಟ್,
ಬೆಂಗಳೂರು. Cell : 9741890089.

**ವೇಣುಗೋಪಾಲ್**
N.G.R. Layout, ರೂಪೇನ ಅಗ್ರಹಾರ,
ಬೆಂಗಳೂರು. Cell : 8970772028.

**ರಾಘವೇಂದ್ರ**
ತುಮಕೂರು, Cell:9886399426.

G. **ಮನೋಹರ್**
ಯಲಹಂಕ, ಮಾರುತಿನಗರ, ಬೆಂಗಳೂರು.
Cell:7411459912,9448452963.

G. **ರಾಧಾಕೃಷ್ಣಾ ರೆಡ್ಡಿ**
ಮರಲೂರು, ತುಮಕೂರು (ಜಿಲ್ಲೆ).
Cell:9448177812.

C. **ಲೀಲಾವತಿ–ಮುರಳಿಧರ**
ಜನತಾನಗರ, ಮೈಸೂರ್.
Cell:9141109799, 9986369118.

R. **ಚಂದ್ರಶೇಖರ್**
ಕೀಲುಕೋಟೆ, ಕೋಲಾರ.
Cell:9741827901.

T. **ನಾಗರಾಜು**
ವೀವರ್ಸ್‌ಕಾಲೋನಿ,
ನೆಲಮಂಗಲಟೌನ್, ಬೆಂಗಳೂರು.
Cell:9449434963, 8494801963.

**ಯೋಗೇಶ್**
ಸುಲನಾಯಕನಹಳ್ಳಿ (ಗ್ರಾಮ),
ಪಾವಗಡ (ತಾ), ತುಮಕೂರು (ಜಿಲ್ಲೆ).
Cell:8762523963,9740744424.

N. **ವೆಂಕಟರಾಯಪ್ಪ**
ಕಾರಂಜಿ ಕಟ್ಟೆ, ಕೋಲಾರ.
Cell:8147158272.

S. **ಸೂರಪನಾಯುಡು**
ಹಾರುಗಿರಿ (ಗ್ರಾ), ರಾಯಬಾಗ (ತಾ)
ಬೆಳಗಾವಿ (ಜಿಲ್ಲೆ) Cell: 9632300916

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ!

ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಖುರ್‌ಆನ್-ಹದೀಸು ಯಾವುದು ಮುಖ್ಯ? 

ಅಪಾರ ಕರುಣಾಮಯನು, ಪರಮ ಕೃಪಾಶೀಲನು, ಅನಂತ ಶಕ್ತಿಮಯನು, ಅಪಾರ ಯುಕ್ತಿಮಯನು ಆಗಿರುವಂತಹ ದೇವರನ್ನು, ಇಸ್ಲಾಮ್ ಮತದಲ್ಲಿ ಅಲ್ಲಾಹ್ ಎನ್ನುವಂತಹ ದೈವವನ್ನು ಪ್ರಾರ್ಥಿಸುತ್ತಾ, ಈಗ ಇಸ್ಲಾಮ್‌ಗೆ ಸಂಬಂಧಿಸಿದ ದೈವದಲ್ಲಿ ಇರುವಂತಹ ಪ್ರತ್ಯೇಕತೆಯನ್ನು ನಿಮಗೆ ತಿಳಿಸಬೇಕೆಂದು ಅಂದುಕೊಳ್ಳುತ್ತಿದ್ದೇವೆ. ಇಸ್ಲಾಮ್ ಮತದಲ್ಲಿ ಪ್ರತ್ಯೇಕಿಸಿ ಒಂದು ಗ್ರಂಥ ಇದೆ. ಅದು ಪವಿತ್ರ ಖುರ್‌ಆನ್ ಗ್ರಂಥ. ಆ ಪವಿತ್ರ ಖುರ್‌ಆನ್ ಗ್ರಂಥದಲ್ಲಿ ದೇವರಿಗೆ (ಅಲ್ಲಾಹ್‌ಗೆ) ಸಂಬಂಧಿಸಿದ ಸಂಪೂರ್ಣ ಸಮಾಚಾರ ತಿಳಿಸಲಾಗಿದೆ. ದೇವರಿಗೆ ಸಂಬಂಧಿಸಿದ ಸಂಪೂರ್ಣ ಸಮಾಚಾರ ಹಿಂದೂ ಮತದಲ್ಲಿ ಭಗವದ್ಗೀತೆಯಲ್ಲಿ, ಕ್ರೈಸ್ತವ ಮತದಲ್ಲಿ ಬೈಬಲ್‌ನಲ್ಲಿ, ಇಸ್ಲಾಮ್ ಮತದಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಹೇಳಿರುವಾಗ, ಈ ಮೂರು ಮತಸ್ಥರು ತಮ್ಮ ತಮ್ಮ ಗ್ರಂಥಗಳನ್ನು ದೊಡ್ಡದಾಗಿ ಹೇಳಿಕೊಳ್ಳುತ್ತಾ, ಅಂದರೇ ಒಂದು ಮತಕ್ಕು ಇನ್ನೊಂದು ಮತಕ್ಕು ಸಂಬಂಧ ಇಲ್ಲದಂತೆ, ನಮ್ಮ ಮತದಲ್ಲಿ ಇರುವ ದೇವರು ಪ್ರತ್ಯೇಕವಾದವನು ಎನ್ನುವಂತಹ ಭಾವವನ್ನು ಇಟ್ಟುಕೊಂಡು, ನಮ್ಮದು ಪ್ರತ್ಯೇಕವಾದ ಮತ ಎಂದು, ನಮ್ಮ ದೇವರು ಪ್ರತ್ಯೇಕವಾದಂತಹವನು ಎಂದು ಅಂದುಕೊಳ್ಳುತ್ತಿದ್ದಾರೆ. ಆದರೆ ಸರ್ವಜಗತ್ತನ್ನು ಸೃಷ್ಠಿಸಿದಂತಹವನು ಒಬ್ಬನೇ ಒಬ್ಬ ದೇವರು ಎನ್ನುವ ವಿಷಯವನ್ನು ಮರೆತುಹೋಗಿದ್ದಾರೆ.

ಆದರೆ ಇಸ್ಲಾಮ್ ಮತದಲ್ಲಿ ಕೂಡಾ ಸರ್ವವನ್ನು ಸೃಷ್ಠಿಸಿದವನು ದೇವರೇ ಎಂದು ಹೇಳುತ್ತಾರೆ. ಅದೇ ವಿಧವಾಗಿ ಕ್ರೈಸ್ಥವರಲ್ಲಿ ಕೂಡಾ ಸರ್ವವನ್ನು ಸೃಷ್ಠಿಸಿರುವುದು ದೇವರೇ ಎಂದು ಹೇಳುತ್ತಾರೆ. ಹಿಂದೂಮತದಲ್ಲಿ ಕೂಡಾ ಸೃಷ್ಠಿಕರ್ತ ದೇವರೇ ಎಂದು ಹೇಳುತ್ತಿದ್ದಾರೆ. ಆದರೆ ಅಲ್ಲೇನೋ ಎಲ್ಲರನ್ನೂ ಸೃಷ್ಠಿಸಿರುವಂತಹವನು ದೇವರೇ ಎಂದು ಹೇಳುತ್ತಾ, ಪ್ರತ್ಯೇಕವಾಗಿ ನಮ್ಮನ್ನು ಸೃಷ್ಠಿಸಿದ ದೇವರು ಬೇರೆ, ನಿಮ್ಮನ್ನು ಸೃಷ್ಟಿಸಿದ ದೇವರು ಬೇರೆ ಎನ್ನುವ ಭಾವ ಇಟ್ಟುಕೊಳ್ಳುವುದು ಬಹಳ ತಪ್ಪು. ಈ ವಿಧವಾಗಿ ಈಗ ನಮ್ಮಲ್ಲಿ ಇರುವ ಭಾವನೆಗಳಲ್ಲಿ ವ್ಯತ್ಯಾಸ ಬಂದು, ಅನೇಕ ವಿಧಗಳ ದ್ವೇಷಗಳು ಬೆಳಸಿಕೊಂಡು, ಹಾಗೇ ಮತ ದ್ವೇಷಗಳು ಬೆಳಸಿಕೊಂಡು ಒಬ್ಬರಿಗೊಬ್ಬರು ಹಿಂಸಿಸಿಕೊಳ್ಳುವ

ಸ್ಥಿತಿಗೆ ಬಂದಿದ್ದಾರೆ. ಇದು ಒಳ್ಳೆಯ ಪದ್ಧತಿ ಅಲ್ಲ. ನಿಮ್ಮ ದೇವರೇ, ನಮ್ಮ ದೇವರು, ನಮ್ಮ ದೇವರೇ ನಿಮ್ಮ ದೇವರು ಎನ್ನುವ ಭಾವನೆಯೊಂದಿಗೆ ನೀವು, ನಾವು ಒಂದೇ ಎನ್ನುವ ಐಕ್ಯತೆಯಿಂದ ನಾವೆಲ್ಲರೂ ದೈವಗ್ರಂಥದಲ್ಲಿ ಇರುವಂತಹ ವಿಷಯಗಳನ್ನು ಮತ್ತೊಬ್ಬರು ತಿಳಿದುಕೊಳ್ಳುತ್ತಾ, ಒಂದು ಮತದಲ್ಲಿ ಇರುವಂತಹ ಸಾರಾಂಶವನ್ನು ಇನ್ನೊಂದು ಮತದವರು ತಿಳಿದುಕೊಳ್ಳುತ್ತಾ, ಏಕತೆಯಾಗಿ ಇದ್ದೂ ದೇವರನ್ನು ಎಲ್ಲರೂ ತಿಳಿದುಕೊಳ್ಳಬೇಕೆನ್ನುವ ಉದ್ದೇಶ್ಯದಿಂದ ನಾವು ಈ ದಿನ ಯಾರೂ ಮಾಡಲಾರದಂತಹ ಕೆಲಸವನ್ನು ಮಾಡುತ್ತಿದ್ದೇವೆ. ಯಾರೂ ಮಾಡಲಾರದ ಕೆಲಸ ಎಂದರೆ ಏನೂ ಇಲ್ಲ, ಎಲ್ಲರೂ ಯಾರ ಮತಗಳ ಕುರಿತು ಅವರು ಹೇಳಿಕೊಳ್ಳುತ್ತಿರುತ್ತಾರೆ. ಆದರೇ ಈಗ ನಾವು ಹಿಂದೂ ಜ್ಞಾನವನ್ನೇ ಅಲ್ಲದೆ ಕ್ರೈಸ್ಥವ ಜ್ಞಾನವನ್ನು, ಇಸ್ಲಾಮ್ ಜ್ಞಾನವನ್ನು ಕುರಿತು ಕೂಡಾ ಹೇಳುತ್ತಿದ್ದೇವೆ. ಒಬ್ಬ ಹಿಂದೂ ಇಸ್ಲಾಮ್ ಮತವನ್ನು ಕುರಿತು ಹೇಳುವುದೇನು? ಎಂದು ಅಂದುಕೊಳ್ಳಬಾರದು. ಇಂದೂ ಎಂದರೇ **'ಜ್ಞಾನಿ'** ಎಂದು ಅರ್ಥ. ಇಂದೂ ಆದವನು ದೇವರಿಗೆ ಸಂಬಂಧಿಸಿದ ಜ್ಞಾನವನ್ನೇ ಹೇಳುತ್ತಾನೆ, ಆದ್ದರಿಂದ ಯಾವುದರಲ್ಲಾದರೂ ದೇವರಿಗೆ ಸಂಬಂಧಿಸಿದ ಜ್ಞಾನವನ್ನು ಹೇಳುವುದಕ್ಕೆ ಯಾವ ಇಂದುವಿಗಾದರೂ ಹಕ್ಕು ಇದೆ. ಇಸ್ಲಾಮ್ ಮತದಲ್ಲಿ ಇದು ದೇವರಿಗೆ ಸಂಬಂಧಿಸಿದ ಜ್ಞಾನ, ಸರ್ವಮಾನವರಿಗೂ ಹೇಳಿರುವಂತಹ ವಿಷಯ ಎಂದು ಪವಿತ್ರ ಖುರ್‌ಆನ್ ಗ್ರಂಥದಲ್ಲಿ ದೇವರು ಹೇಳುವಾಗ, ಸರ್ವ ಮಾನವರಿಗೂ ಎಂದು ಹೇಳಿದಾಗ ಅದು ನಿಮಗೂ ಸಂಬಂಧವೇ, ನನಗೂ ಸಂಬಂಧವೇ, ಪ್ರತಿ ಮುಸ್ಲೀಮ್‌ಗೂ ಸಂಬಂಧವೇ, ಪ್ರತಿ ಹಿಂದೂಗೂ ಸಂಬಂಧವೇ, ಪ್ರತಿ ಕ್ರೈಸ್ತವನಿಗೂ ಕೂಡಾ ಅದರಲ್ಲಿನ ಜ್ಞಾನವು ಸಂಬಂಧವೇ ಇರುತ್ತದೆ. ಆದ್ದರಿಂದ ಯಾರಾದರೂ ಮೂರು ದೈವಗ್ರಂಥಗಳನ್ನು ಕುರಿತು ಮಾತನಾಡುವ ಹಕ್ಕು ಎಲ್ಲರಿಗೂ ಇದೆ. ಎಲ್ಲರೂ ತಿಳಿದುಕೊಳ್ಳುವ ಹಕ್ಕು ಇದೆ. ತಿಳಿದುಕೊಂಡಿರುವುದನ್ನು ಎಲ್ಲರೂ ಹೊರಗೆ ಹೇಳಿಕೊಳ್ಳುವ ಹಕ್ಕು ಕೂಡಾ ಇದೆ. ಯಾರು ಹೇಳಿದರೂ ದೇವರ ಕುರಿತು ಹೇಳಿಕೊಳ್ಳುವುದೇ, ದೇವರ ಪವಿತ್ರತೆಯನ್ನು ಕುರಿತು ಹೇಳಿಕೊಳ್ಳುವುದೇ ಹೊರತು ಮತ್ತೊಂದು ಏನೂ ಇಲ್ಲ. ಆದ್ದರಿಂದ ದೇವರ ಪವಿತ್ರತೆಯನ್ನು ನಾವು

ಕೊಂಡಾಡುತ್ತಾ ಈಗ ಇಸ್ಲಾಮ್ ಮತದಲ್ಲಿ ಇರುವಂತಹ ಹೆಚ್ಚು ಕಡಿಮೆಗಳನ್ನು ತಿಳಿದುಕೊಂಡು, ಅದರಲ್ಲಿ ಯಾವಾದರೂ ತಪ್ಪುಗಳಿದ್ದರೇ ನಾವು ಹೊಂದಿ ಕೊಂಡು, ಇನ್ನೂ ಮುಂದಕ್ಕೆ ಹೋಗಬೇಕೆನ್ನುವ ಉದ್ದೇಶದಿಂದ ನಾವು ಈ ಪ್ರಯತ್ನ ಮಾಡುತ್ತಿದ್ದೇವೆ.

ಈಗ ಇಸ್ಲಾಮ್ ಸೋದರರು ಕೆಲವು ಮಂದಿ, ನಮ್ಮ ಇಸ್ಲಾಮ್ ಮತದಲ್ಲಿ ಪ್ರಾರ್ಥನೆ ಹೆಚ್ಚಾಗಿ ಇದೆ, ದೈವಜ್ಞಾನ ಕಡಿಮೆಯಾಗಿ ಇದೆ ಎಂದು ಹೇಳಿದ್ದಾರೆ. ನಾವು ಏನು ಹೇಳಿದ್ದೇವೆ ಎಂದರೆ ಪ್ರಾರ್ಥನೆ ಇದೆ ಮತ್ತು ದೈವಜ್ಞಾನವು ಇದೆ, ಎರಡೂ ಇವೆ ಎಂದು ಹೇಳಿದ್ದೇವೆ. ಅವರು ನಮಗೆ ಖುರ್‌ಆನ್ ಜ್ಞಾನ ತಿಳಿಯುತ್ತಿಲ್ಲ ಎಂದು ಅಂದರೆ ಅದರಲ್ಲಿನ ವಾಕ್ಯಗಳು ನೀವು ಅರ್ಥಮಾಡಿಕೊಳ್ಳದಿರುವಾಗ ಅವು ನಿಮಗೆ ತಿಳಿಯುತ್ತಿಲ್ಲ, ಆದರೆ ಅರ್ಥ ಮಾಡಿಕೊಂಡರೇ ಹಿಂದೂಮತದಲ್ಲಿ ಯಾವುದಾದರೇ ಇದೆಯೋ ಅದೇ ಇಸ್ಲಾಮ್ ಮತದಲ್ಲಿ ಇದೆ, ಇಸ್ಲಾಮ್ ಮತದಲ್ಲಿ ಯಾವುದಾದರೇ ಇದೆಯೋ ಅದೇ ಕ್ರೈಸ್ಥವಮತದಲ್ಲಿ ಇದೆ, ಎಲ್ಲ ಮತಗಳಲ್ಲಿ ಇರುವುದು ಒಂದೇ ಎಂದು ತಿಳಿಯುತ್ತದೆ. ನಿಮಗೆ ಕೊಟ್ಟಿರುವ **"ಕಲಿಯುಗ ಎಂದಿಗೂ ಯುಗಾಂತ ಆಗುವುದಿಲ್ಲ"** ಎನ್ನುವ ಗ್ರಂಥದಲ್ಲಿ ನಾನು ಒಂದು ಮಾತನ್ನು ಬರೆದಿದ್ದೇನೆ. ಅದು ಏನೆಂದರೆ! ಒಂದು ತೊಲ ಬಂಗಾರದಿಂದ ನಾವು ಒಂದು ಸರವನ್ನು ಮಾಡಿದ್ದೇವೆ. ಹಾಗೇ ಅದೇ ತೊಲ ಬಂಗಾರದಿಂದ ಇನ್ನೊಂದು ಸರವನ್ನು ಮಾಡಿದ್ದೇವೆ. ಎರಡು ಸರಗಳ ಪರಿಮಾಣದಲ್ಲಿ ವ್ಯತ್ಯಾಸ ಇರಬಹುದು, ಆದರೆ ತೂಕದಲ್ಲಿ ಎಲ್ಲಾ ಒಂದೇ, ಪದಾರ್ಥದಲ್ಲಿ ಕೂಡಾ ಎರಡೂ ಒಂದೇ ಎಂದು ತಿಳಿಯುತ್ತದೆ. ಒಂದು ತೊಲದಲ್ಲಿ ಒಂದು ಡಾಲರ್ ಮಾಡಿದಾಗ, ಅಷ್ಟೇ ತೂಕದಿಂದ ಇನ್ನೊಂದು ಡಾಲರ್‌ನ್ನು ಸಹ ತಯಾರಿ ಮಾಡಿದ್ದಾರೆ. ಆ ವಿಧವಾಗಿ ಮೂರು ವಿಧಗಳಾಗಿ ಮೂರು ಡಾಲರ್‌ಗಳು ಇವೆ, ಆದರೇ ಅವು ಬೇರೆ ಬೇರೆಯಾಗಿ ಕಾಣಿಸುತ್ತಿವೆ. ಅಷ್ಟು ಮಾತ್ರಕ್ಕೆ ಅವು ಬಂಗಾರು ಅಲ್ಲ ಎಂದುಕೊಳ್ಳಬೇಡಿ. ಎಲ್ಲದರಲ್ಲಿ ಇರುವುದು ಬಂಗಾರವೇ, ಎಲ್ಲದರಲ್ಲಿ ಇರುವುದು ಕೂಡಾ ಒಂದೇ ತೂಕ ಇರುವ ಬಂಗಾರವೇ ಇದೆ, ಆದ್ದರಿಂದ ಯಾವು

ದರಲ್ಲಿಯೂ ವ್ಯತ್ಯಾಸ ಇಲ್ಲ ಎಂದು ಕೂಡಾ ತಿಳಿಯುತ್ತದೆ. ಈಗ ನಾನು ಖುರ್‌ಆನ್ ಕುರಿತು ಹೇಳಿದರೇ, ಹಿಂದೂಮತದಲ್ಲಿ ನಾವು ಯಾವುದನ್ನು ಅರ್ಥ ಮಾಡಿಕೊಂಡಿದ್ದೇವೋ, ಹಿಂದೂಮತದಲ್ಲಿ ಯಾವ ದೇವರು ಇದ್ದಾನೆ ಎಂದು ಹೇಳಿದ್ದೇವೋ, ಅದೇ ದೇವರೇ ಇಸ್ಲಾಮ್ ಮತದಲ್ಲಿ ಕೂಡಾ ಇದ್ದಾನೆ. ಇಸ್ಲಾಮ್ ಮತದಲ್ಲಿ ಇರುವವರು ಪ್ರತಿಯೊಬ್ಬರು ಮುಸ್ಲೀಮ್ ಎಂದು ಹೇಳುತ್ತಿದ್ದಾರೆ. ಮುಸ್ಲೀಮ್ ಎಂದರೇ ದೇವರ ಮೇಲೆ ವಿಶ್ವಾಸ ಹೊಂದಿದವನನ್ನು ನಾವು ಮುಸ್ಲೀಮ್ ಎಂದು ಹೇಳುತ್ತಿದ್ದೇವೆ. ಅಂದರೇ ದೇವರ ಮೇಲೆ ದೇವರ ಜ್ಞಾನದ ಮೇಲೆ ಆಸಕ್ತಿ ಹೊಂದಿದವನನ್ನು ಮುಸ್ಲೀಮ್ ಎನ್ನುತ್ತಿದ್ದೇವೆ.

ದೇವರ ಜ್ಞಾನ ತಿಳಿದುಕೊಂಡವನು ಯಾರಾದರೂ ಅವನನ್ನು ಇಂದೂ ಎಂದೇ ಹೇಳಬೇಕು. ಆದ್ದರಿಂದ ಇಸ್ಲಾಮ್ ಮತದಲ್ಲಿ ಇರುವ ಜ್ಞಾನವನ್ನು ತಿಳಿದುಕೊಂಡ ಯಾರಾದರೂ ಇಂದೂಗಳೇ! ಇಸ್ಲಾಮ್ ಮತದಲ್ಲಿ ಇರುವ ಜ್ಞಾನವನ್ನು ಅರ್ಥ ಮಾಡಿಕೊಂಡರೂ ನಾವು ಮುಸ್ಲೀಮ್‌ರೇ. ಮುಸ್ಲೀಮ್ ಎಂದರೂ, ಇಂದೂ ಎಂದರೂ ಈ ಎರಡೂ ಒಂದೇ ಅರ್ಥದಿಂದ ಕೂಡಿಕೊಂಡಿರುವವೇ ಆದರೆ, ಮುಸ್ಲೀಮ್ ಎಂದರೇ ಬೇರೆ, ಇಂದೂ ಎಂದರೇ ಬೇರೆ ಎನ್ನುವಂತಹ ಅರ್ಥ ಏನೂ ಇಲ್ಲ. ಇಂದೂ ಎಂದರೆ ಜ್ಞಾನಿ, ಮುಸ್ಲೀಮ್ ಎಂದರೆ ಕೂಡಾ ದೈವತ್ವವನ್ನು ತಿಳಿದುಕೊಂಡ ಜ್ಞಾನಿ ಎಂದು ಅರ್ಥ. ಇಸ್ಲಾಮ್ ಮತದಲ್ಲಿ ಮುಸ್ಲೀಮ್ ಎಂದು ಹೆಸರು ಇಟ್ಟಿದ್ದಾರೆ. ಹಿಂದೂ ಮತದಲ್ಲಿ 'ಇಂದೂ' ಎಂದು ಹೆಸರು ಇಟ್ಟಿದ್ದಾರೆ. ಹೆಸರುಗಳು ಬೇರೆ ಬೇರೆ ಆದರೂ ಅರ್ಥ ಮಾತ್ರ ಒಂದೇ. ಈಗ ನಾನು ಇಸ್ಲಾಮ್ ಮತದಲ್ಲಿ ಇರುವಂತಹ ಜ್ಞಾನವನ್ನು ತಿಳಿದುಕೊಂಡಿದ್ದೇನೆ ಆದ್ದರಿಂದ ನಾನು ನಿಜವಾದ ಮುಸ್ಲೀಮ್. ಅದೇ ಹಿಂದೂ ಮತದಲ್ಲಿ ಇರುವಂತಹ ಜ್ಞಾನವನ್ನು ಯಾರಾದರೂ ತಿಳಿದುಕೊಂಡರೂ, ಯಾವ ಮುಸ್ಲೀಮ್ ಆದರೂ ಆತನು ನಿಜವಾದ ಹಿಂದೂನೇ. ಆದರೆ ಹಿಂದೂ ಎಂದರೂ, ಮುಸ್ಲೀಮ್ ಎಂದರೂ ಇಬ್ಬರೂ ಒಂದೇ ಜ್ಞಾನ ಹೊಂದಿರುವಂತಹವರೇ ಆದರೇ ಬೇರೆಬೇರೆ ಅಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ಅವರು ಬೇರೆ ಅಲ್ಲ ಇವರು ಬೇರೆ ಅಲ್ಲ ಎನ್ನುವ ಭಾವದಿಂದ ನಾವು ದೈವಜ್ಞಾನವನ್ನು ಅರ್ಥ ಮಾಡಿಕೊಳ್ಳಬೇಕು.

ಈಗ ಪವಿತ್ರ ಖುರಾನ್ ಗ್ರಂಥದಲ್ಲಿರುವಂತಹ ವಿಷಯವನ್ನು ನಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪವಿತ್ರ ಖುರಾನ್ ಗ್ರಂಥ ಬಹಳ ವಿಶೇಷವಾದುದು. ಅದರಲ್ಲಿ ಬಹಳ ಪವಿತ್ರವಾದ ವಾಕ್ಯಗಳು ಇವೆ. ಆ ವಾಕ್ಯಗಳನ್ನು **"ಅಂತಿಮ ದೈವಗ್ರಂಥದಲ್ಲಿ ಜ್ಞಾನ ವಾಕ್ಯಗಳು", "ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು"** ಎಂದು ನಾವು ಗ್ರಂಥ ರೂಪದಲ್ಲಿ ಬರೆದಿದ್ದೇವೆ. ಏಕೆಂದರೇ ಇಸ್ಲಾಮ್ ಮತದಲ್ಲಿ ಖುರ್‌ಆನ್ ಕುರಿತು ಬಹಳ ಮಂದಿ ಬಹಳ ವ್ಯಾಖ್ಯಾನಗಳು ಹೇಳಿಕೊಂಡರೂ, ಖುರ್‌ಆನ್‌ನಲ್ಲಿ ಸಂಪೂರ್ಣವಾದ ಜ್ಞಾನ ನಮಗೆ ಅರ್ಥವಾಗಲಿಲ್ಲ. ಆದ್ದರಿಂದ ಅರ್ಥವಾಗುವ ರೀತಿಯಲ್ಲಿ ನಾವು ಇದನ್ನು ಎರಡು ಗ್ರಂಥಗಳ ರೂಪದಲ್ಲಿ ಬರೆದಿದ್ದೇವೆ. ಈಗ ಆ ಗ್ರಂಥದಲ್ಲಿ ಇರುವಂತಹ ವಾಕ್ಯಗಳು ನಾವು ಹೇಳಿಕೊಳ್ಳಬೇಕಾಗಿ ಬಂದಿದೆ. ಈಗ ಪವಿತ್ರ ಇಸ್ಲಾಮ್ ಮತದಲ್ಲಿ ಇರುವಂತಹ ಕೆಲವು ಸೂತ್ರಗಳನ್ನು ನಾವು ಹೇಳಿಕೊಂಡರೆ, ಆ ಸೂತ್ರಗಳೆಲ್ಲಾ ಪವಿತ್ರ ಖುರ್‌ಆನ್ ಗ್ರಂಥದಲ್ಲಿ ಇವೆ. ಆ ಖುರ್‌ಆನ್ ಗ್ರಂಥದಲ್ಲಿ ಇರುವಂತಹ ವಿಷಯಗಳನ್ನು ನಾವು ಪರಿಶೀಲಿಸಿ ನೋಡಿದರೆ, ಅದರಲ್ಲಿ ಪ್ರತಿ ಒಂದೂ ದೇವರಿಗೆ ಸಂಬಂಧಿಸಿದ ವಿಷಯಗಳು ಹೊರತು ಮತ್ತೊಂದು ಯಾವುವೂ ಇಲ್ಲ. ಆದ್ದರಿಂದ ನಾವು ಒಂದೊಂದು ವಾಕ್ಯವನ್ನು ತಿಳಿದುಕೊಂಡು ನೋಡಬೇಕಾದ ಅವಶ್ಯ ಎಷ್ಟೋ ಇದೆ. ಆ ವಿಧವಾಗಿ ನೋಡುವುದಾದರೇ, ಅಂದರೇ ಪ್ರತಿಯೊಬ್ಬರೂ ಖುರ್‌ಆನ್ ಗ್ರಂಥದಲ್ಲಿನ ವಾಕ್ಯಗಳು ತಿಳಿದುಕೊಳ್ಳುವುದಾದರೇ, ದೇವರ ಜ್ಞಾನ ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಈಗ ಹಿಂದೂಗಳನ್ನು ಕುರಿಸಿ ಮುಸ್ಲೀಮ್‌ವೊಂದರ ಮಾತುಗಳು ನಮಗೆ ಹೇಳುವುದು ಸರಿಯೇನಾ ಎಂದು ನೀವು ಅಂದುಕೊಂಡರೆ ಅದು ತಪ್ಪಾಗುತ್ತದೆ. ಇದು ಕೂಡಾ ಹಿಂದೂಗಳ ಜ್ಞಾನವೇ ಎಂದು ನೀವು ಏಕೆ ಅಂದುಕೊಳ್ಳಬಾರದು? ಹಿಂದೂಗಳ ಭಗವದ್ಗೀತೆಯಲ್ಲಿ ಇರುವ ಜ್ಞಾನವೇ ಎಂದು ಏಕೆ ನೀವು ಅಂದುಕೊಳ್ಳಬಾರದು? ಹಾಗೆ ಅಂದುಕೊಳ್ಳದೇ ಹೋಗುವುದೇ ದೊಡ್ಡ ಅಜ್ಞಾನ. ನಾವು ಬೇರೆ ಜ್ಞಾನವನ್ನು ಬೋಧಿಸುತ್ತಿದ್ದೇವೆಂದು ಇವರು (ಹಿಂದೂಗಳು) ಹೇಳುತ್ತಿದ್ದಾರೆ. ಇವರು ಹಿಂದೂ ಮತದಲ್ಲಿ ಗುರುವಾಗಿ ಇದ್ದು ಬೇರೆ ಮತವನ್ನು ಪ್ರಚಾರ ಮಾಡುತ್ತಿದ್ದಾರೆ ಎಂದು ಕೆಲವು ಮಂದಿ ನಮ್ಮನ್ನು ಕುರಿತು ಹೇಳಿದ್ದಾರೆ.

ನಾವು ಆ ವಿಧವಾಗಿ ಹೇಳಲಿಲ್ಲ, ಎಲ್ಲರೂ ಒಂದೇ ಎನ್ನುವ ಭಾವನೆಯಿಂದಲೇ ಹೇಳುತ್ತಿದ್ದೇವೆ. ಬೇರೆ ಮತಸ್ಥರನ್ನು ಯಾರನ್ನೂ ಹಿಂದೂಗಳಾಗಿ ಬದಲಾಯಿಸಲಿಲ್ಲ. ಹಾಗೇ ಹಿಂದೂಗಳನ್ನು ಇತರ ಮತದೊಳಗೆ ಬದಲಾಯಿಸಲಿಲ್ಲ. ನೀವೆಲ್ಲಾ ಮತಗಳನ್ನಿಟ್ಟು, ಪಾರ್ಟಿಗಳನ್ನಿಟ್ಟು ಬಾಂಬುಗಳು ಹಾಕಿಸಿಕೊಳ್ಳುತ್ತಿದ್ದಾರೆ, ಅಮಾಯಕ ಪ್ರಜೆಗಳನ್ನು ಸಾಯಿಸುತ್ತಿದ್ದೀರ. ನಾವು ಹಾಗೆ ಮಾಡುತ್ತಿಲ್ಲ. ನಮ್ಮ ಹತ್ತಿರಕ್ಕೆ ಬಂದಿರುವವರೆಲ್ಲಾ ಐಕ್ಯಮತ್ಯವಾಗಿ ನಮ್ಮಲ್ಲಿ ಬೆರೆತು ಹೋಗುತ್ತಿದ್ದಾರೆ. ನಮ್ಮೊಂದಿಗೆ ಸೋದರ ಭಾವದಿಂದ, ಸ್ನೇಹ ಭಾವದಿಂದ ನಮ್ಮ ಹತ್ತಿರಕ್ಕೆ ಬರುತ್ತಿದ್ದಾರೆ. ನಿಮ್ಮ ಹತ್ತಿರಕ್ಕೆ ಯಾರೂ ಬರುತ್ತಿಲ್ಲ ನೋಡಿರಿ ಎಂದು ನಾವು ಹೇಳುತ್ತಿದ್ದೇವೆ. ನಮ್ಮ ಹತ್ತಿರಕ್ಕೆ ದೇವರು ಒಬ್ಬನೇ ಎನ್ನುವ ಭಾವನೆಯಿಂದ ಬರುತ್ತಿದ್ದಾರೆ. ಜ್ಞಾನ ಎನ್ನುವ ಬಂಧುತ್ವದಿಂದ ಬರುತ್ತಿದ್ದಾರೆ ಅಷ್ಟು ಹೊರತು ಬೇರೆ ದ್ವೇಷ ಭಾವನೆಯಿಂದ ಬರಲಿಲ್ಲ. ನಿಮ್ಮ ಹತ್ತಿರಕ್ಕೆ ಮತದ್ವೇಷ ಇಟ್ಟುಕೊಂಡು ಬರುತ್ತಿದ್ದಾರೆ, ನೀವು ಬೇರೆ, ನಾವು ಬೇರೆ ಎಂದು ಬರುತ್ತಿದ್ದಾರೆ, ನೀವು ಚಿಕ್ಕದಾಗಿ ಮಾಡಿದರೇ, ನಾವು ದೊಡ್ಡದಾಗಿ ಮಾಡುತ್ತೇವೆ ಎಂದು ನೀವು ಚಿಕ್ಕ ಬಾಣ ಹಾಕಿದರೇ, ನಾವು ದೊಡ್ಡ ಬಾಂಬೇ ಹಾಕುತ್ತೇವೆಂದು ನಿಮ್ಮ ಮೇಲೆ ಹಾಕುತ್ತಿದ್ದಾರೆ. ಅಂದರೇ ನೀವು ಮತ ದ್ವೇಷಗಳನ್ನಿಟ್ಟು ಎಲ್ಲೋ ಕುಳಿತುಕೊಂಡಿದ್ದೀರ, ಅಮಾಯಕ ಪ್ರಜೆಗಳು ಸತ್ತುಹೋಗುತ್ತಿದ್ದಾರೆ. ಇಂತಹವು ಇಲ್ಲದಂತೆ ಎಲ್ಲೂ ಯಾವ ದುರ್ಘಟನೆಗಳು ನಡೆಯದಂತೆ, ಅಮಾಯಕ ಪ್ರಜೆಗಳು ಸತ್ತುಹೋಗದಂತೆ ಎಲ್ಲರೂ ಸಮಾನವಾಗಿ ಇರಬೇಕು ಎಂದರೇ ಹಿಂದೂಗಳನ್ನು ಮುಸ್ಲೀಮ್‌ರು ಅರ್ಥ ಮಾಡಿಕೊಳ್ಳಬೇಕು, ಹಾಗೇ ಮುಸ್ಲೀಮ್‌ರನ್ನು ಹಿಂದೂಗಳು ಅರ್ಥ ಮಾಡಿಕೊಳ್ಳಬೇಕು, ಮುಸ್ಲೀಮ್ ಹಿಂದೂ ಎಂದರೇ ಇಬ್ಬರೂ ಒಂದೇ ಎಂದು ಅರ್ಥ ಮಾಡಿಕೊಳ್ಳಬೇಕು. ಆ ವಿಷಯಗಳನ್ನು ತಿಳಿಸುವುದಕ್ಕೋಸ್ಕರವೇ ನಾವು ಈಗ ಈ ಕಾರ್ಯಕ್ರಮವನ್ನು ಇಟ್ಟು ನಿಮಗೆ ಜ್ಞಾನವನ್ನು ತಿಳಿಸುವುದು ನಡೆಯುತ್ತಿದೆ.

ಈಗ ಈ ಕಾರ್ಯಕ್ರಮ ಮುಖ್ಯ ಉದ್ದೇಶ್ಯ ಏನು ಎಂದರೇ ನಮ್ಮ ಮುಸ್ಲೀಮ್ ಸೋದರರು ಕೆಲವರು **"ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀ"**

ಎನ್ನುವ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಅವರು ಖುರ್‌ಆನ್ ಜ್ಞಾನ ನಮಗೆ ಅರ್ಥವಾಗುತ್ತಿಲ್ಲ ಎಂದು ಕೇಳಿದ್ದಾರೆ. ಆದ್ದರಿಂದ ಪವಿತ್ರ ಖುರ್‌ಆನ್ ಗ್ರಂಥದಿಂದ ಜ್ಞಾನವನ್ನು ನಾವು ಪ್ರಜೆಗಳಿಗೆ ತಿಳಿಸಬೇಕೆಂದುಕೊಂಡಿದ್ದೇವೆ. ಈ ವಿಧವಾಗಿ ಹಿಂದೂಗಳಿಗಾಗಲೀ, ಮುಸ್ಲೀಮ್‌ರಿಗಾಗಲೀ ಎಲ್ಲರಿಗೂ ಜ್ಞಾನವನ್ನು ತಿಳಿಸಬೇಕೆಂದು ಅಂದುಕೊಂಡಿದ್ದೇವೆ. "ಖುರ್‌ಆನ್‌ನಲ್ಲಿ ಇರುವಂತಹ ಸಿಕ್ಕು ವಿಷಯಗಳನ್ನು ಯಾರಾದರೂ ನಮ್ಮನ್ನು ಪ್ರಶ್ನಿಸಿದರೇ, ನಾವು ಉತ್ತರ ಹೇಳಲಾರದ ಸ್ಥಿತಿಯಲ್ಲಿದ್ದೇವೆ" ಎಂದು ಮುಸ್ಲೀಮ್‌ರು ಕೇಳಿರುವುದರಿಂದ ಜ್ಞಾನ ವಿಷಯದಲ್ಲಿ ನಮ್ಮ ಕೈಲಾದಷ್ಟು ಸಹಾಯ ಮಾಡುತ್ತೇವೆಂದು ಅವರಿಗೆ ಹೇಳಿದ್ದೇವೆ. ಈಗ ನಾವು ಅದೇ ವಿಧಾನವನ್ನು ಆಚರಿಸುತ್ತಾ, ಖುರಾನ್‌ಗೆ ಸಂಬಂಧಿಸಿದ ಜ್ಞಾನ ಅರ್ಥಗಳೊಂದಿಗೆ ಹೇಳುತ್ತಿದ್ದೇವೆ. "ಎದುರಾಡದ ಜ್ಞಾನವನ್ನು ದೇವರು ತಿಳಿಸುತ್ತೇನೆಂದು" ನಿಮಗೆ ಹೇಳಿದಾಗ, ಎಲ್ಲಿಯೂ ಯಾವ ಪ್ರಶ್ನೆ ಉಳಿಯಬಾರದು, ಯಾರು ಯಾವ ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರ ಹೇಳುವಂತಹ ಸಾಮರ್ಥ್ಯದಿಂದ ನಾವು ಇರಬೇಕು. ಅಂತಹ ಸಾಮರ್ಥ್ಯ ನಮಗಿರಬೇಕೆಂದರೆ ಖುರಾನ್ ಗ್ರಂಥದಿಂದ ಸಂಪೂರ್ಣವಾದ ಜ್ಞಾನ ನಮಗೆ ತಿಳಿದಿರಬೇಕು. ಪ್ರತಿ ಹಿಂದೂಗೂ, ಪ್ರತಿ ಮುಸ್ಲೀಮ್‌ಗೂ ಖುರಾನ್ ಗ್ರಂಥದಲ್ಲಿ ಇರುವ ಪವಿತ್ರ ವಾಕ್ಯಗಳನ್ನು ಕುರಿತು ಅರ್ಥಗಳೆಲ್ಲವೂ ಪೂರ್ತಿಯಾಗಿ ತಿಳಿದಿರಬೇಕು. ಯಾರಾದರೂ ಖುರಾನ್‌ನಲ್ಲಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳಲಾರದ ಸ್ಥಿತಿಯಲ್ಲಿ ಬಹಳ ಜನ ಇದ್ದಾರೆ. ಅಂತಹ ಪರಿಸ್ಥಿತಿ ಇಲ್ಲದಂತೆ ಎಲ್ಲರೂ ಸರಿಯಾದ ಉತ್ತರ ಹೇಳುವ ರೀತಿಯಲ್ಲಿ ಇರಬೇಕೆಂದು ನಾವು ಹೇಳುತ್ತಿದ್ದೇವೆ.

ಒಂದಾನೊಂದು ದಿನ ಮುಹಮ್ಮದ್ ಪ್ರವಕ್ತರವರು ಅನಕ್ಷರಸ್ಥನು, ಓದು ಇಲ್ಲದಂತಹ ವ್ಯಕ್ತಿಯಾದರೂ, ಆತನು ಈ ದಿನ ಯಾವ ಶಾಸ್ತ್ರಜ್ಞನು ಹೇಳದ ವಿಧಾನವನ್ನು ಆ ದಿನ ಹೇಳಿದ್ದಾನೆ. ಆತನು ಮರಣಿಸಿ 1400 ವರ್ಷಗಳಾದರೂ, ಆತನು ಆ ದಿನ ಹೇಳಿದ ವಾಕ್ಯಗಳೊಂದರ ರಹಸ್ಯಗಳನ್ನು ಯಾವ ಶಾಸ್ತ್ರಜ್ಞನೂ ಈದಿನಕ್ಕೂ ಸಹ ಕಂಡುಕೊಳ್ಳಲಾರದೆ ಹೋಗುತ್ತಿದ್ದಾನೆ.

ಅದನ್ನು ಕುರಿತು ಹೇಳಲಾರದೆ ಹೋಗುತ್ತಿದ್ದಾನೆ. ಅಂದರೆ ಅಷ್ಟು ಶ್ರೇಷ್ಠ ಭಾವನೆಗಳು, ಅಷ್ಟು ದೊಡ್ಡ ರಹಸ್ಯಗಳನ್ನು ತಿಳಿಸಿರುವಂತಹ ಪ್ರವಕ್ತರವರು ಆ ದಿನ ಅನಕ್ಷರಸ್ಥನಾದರೂ ಆತನ ಬಾಯಿಂದ ಈ ದೈವ ವಾಕ್ಕುಗಳು ಹೊರಗೆ ಬರುವುದು ನಡೆದಿದೆ. ಆ ವಾಕ್ಯಗಳನ್ನು ಕುರಿತು ನಾವು ಈಗ ತಿಳಿದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅಂತಹ ವಾಕ್ಯಗಳು ನಾವು ಗಮನಿಸಿದಂತಾದರೆ ಅವು 114 ಅಧ್ಯಾಯಗಳಲ್ಲಿ ಖುರಾನ್ ಗ್ರಂಥದಲ್ಲಿ ಹೇಳಲ್ಪಟ್ಟಿವೆ. 114 ಅಧ್ಯಾಯಗಳಲ್ಲಿ ಅನೇಕ ಆಯತ್‌ಗಳ ರೂಪದಲ್ಲಿ ದೈವಜ್ಞಾನವಿದ್ದರೂ ಪ್ರತಿ ವಾಕ್ಯ ನಾವು ಅರ್ಥಮಾಡಿಕೊಂಡು, ಇತರರಿಗೂ ಸಹ ಅರ್ಥ ಆಗುವ ರೀತಿಯಲ್ಲಿ ಹೇಳಿಕೊಂಡರೆ ಖುರಾನ್‌ನಲ್ಲಿ ಇರುವ ಹಿರಿಮೆ ನಮಗೆ ತಿಳಿಯುತ್ತದೆ. ಈ ಖುರಾನ್ ಹಿರಿಮೆಯನ್ನು ನಾವು ತಿಳಿಸುತ್ತಾ ಹೋದರೆ, ನಮ್ಮ ಶಕ್ತಿ ಸಾಲುವುದಿಲ್ಲ. ಏಕೆಂದರೆ ಭಗವದ್ಗೀತೆಯಲ್ಲಿ ಎಷ್ಟು ಸಾರಾಂಶವಿದೆಯೋ ಅಷ್ಟು ಸಾರಾಂಶ ಖುರಾನ್‌ನಲ್ಲಿ ಸಹ ಇದೆ. ದೇವರನ್ನು ಕುರಿತು ನಾವು ಪೂರ್ತಿಯಾಗಿ ಹೇಳಲಾರೆವು. ಏಕೆಂದರೆ ದೇವರು ಎಲ್ಲರಿಗಿಂತ ದೊಡ್ಡವನು, ಎಲ್ಲರಿಗಿಂತ ಶಕ್ತಿವಂತನು ಆದ್ದರಿಂದ ಆತನನ್ನು ಕುರಿತು ಪೂರ್ತಿಯಾಗಿ ಹೇಳುವ ಅರ್ಹತೆ ನಮಗ್ಯಾರಿಗೂ ಇಲ್ಲ. ಆತನ ಹಿರಿಮೆಯನ್ನು ಪೂರ್ತಿ ಹೇಳಲಾರೆವು. ಆದರೆ ಸ್ವಲ್ಪಕ್ಕೆ ಸ್ವಲ್ಪ ಹೇಳಿಕೊಳ್ಳುವುದಕ್ಕೆ ನಾವು ಪ್ರಯತ್ನವನ್ನು ಮಾಡೋಣ.

ಈಗ ಈ ಖುರ್‌ಆನ್ ಕುರಿತು ಪ್ರಜೆಗಳಲ್ಲಿ ಎಲ್ಲಿಯವರೆಗು ಅವಗಾಹನೆ ಇದೆಯೆಂದು ನೋಡಿದರೆ, ಕೇವಲ ಶೇ. 5ರಷ್ಟು ಮಾತ್ರವೇ ಅರ್ಥವಾಗಿದೆಯೆಂದು, ಉಳಿದ ಶೇ. 95ರಷ್ಟು ಅರ್ಥ ಆಗಲಿಲ್ಲವೆಂದು ಅವರು ಆಚರಿಸುವುದು ಹೊರತು ಖುರ್‌ಆನ್‌ನಲ್ಲಿ ಪೂರ್ತಿ ಸಮಾಚಾರವನ್ನು ಇವರು ಸ್ವೀಕರಿಸುತ್ತಿಲ್ಲ. ಸರಿ ಈ ದಿನ ಹೆಚ್ಚು ಆಚರಣೆ ಹೊಂದಿದವರು ಮುಸ್ಲೀಮ್‌ರೇ ಎಂದು ಹೇಳಬಹುದು. ಭಕ್ತಿಮಾರ್ಗದಲ್ಲಿ ಹೆಚ್ಚು ಆಚರಣೆ ಹೊಂದಿರುವಂತಹವರು ಮುಸ್ಲೀಮ್‌ರೇ ಎನ್ನುವ ವಿಷಯವನ್ನು ನಾವು ಹೇಳಿದ್ದೇವೆ. ಆ ಲೆಕ್ಕದ ಪ್ರಕಾರ ಹೋದರೆ ಇಸ್ಲಾಮ್ ಮತದಲ್ಲಿ ಇರುವವರು ಹೆಚ್ಚು ಆಚರಣೆ ಹೊಂದಿದ್ದರೂ, ಅವರ ಆಚರಣೆ ಹದೀಸು ವಾಕ್ಯಗಳ ಮೇಲೆ ಆಧಾರಪಟ್ಟಿದೆ, ಆದರೆ ಖುರಾನ್

ವಾಕ್ಯಗಳ ಮೇಲೆ ಹೆಚ್ಚಾಗಿ ಆಧಾರಪಟ್ಟಿಲ್ಲ ಎಂದು ಹೇಳುತ್ತಿದ್ದೇವೆ. ಹದೀಸುಗಳು ಎಂದರೆ ಏನೋ ನಾವು "ಕಲಿಯುಗ" ಗ್ರಂಥದಲ್ಲಿ ಬರೆದಿದ್ದೇವೆ. ಹಿಂದೂ ಸಾಂಪ್ರದಾಯಗಳು ಹೇಗೆ ಇವೆಯೋ ಹಾಗೇ ಮುಸ್ಲೀಮ್‌ರಿಗೂ ಕೂಡಾ ಕೆಲವು ಸಾಂಪ್ರದಾಯಗಳು ಇವೆ. ಸಾಂಪ್ರದಾಯಗಳಲ್ಲಿ ಹಿಂದೂಗಳು ಕೆಲವನ್ನು ಆಚರಿಸುತ್ತಿದ್ದಾರೆ, ಆದರೆ ಎಲ್ಲರಿಗೂ ಪೂರ್ತಿಯಾಗಿ ತಿಳಿದಿಲ್ಲವೆಂದೇ ಹೇಳಬೇಕು. ಹಾಗೇ ಇಸ್ಲಾಮ್ ಮತದಲ್ಲಿ ಕೂಡಾ ಕೆಲವು ಸಾಂಪ್ರದಾಯಗಳು ಇವೆ, ಅವುಗಳನ್ನೇ 'ಹದೀಸುಗಳು' ಎನ್ನುತ್ತಾರೆ. ಆ ಹದೀಸುಗಳನ್ನು ಆಚರಿಸುತ್ತಿದ್ದಾರೆ ಆದರೆ ಅವುಗಳ ವಿವರ ಕೂಡಾ ಪೂರ್ತಿಯಾಗಿ ತಿಳಿದಿಲ್ಲ. ಕೆಲವು ಸಾಂಪ್ರದಾಯಗಳು ಹಿಂದೂಗಳಲ್ಲಿ ಹೇಗೆ ಬಂದಿವೆ ಎಂದರೆ ಪುರಾಣಗಳಿಂದ, ವೇದಗಳಿಂದ ಬಂದಿವೆ. ಆದರೆ ಭಗವದ್ಗೀತೆಯಿಂದ ಸಾಂಪ್ರದಾಯಗಳು ಯಾವೂ ಬರಲಿಲ್ಲ. ಭಗವದ್ಗೀತೆಯಲ್ಲಿ ಒಂದೇ ಒಂದು ಜ್ಞಾನ ಹೊರತು ಬೇರೆ ಯಾವುದೂ ಇಲ್ಲ. ಪ್ರಪಂಚದಲ್ಲಿ ಜೀವಿಸುವ ಸಾಂಪ್ರದಾಯಗಳು ಯಾವೂ ಕೂಡಾ ಭಗವದ್ಗೀತೆಯಲ್ಲಿ ಇಲ್ಲ. ಪ್ರಪಂಚದಲ್ಲಿ ನಾವು ಯಾವ ವಿಧವಾಗಿ ಮಾತನಾಡಬೇಕು, ಯಾವ ಕೆಲಸಗಳನ್ನು ಮಾಡಬೇಕು, ಹೇಗೆ ಇರಬೇಕು ಎನ್ನುವವು ಎಲ್ಲಾ ನಮಗೆ ಪುರಾಣಗಳಿಂದ, ವೇದಗಳಿಂದ ಬಂದಿವೆ. ಒಂದು ಆರಾಧನೆಯನ್ನು ನಾವು ಆಚರಿಸಬೇಕೆಂದರೇ, ನಮಗೆ ವೇದಗಳು, ಯಜ್ಞಗಳು ಹೇಳುವುದರಿಂದ ಆ ವಿಧಾನಗಳನ್ನೇ ನಾವು ಆಚರಿಸುತ್ತಿದ್ದೇವೆ. ಆ ಆಚರಣೆಗಳೇ ನಮಗೆ ಸಾಂಪ್ರದಾಯಗಳಾಗಿ ಇವೆ. ಆ ಸಾಂಪ್ರದಾಯಗಳು ಹಿಂದೂಗಳಿಗೆ ಪ್ರತ್ಯೇಕವಾಗಿ ಇವೆ. ಹಾಗೇ ಇಸ್ಲಾಮ್ ಮತದಲ್ಲಿ ಅವರಿಗೆ ಪ್ರತ್ಯೇಕವಾಗಿ ಇವೆ. ಹಾಗೇ ಕ್ರೈಸ್ತವ ಮತದಲ್ಲಿ ಕೂಡಾ ಪ್ರತ್ಯೇಕವಾಗಿ ಇವೆ. ಈ ಸಾಂಪ್ರದಾಯ ಗಳಿಂದಲೇ ನಾವು ಬೇರೆಬೇರೆ ಮನುಷ್ಯರಾಗಿ ಪ್ರವರ್ತಿಸುತ್ತಿದ್ದೇವೆ. ಬೇರೆಬೇರೆ ಮತಗಳಾಗಿ ನಾವು ಸೀಳಿಹೋಗಿದ್ದೇವೆ. ಈ ಸಾಂಪ್ರದಾಯಗಳು ಬಿಟ್ಟು ಕೇವಲ ಮೂಲ ಗ್ರಂಥಗಳಲ್ಲಿ ಇರುವಂತಹ ಜ್ಞಾನವನ್ನು ನೋಡಿದರೇ, ನಾವೆಲ್ಲಾ ಒಂದೇ ಎಂದು ತಿಳಿಯುತ್ತದೆ. ಯಾವ ಮಾತ್ರ ಬೇಧಗಳು ಬರುವುದಿಲ್ಲ. ವೇದಗಳು, ಪುರಾಣಗಳನ್ನು ಬಿಟ್ಟು ಭಗವದ್ಗೀತೆಯನ್ನು ನಾವು ನೋಡಿ ದರೇ, ಅದೇ ವಿಧವಾಗಿ ಕ್ರೈಸ್ಥವರಲ್ಲಿ ಕೂಡಾ ನಾಲ್ಕು ಸುವಾರ್ತೆಗಳನ್ನು

ಆಧಾರಮಾಡಿಕೊಂಡು ನೋಡಿದರೇ, ಇನ್ನೂ ಅದೇ ವಿಧವಾಗಿಯೇ ಇಸ್ಲಾಮ್‌ನಲ್ಲಿ ಕೂಡಾ ಖುರ್‌ಆನ್‌ನನ್ನೇ ಆಧಾರ ಮಾಡಿಕೊಂಡು ನೋಡಿದರೆ ಮನುಷ್ಯರೆಲ್ಲಾ ಒಂದೇ, ಮನುಷ್ಯರೆಲ್ಲರಿಗೂ ದೇವರು ಒಬ್ಬನೇ, ಯಾವ ವಿಧವಾದ ವ್ಯತ್ಯಾಸಗಳು ಇಲ್ಲ ಎಂದು ನಮಗೆ ತಿಳಿಯಲ್ಪಡುತ್ತಿದೆ. ಆ ವಿಧವಾದ ವ್ಯತ್ಯಾಸಗಳು ಇಲ್ಲದಂತೆ ಇರುವ ಜ್ಞಾನವನ್ನು ನಾವು ತಿಳಿದುಕೊಳ್ಳಬೇಕೆಂದು ಈಗ ತಿಳಿಸಿಕೊಳ್ಳುತ್ತಿದ್ದೇವೆ.

ಮುಖ್ಯವಾಗಿ ಇಸ್ಲಾಮ್ ಮತದಲ್ಲಿ ಇರುವ ಚಿಕ್ಕ ಚಿಕ್ಕ ತಪ್ಪುಗಳನ್ನು, ನಾವು ಗ್ರಹಿಸಿಕೊಳ್ಳದ ವಾಕ್ಯಗಳನ್ನು ತೆಗೆದುಕೊಂಡು ಅವುಗಳನ್ನು ಸರಿಪಡಿಸಿಕೊಂಡು ನೋಡಿದರೆ, ಸಂಪೂರ್ಣವಾದ ಜ್ಞಾನವನ್ನು ನಾವು ತಿಳಿದುಕೊಳ್ಳಬಹುದು. ಖುರಾನ್ ಗ್ರಂಥ ಸುಮಾರು 1400 ವರ್ಷಗಳ ಪೂರ್ವ ಮುಹಮ್ಮದ್ ಪ್ರವಕ್ತರವರು ತಿಳಿಸಿದ್ದಾರೆ. ನಂತರ ಅದು ಪವಿತ್ರ ಗ್ರಂಥವಾಗಿಯೇ ನಮಗೆ ಲೆಕ್ಕಿಸಲ್ಪಟ್ಟಿದೆ. ಅದರ ನಂತರ ಆತನು ಇರುವಾಗ ಪ್ರಾರ್ಥನೆಯನ್ನು ಕಲಿಸಿದ್ದಾನೆ, ಕೆಲವು ಕೆಲಸಗಳನ್ನು ಕಲಿಸಿದ್ದಾನೆ, ಮನುಷ್ಯ ಮನುಷ್ಯನಿಗು ಸಲಾಮ್ ಮಾಡುವ ವಿಧಾನವೂ ಕೂಡಾ ಆತನು ಕಲಿಸಿದ್ದಾನೆ. ಆ ದಿನವೇ ಒಳ್ಳೆಯ ಪದ್ಧತಿಗಳು ಎಲ್ಲಾ ಕಲಿಸಿಹೋಗಿದ್ದಾನೆ. ಇಸ್ಲಾಮ್ ಮತದಲ್ಲಿ ಯಾವುವಾದರೆ ಒಳ್ಳೆಯ ಪದ್ಧತಿಗಳು ಇದ್ದವೋ, ಆ ಒಳ್ಳೆಯ ಪದ್ಧತಿಗಳೆಲ್ಲವನ್ನೂ ಆತನು ಆ ದಿನ ಕಲಿಸಿಹೋಗುವುದು ಕೂಡಾ ನಡೆದಿದೆ. ನಂತರ ಸ್ವಲ್ಪ ಕಾಲಕ್ಕೆ ಆತನು ದೇವರ ಹತ್ತಿರಕ್ಕೆ ಹೋಗುವುದು ಸಹಾ ನಡೆದಿದೆ. ದೇವರ ಆಜ್ಞೆಯ ಪ್ರಕಾರ ಆತನು ಮರಣಿಸುವುದು ಕೂಡಾ ನಡೆದಿದೆ. ನಂತರ, ಸ್ವಲ್ಪ ಕಾಲಕ್ಕೆ ಅಂದರೆ ಸುಮಾರು ನಮಗೆ 120 ವರ್ಷಗಳ ನಂತರ ಪ್ರವಕ್ತರವರ ಹತ್ತಿರ ಶಿಷ್ಯನಾಗಿ ಇರುವಂತಹ ಶಿಷ್ಯನೊಂದರ ಶಿಷ್ಯನು ಒಬ್ಬರು ಈ ಹದೀಸು ಗ್ರಂಥಗಳು ಬರೆಯುವುದು ನಡೆದಿದೆ. ಪ್ರವಕ್ತರವರು ಈ ವಿಧವಾಗಿ ಹೇಳುತ್ತಿದ್ದನು, ಆ ಹೇಳಿರುವಂತಹ ವಿಷಯಗಳು ಈ ವಿಧವಾಗಿ ಇವೆ, ನಮ್ಮನ್ನು ಈ ವಿಧವಾಗಿ ಪ್ರವರ್ತಿಸೆಂದು ಹೇಳಿದ್ದಾನೆ. ಇವು ಈ ವಿಧವಾಗಿ ಮಾಡೆಂದು ಹೇಳಿದ್ದಾನೆ ಎಂದು ಹದೀಸು ಗ್ರಂಥವನ್ನು ಬರೆಯುವುದು ನಡೆದಿದೆ. ಅಂದರೆ ಖುರಾನ್ ಗ್ರಂಥ ಬೇರೆ, ಹದೀಸು ಗ್ರಂಥ ಬೇರೆ ಎಂದು ನಮಗೆ ಚೆನ್ನಾಗಿ ತಿಳಿದುಹೋ

ಗುತ್ತದಲ್ಲವೆ! ಖುರ್‌ಆನ್ ಮುಹಮ್ಮದ್ ಪ್ರವಕ್ತರವರು ಹೇಳಿದ್ದಾರೆ. ಹದೀಸು ಗ್ರಂಥಗಳನ್ನು ಆತನ ನಂತರ ಬಂದವರು 121 ವರ್ಷಗಳ ನಂತರ ಹೇಳಿದ್ದಾರೆ. ಆ ವಿಧವಾಗಿ 145, 149, 168 ವರ್ಷಗಳವರೆಗು ಆರು ಮಂದಿ ಆರು ಗ್ರಂಥಗಳನ್ನು ಬರೆದಿದ್ದಾರೆ. ಪ್ರವಕ್ತ ಇರುವ ದಿನ ಅವರು ಇಲ್ಲ ಆದರೆ ಆ ದಿನ ಇರುವವರು ಹೀಗೆ ಹೇಳಿದ್ದಾರೆ ಎಂದು ಬರೆದಿದ್ದಾರೆ. ಅವು ಈಗ ನಮಗೆ ಹದೀಸು ಗ್ರಂಥಗಳಾಗಿ ನಿಂತಿವೆ. ಈ ಆರು ಜನರೇ ಅಲ್ಲದೆ ಉಳಿದ 35 ಮಂದಿ ಕೂಡಾ ಬರೆಯುವುದು ನಡೆದಿದೆ. ಅವರ ಹೆಸರುಗಳು ಹೀಗೆ ಇವೆ.

1. ಇಮಾಮ್ ಅಹ್ಮದ್ ಬಿನ್ ಹಂಬಲ್ (ರಹ್ಮಲೈ)
2. ಇಮಾಮ್ ಮುಹಮ್ಮದ್ ಬಿನ್ ಇಸ್ಮಾಯಿಲ್ ಬುಖಾರೀ (ರಹ್ಮಲೈ)
3. ಇಮಾಮ್ ಮುಸ್ಲಿಮ್ ಬಿನ್ ಹಜ್ಜಾಜ್ (ರಹ್ಮಲೈ)
4. ಇಮಾಮ್ ಅಬೂದಾವೂದ್ ಸುಲೈಮಾನ್ ಬಿನ್ ಅಷ್ ಅಸ್ (ರಹ್ಮಲೈ)
5. ಇಮಾಮ್ ಅಬೂ ಈಸಾ ಮುಹಮ್ಮದ್ ಬಿನ್ ಈಸಾ ತಿರ್ಮಿಜೀ (ರಹ್ಮಲೈ)
6. ಇಮಾಮ್ ಅಬೂ ಅಬ್ದುರ್ರಹ್ಮನ್ ಅಹ್ಮದ್ ಬಿನ್ ಷುಐಬ್ ನಸಾಯಿ (ರಹ್ಮಲೈ)
7. ಇಮಾಮ್ ಮುಹಮ್ಮದ್ ಬಿನ್ ಯಜೀದ್ ಬಿನ್ ಮಾಜೀ (ರಹ್ಮಲೈ)
8. ಐಸ್‌ಹಖ್ ಬಿನ್ ರಾಹ್ವೇಹ್ (ರಹ್ಮಲೈ)
9. ಅಹ್ಮದ್ ಬಿನ್ ಇಬ್ರಾಹಿಂ ಇಸ್ಮಾಯಿಲೀ (ರಹ್ಮಲೈ)
10. ಅಹ್ಮದ್ ಬಿನ್ ಅಮ್‌ರ್ ಬಜ್ಜಾರ್ (ರಹ್ಮಲೈ)
11. ಅಹ್ಮದ್ ಬಿನ್ ಹುಸೈನ್ ಬೈಹಖೀ (ರಹ್ಮಲೈ)
12. ಅಬೂ ಹಾತಿಂ ಮುಹಮ್ಮದ್ ಬಿನ್ ಇದ್ರೀಸ್ ರಾಜೀ (ರಹ್ಮಲೈ)
13. ಅಬ್ದುಲ್ಲಾಹ್ ಬಿನ್ ಅಲೀಬಿನ್ ಜೌರುಜ್ (ರಹ್ಮಲೈ)
14. ಹಾರಿಸ್ ಬಿನ್ ಅಬೂ ಉಸಾಮ (ರಹ್ಮಲೈ)

15. ಅಬೂ ಅಬ್ದುಲ್ಲಾಹ್ ಅಲ್ ಹಾಕಿಮ್ (ರಹ್ಮಲೈ)
16. ಅಬೂಹೀತಿಂ ಮುಹಮ್ಮದ್ ಬಿನ್ ಹಿಬ್ಬಾನ್ (ರಹ್ಮಲೈ)
17. ಮುಹಮ್ಮದ್ ಬಿನ್ ಇಸ್‌ಹಾಖ್ ಬಿನ್ ಖುಜೈಮ (ರಹ್ಮಲೈ)
18. ಇಬ್ನೆ ಅಬೂ ಶೆಪಮ (ರಹ್ಮಲೈ)
19. ಅಲೀ ಬಿನ್ ಉಮರ್ ದಾರೆ ಖುತ್ನೀ (ರಹ್ಮಲೈ)
20. ಇಮಾಮ್ ದಾರಿಮೀ (ರಹ್ಮಲೈ)
21. ಅಬೂದಾವೂದ್ ತಯಾಲಿಸೀ (ರಹ್ಮಲೈ)
22. ಇಬ್ನೆ ಅಬೂ ಅದ್ದುನ್ಯಾ (ರಹ್ಮಲೈ)
23. ಇಮಾಮ್ ಜುಹ್‌ಲೀ (ರಹ್ಮಲೈ)
24. ಅಬೂ ಜುರ್‌ಆ ರಾಜೀ (ರಹ್ಮಲೈ)
25. ಸಯೀದ್ ಬಿನ್ ಮನ್ಸೂರ್ (ರಹ್ಮಲೈ)
26. ಇಬ್ನೆ ಸಕನ್ (ರಹ್ಮಲೈ)
27. ಮುಹಮ್ಮದ್ ಬಿನ್ ಇದ್ರೀಸ್ ಷಾಫಯಿ (ರಹ್ಮಲೈ)
28. ಅಬೂಬಕ್ರ್ ಬಿನ್ ಅಬೂ ಷೈಬ (ರಹ್ಮಲೈ)
29. ಸುಲೈಮಾನ್ ಬಿನ್ ಅಹ್ಮದ್ (ರಹ್ಮಲೈ)
30. ಅಹ್ಮದ್ ಬಿನ್ ಮುಹಮ್ಮದ್ ತಹವೀ (ರಹ್ಮಲೈ)
31. ಇಬ್ನೆ ಅಬ್ದುಲ್ ಬರ್ರ್ (ರಹ್ಮಲೈ)
32. ಅಬ್ದುಲ್ ಹಖ್ (ರಹ್ಮಲೈ)
33. ಅಬ್ದುರ್ರಜ್ಜಾಖ್ ಹುಮಾಮ್ (ರಹ್ಮಲೈ)
34. ಅಬ್ದುಲ್ಲಾಹಿ ಬಿನ್ ಅದೀ (ರಹ್ಮಲೈ)
35. ಮುಹಮ್ಮದ್ ಬಿನ್ ಅಮ್ರ್ ಅಖೀಲೀ (ರಹ್ಮಲೈ)
36. ಅಲೀ ಬಿನ್ ಮದೀನಿ (ರಹ್ಮಲೈ)

37. ಅಲೀ ಬಿನ್ ಮುಹಮ್ಮದ್ ಇಬ್ನುಲ್ ಖತ್ತಾನ್ (ರಹ್ಮಲೈ)

38. ಇಮಾಮ್ ಮಾಲಿಕ್ (ರಹ್ಮಲೈ)

39. ಮುಹಮ್ಮದ್ ಬಿನ್ ಇಸ್ ಹಾಖ್ ಇಬ್ನೆ ಮಂದ (ರಹ್ಮಲೈ)

40. ಅಬೂ ನೂಐಮ್ ಅಸ್‌ಫಹಾನೀ (ರಹ್ಮಲೈ)

41. ಅಬೂ ಯಾಲ ಅಹ್ಮದ್ ಬಿನ್ ಅಲೀ (ರಹ್ಮಲೈ)

ಈ ವಿಧವಾಗಿ ಬರೆದ ನಂತರ ಮತ್ತೆ ಸ್ವಲ್ಪ ಕಾಲಕ್ಕೆ ಅಂದರೆ 200 ವರ್ಷಗಳ ನಂತರ ಇಮಾಮ್ ಬುಖಾರಿ ಅವರು, ಸುಮಾರು 210 ವರ್ಷಗಳ ನಂತರ ಇಮಾಮ್ ಮುಸ್ಲೀಮ್ ಅವರು ಒಂದು ಹದೀಸು ಗ್ರಂಥಗಳು ಬರೆಯುವುದು ನಡೆದಿದೆ. ಅವುಗಳಲ್ಲಿ ಬಹಳ ಪ್ರಚಾರ ಹೊಂದಿರುವುದು ಇಮಾಮ್ ಬುಖಾರಿ ಅವರ ಗ್ರಂಥವೇ ಬಹಳ ಪ್ರಸಿದ್ಧಿ ಹೊಂದಿದೆ. ಆತನು ಬಹಳ ಜ್ಞಾಪಕಶಕ್ತಿ ಇರುವವನು. ಆತನು ಬಹಳ ಒಳ್ಳೆ ಬುದ್ಧಿವಂತನು. ಆ ದಿನ ಪ್ರವಕ್ತರವರು ಇವೇ ವಿಷಯಗಳು ಹೇಳಿದ್ದಾನೆ ಎಂದು ನಮಗೆ ನೀತಿ ವಾಕ್ಯಗಳೆಲ್ಲವೂ ಬರೆದಿಡುವುದು ನಡೆದಿದೆ. ಆ ವಿಧವಾಗಿ ಬರೆದ ವಾಕ್ಯಗಳು ಒಟ್ಟಾರೆ ನಮಗೆ ಆರು ಲಕ್ಷಗಳು ಇವೆ. ಅಂದರೆ ಮೊಟ್ಟಮೊದಲು ಇಮಾಮ್ ಬುಖಾರಿಯವರು ಬರೆದ ಹದೀಸು ಗ್ರಂಥ ಯಾವುದಾದರೆ ಇದೆಯೋ, ಅದು ಆರು ಲಕ್ಷಗಳ ಹದೀಸು ವಾಕ್ಯಗಳೊಂದಿಗೆ ತುಂಬಿಕೊಂಡಿದೆ. ಆದರೆ ಅದು ಅತ್ಯಂತ ಪ್ರಾಮಾಣಿಕ ಗ್ರಂಥವಾದರೂ ಅವುಗಳಲ್ಲಿ ಸರಿಯಾಗಿ ಏರ್ಪಡಿಸಿ ಇಟ್ಟಿರುವಂತಹವು 7397 ವಾಕ್ಯಗಳು. ಆರು ಲಕ್ಷಗಳಲ್ಲಿಂದ ಮುಖ್ಯವಾದ 7397 ವಾಕ್ಯಗಳನ್ನು ಮಾತ್ರವೇ ಹೊರಗೆ ತೆಗೆದಿದ್ದಾರೆ. ಅಂದರೆ ಉಳಿದವುಗಳನ್ನು ಬಿಟ್ಟುಹಾಕುವುದು ನಡೆದಿದೆ. ಇವುಗಳೆಲ್ಲವನ್ನೂ ತೆಗೆದುಹಾಕುತ್ತಾ, ಇನ್ನೂ ತೆಗೆದುಹಾಕುತ್ತಾ ಹೋದರೆ ಎಲ್ಲೂ ಯಾವ ಹದೀಸು ವಾಕ್ಯವೂ ಸಹ ಪ್ರವಕ್ತರವರ ಹುದ್ದೆಗೆ ಭಂಗ ಉಂಟಾಗದಂತೆ ಇರುವಂತಹ ವಿಧಾನದಿಂದ ನೋಡುತ್ತಾ ಎಲ್ಲಾ ಸರಿಯಾಗಿ ಇರುವವುಗಳನ್ನು ಏರ್ಪಡಿಸಿಕೊಳ್ಳುತ್ತಾ ಬಂದರೆ ಕೊನೆಗೆ ಉಳಿದಿರುವವು 2602 ಹದೀಸುಗಳು ಮಾತ್ರವೇ ಉಳಿದಿವೆ. ಅಂದರೇ 6

ಲಕ್ಷಗಳಿಂದ ಕೊನೆಗೆ ಎಷ್ಟು ಉಳಿದಿವೆ ಎಂದರೇ 2602 ಹದೀಸುಗಳು ಮಾತ್ರವೇ ಉಳಿದಿವೆ. ಈ ವಿಧವಾಗಿ ಆತನು 16 ವರ್ಷಗಳು ಕಷ್ಟಪಟ್ಟು ಹದೀಸು ಗ್ರಂಥ ಬರೆದುಹೋಗಿದ್ದಾನೆ. ಆತನ ನಂತರ ಅಂದರೇ ಸ್ವಲ್ಪ ಕಾಲ ಒಂದು ಹತ್ತು ವರ್ಷಗಳು ಕಳೆದ ನಂತರ ಹುಟ್ಟಿದ ಇಮಾಮ್ ಮುಸ್ಲೀಮ್‌ರವರು ಕೂಡಾ ಹದೀಸು ಗ್ರಂಥಗಳು ಬರೆಯುವುದು ನಡೆದಿದೆ. ಆತನು ಒಟ್ಟಾರೆ 4 ಲಕ್ಷಗಳ ಹದೀಸುಗಳನ್ನು ಬರೆದಿದ್ದಾನೆ. ಇಮಾಮ್ ಬುಖಾರಿಯವರು 6 ಲಕ್ಷಗಳು ಬರೆದರೆ, ಇಮಾಮ್ ಮುಸ್ಲೀಮ್‌ರವರು 4 ಲಕ್ಷಗಳು ಶೇಖರಿಸಿದ್ದಾನೆ. ಅದರಲ್ಲಿ ಇಮಾಮ್ ಮುಸ್ಲಿಮ್‌ರವರು ಇದು ಚೆನ್ನಾಗಿ ಇಲ್ಲ, ಅದು ಚೆನ್ನಾಗಿ ಇಲ್ಲ, ಇದು ಎಲ್ಲಾದರೂ ನಮಗೆ ಉತ್ತರ ಹೇಳಲಾರದ ಪರಿಸ್ಥಿತಿ ಬರುತ್ತದೆ, ಇದು ಪ್ರವಕ್ತರವರ ಬೋಧನೆಗೆ ಪ್ರತ್ಯಕ್ಷವಾಗಿ ಭಂಗ ಉಂಟಾಗುತ್ತದೆಂದು ಆ ವಿಧವಾಗಿ ತೆಗೆದುಹಾಕುತ್ತಾ, ತೆಗೆದುಹಾಕುತ್ತಾ ಬಂದರೆ ಆತನವು ಕೂಡಾ 7270 ಹದೀಸುಗಳು ಮಾತ್ರವೇ ಉಳಿದಿವೆ. ಈ ವಿಧವಾಗಿ ಕೊನೆಗೆ ಅವುಗಳಲ್ಲಿ ಕೂಡಾ ಇನ್ನೂ ಸೋಸಿದರೆ 4000 ಹದೀಸುಗಳು ಮಾತ್ರವೇ ಉಳಿದಿವೆ. ಈ ವಿಧವಾಗಿ 4000 ಹದೀಸುಗಳೊಂದಿಗೆ ಇಮಾಮ್ ಮುಸ್ಲೀಮ್‌ರವರು, 2602 ಹದೀಸುಗಳೊಂದಿಗೆ ಇಮಾಮ್ ಬುಖಾರಿಯವರು ನಿಂತಿದ್ದಾರೆ. ಈ ವಿಧವಾಗಿ ನಮಗೆ ಹದೀಸುಗಳು ಎನ್ನುವವು ಬರೆದಿಡಲಾಗಿವೆ. ಖುರಾನ್ ಬೇರೆ, ಹದೀಸುಗಳು ಬೇರೆ ಎಂದು ನೀವು ಚೆನ್ನಾಗಿ ಗ್ರಹಿಸಿಕೊಳ್ಳಬೇಕು. (ಇಮಾಮ್ ಬುಖಾರಿ, ಇಮಾಮ್ ಮುಸ್ಲೀಮ್‌ರವರ ವಿಷಯ "ಮಹಾ ಪ್ರವಕ್ತ ಹಿತೋಕ್ತಿಗಳು" ಎನ್ನುವ ಗ್ರಂಥದಿಂದ ಶೇಖರಿಸಿರುವುದು ಇಲ್ಲಿ ತಿಳಿಸುತ್ತಿದ್ದೇವೆ ನೋಡಿರಿ.)

## ಇಮಾಮ್ ಬುಖಾರೀ (ರಹ್ಮಲೈ) :–

**ಸಹೀಮ್ ಬುಖಾರೀ ಗ್ರಂಥವನ್ನು ಸಂಕಲನ ಮಾಡಿದ ಇಮಾಮ್ ಅಬೂ ಅಬ್ದುಲ್ಲಾ ಮುಹಮ್ಮದ್ ಬಿನ್ ಇಸ್ಮಾಯೀಲ್ ಬಿನ್ ಇಬ್ರಾಹೀಮ್ ಅಲ್ ಬುಖಾರೀ (ರಹ್ಮಲೈ) ಹಿಜ್ರೀ ಶಕಂ 194, ಷವ್ವಾಲ್ ಮಾಸಂ 13ನೇ ತಾರೀಖು ಶುಕ್ರವಾರದಂದು ಬುಖಾರಾದಲ್ಲಿ ಒಬ್ಬ ಬಡವ ಕುಟುಂಬದಲ್ಲಿ ಜನ್ಮಿಸಿದ್ದಾರೆ. ಆತನು ಹತ್ತು ವರ್ಷಗಳ**

ಪ್ರಾಯದಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸಿದ್ದಾರೆ. ಸ್ವಗ್ರಾಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಉನ್ನತ ವಿದ್ಯೆಗಾಗಿ ಮುಸ್ಲೀಂ ಜಗತ್ತಿನಲ್ಲಿನ ಯಾವತ್ತು ಪ್ರಧಾನ ವಿದ್ಯಾ ಕೇಂದ್ರಗಳನ್ನು ಪರ್ಯಾಟಿಸಿದ್ದಾರೆ. ಈ ಸುದೀರ್ಘ ಪರ್ಯಾಟನೆಯಲ್ಲಿ ಆತನು 1080 ಮಂದಿ ಧರ್ಮವೆತ್ತರಿಂದ ಹದೀಸು ವಿದ್ಯೆ ಕಲಿತುಕೊಂಡಿದ್ದಾರೆ. ಹತ್ತು ವರ್ಷಗಳ ಪ್ರಾಯದಲ್ಲಿಯೇ ಆತನ ಬುಖಾರಾದಲ್ಲಿ ಆ ದಿನದ ಹದೀಸು ವಿದ್ಯಾ ಪಾರಂಗತರಾದ ಇಮಾಮ್ ದಾಖಲೀ (ರಹ್ಮಲೈ) ರವರ ಪಾಠಶಾಲೆಯಲ್ಲಿ ಸೇರಿದ್ದಾರೆ.

ಒಂದು ದಿನ ಇಮಾಮ್ ದಾಖಲೀ (ರಹ್ಮಲೈ) ಒಂದು ಹದೀಸು ಪ್ರಮಾಣವನ್ನು ವಿವರಿಸುತ್ತಾ “ಸುಪ್ಯಾನ್ ಅನ್ ಅಬೀಜುಬೈರ್ ಅನ್ ಇಬ್ರಾಹೀಂ” ಎಂದು ಅಂದಿದ್ದಾರೆ. ಆಗ ಇಮಾಮ್ ಬುಖಾರೀ (ರಹ್ಮಲೈ) ಕಲ್ಪಿಸಿಕೊಂಡು “ಈ ಹದೀಸು ಪ್ರಮಾಣ ಈ ವಿಧವಾಗಿ ಇಲ್ಲ! ಅಬೂಜುಬೈರ್ ಈ ಹದೀಸನ್ನು ಇಬ್ರಾಹೀಂ ಯಿಂದ ಉಲ್ಲೇಖಿಸಲಿಲ್ಲ” ಎಂದು ಅಂದಿದ್ದಾರೆ.

ಬಹಳ ಚಿಕ್ಕ ವಯಸ್ಸಿನಲ್ಲಿ ಇರುವ ಒಬ್ಬ ಶಿಷ್ಯನು ತನ್ನನ್ನು ಹೀಗೆ ತಪ್ಪು ಹಿಡಿಯುವುದರಲ್ಲಿ ಗುರುಗಳು ಆಶ್ಚರ್ಯಪಟ್ಟರು. ಆತನು ಕೋಪದಿಂದ ಗುರಿಗುಟ್ಟಿ ನೋಡಿದ್ದಾರೆ. ಇಮಾಮ್ ಬುಖಾರೀ (ರಹ್ಮಲೈ) ಗುರುಗಳ ಬಳಿ ಎಷ್ಟೋ ವಿನಯ ವಿಧೇಯತೆಗಳಿಂದ ವ್ಯವಹರಿಸುತ್ತಾ “ನಿಮ್ಮ ಹತ್ತಿರ ಅಸಲು ಗ್ರಂಥ ಇದ್ದರೇ ಅದರಲ್ಲಿ ಒಂದು ಬಾರಿ ನೋಡಿಕೊಳ್ಳಿ” ಎಂದು ಪ್ರಶಾಂತವಾಗಿ ಹೇಳಿದ್ದಾರೆ.

ಇಮಾಮ್ ದಾಖಲೀ (ರಹ್ಮಲೈ) ಮನೆಗೆ ಹೋಗಿ ಅಸಲು ಗ್ರಂಥವನ್ನು ಪರಿಶೀಲಿಸಿ ಇಮಾಮ್ ಬುಖಾರೀ (ರಹ್ಮಲೈ) ಮಾಡಿದ ವಿಮರ್ಶೆ ಸಹೇತುಕ ವಾದುದೇಯೆಂದು ಗ್ರಹಿಸಿದ್ದಾರೆ. ಆತನು ಪುನಃ ಬಂದು “ಆದರೇ ಸರಿಯಾದ ಪ್ರಮಾಣ ಏನೆನ್ನುತ್ತೀಯ?” ಎಂದು ಕೇಳಿದ್ದಾರೆ. ಇಮಾಮ್ ಬುಖಾರೀ (ರಹ್ಮಲೈ) ತಕ್ಷಣವೇ ಸಮಾಧಾನಕೊಡುತ್ತಾ “ಸುಫ್ಯಾನ್ ಅನಿಜ್ಜುಬೈರಿ ವಹುವನ್‌ಬು ಅದಿಯ್ಯಿ ಅನ್ ಇಬ್ರಹೀಂ (ಇಬ್ರಾಹೀಂ ಯಿಂದ ಜುಬೈರ್ ಬಿನ್ ಅದೀ ರಹ್ಮಲೈ ಉಲ್ಲೇಖಿಸಿದ್ದಾರೆ : ಅಬೂಬುಬೈರ್ ಎನ್ನುವುದು ಸರಿಯಲ್ಲ)” ಎಂದು ಹೇಳಿದ್ದಾರೆ.

ಅಲ್ಲಿಗೆ ಇಮಾಮ್ ಬುಖಾರೀ ವಯಸ್ಸು ಹನ್ನೊಂದು ವರ್ಷವೂ ಸಹ ತುಂಬಿರಲಿಲ್ಲ. ಹದಿನಾರು ವರ್ಷಗಳ ವಯಸ್ಸಿನಲ್ಲಿ ಆತನು ಹಜ್ರತ್ ಅಬ್ದುಲ್ಲಾ ಬಿನ್ ಮುಬಾರಕ್ (ರಹ್ಮಲೈ), ಇಮಾಮ್ ವಕೀ (ರಹ್ಮಲೈ)ಯವರು ಶೇಖರಿಸಿದ ಹದೀಸುಗಳೆಲ್ಲಾ ಕಂಠಸ್ತ ಮಾಡಿದ್ದಾರೆ. 18 ನೇ ವರ್ಷ ಚರಿತ್ರೆ ಗ್ರಂಥವನ್ನು ರಚಿಸಲಾರಂಭಿಸಿದ್ದಾರೆ, ಇದರಲ್ಲಿ ಸಹಾಬೀಲು (ಪ್ರವಕ್ತ ಪ್ರತ್ಯಕ್ಷ ಅನುಚರರು), ತಾಬಯೀಲ (ಆ ನಂತರ ಅನುಚರರ) ಜೀವನ ಚರಿತ್ರೆ, ಅವರು ಹೇಳಿದ ಮಾತುಗಳು, ಮಾಡಿದ ನಿರ್ಣಯಗಳೆಲ್ಲವೂ ಸಮೀಕರಿಸಲಾಗಿವೆ. ಈ ಗ್ರಂಥವನ್ನು ಆತನು ದೈವಪ್ರವಕ್ತ (ಸ) ಸಮಾಧಿ ಹತ್ತಿರ ಕುಳಿತುಕೊಂಡು ಬೆಳದಿಂಗಳ ರಾತ್ರಿಗಳಲ್ಲಿ ಬರೆದಿದ್ದಾರೆ.

ಇಮಾಮ್ ಬುಖಾರೀ (ರಹ್ಮಲೈ) ಅಸಮಾನ್ಯ ಜ್ಞಾಪಕಶಕ್ತಿ ಇರುವ ಮೇಧಾ ಸಂಪನ್ನರು, ಎಷ್ಟು ದೊಡ್ಡ ಹದೀಸಾದರೂ ಸರಿ ಒಂದು ಬಾರಿ ಓದಿದರೇ ಅಥವಾ ಕೇಳಿದರೇ ಸಾಕು ಕಂಠಸ್ತವಾಗಿ ಹೋಗುತ್ತಿತ್ತು.

ಇಮಾಮ್ ಬುಖಾರೀ (ರಹ್ಮಲೈ) ರವರ ಸಮಕಾಲಿನ ಹದೀಸುವೆತ್ತ ಹೀಮಿದ್ ಬಿನ್ ಇಸ್ಲಾಯೀಲ್ ಹೀಗೆ ತಿಳಿಸುತ್ತಿದ್ದಾರೆ. "ಇಮಾಮ್ ಬುಖಾರೀ ಬಸ್ರಾದಲ್ಲಿ ನಮ್ಮೊಂದಿಗೆ ಹದೀಸು ತರಗತಿಗಳಿಗೆ ಹಾಜರಾಗುತ್ತಿದ್ದರು. ಆದರೇ ಆತನು ಕೇವಲ ಕೇಳುತ್ತಿದ್ದನು. ಒಂದು ಅಕ್ಷರವೂ ಸಹ ಬರೆದುಕೊಳ್ಳುತ್ತಿರಲಿಲ್ಲ. ಈ ವಿಧವಾಗಿ 16 ದಿನಗಳು ಕಳೆದು ಹೋಗಿವೆ. ಕೊನೆಗೆ ಒಂದು ದಿನ ನಾನು, ಹದೀಸುಗಳು ಬರೆದುಕೊಳ್ಳಲಾರದ್ದನ್ನು ಕುರಿತು ಆತನನ್ನು ವಿಮರ್ಶಿಸಿದ್ದೇನೆ. ಅದಕ್ಕೆ ಅವರು ಉತ್ತರ ಹೇಳುತ್ತಾ "ಈ ಹದಿನಾರು ದಿನಗಳ ಕಾಲದಲ್ಲಿ ನೀನು ಬರೆದುಕೊಂಡ ವಿಷಯಗಳೆಲ್ಲವೂ ತೆಗೆದುಕೊಂಡು ಬಾ, ಅವುಗಳೆಲ್ಲವನ್ನೂ ನಾನು ನೋಡದಂತೆ ಓದುತ್ತೇನೆ ಕೇಳು" ಎಂದು ಅಂದಿದ್ದಾರೆ. ಆ ವಿಧವಾಗಿ ಆತನು ಹದಿನೈದು ನೂರಕ್ಕು ಮೇಲ್ಪಟ್ಟು ಹದೀಸುಗಳನ್ನು ಒಂದು ಚೂರೂ ಹೋಗದಂತೆ ಇರುವುದು ಇದ್ದಂತೆ ನಮಗೆ ಕೇಳಿಸಿದ್ದಾರೆ. ಸ್ವತಃವಾಗಿ ನಾವು ಅನೇಕ ಕಡೆ ನಮ್ಮ ಬರಹಗಳಲ್ಲಿ ಸಿಕ್ಕಿದ ತಪ್ಪುಗಳನ್ನು ಆತನ ಬಾಯಿ ಮೂಲಕ ಕೇಳಿ ತಿದ್ದುಕೊಳ್ಳಬೇಕಾಯಿತು."

ಇಮಾಮ್ ಬುಖಾರೀ (ರಹ್ಮಲೈ) ರವರ ಜ್ಞಾಪಕಶಕ್ತಿಯ ಗಾಥೆ (ವಿಷಯ) ಗಳು ಎಲ್ಲಾಕಡೆ ವ್ಯಾಪಿಸಿ ಹೋಗಿವೆ. ಆತನು ಯಾವ ಪ್ರಾಂತಕ್ಕೆ ಹೊರಟರೂ, ಆತನಿಗೆ ಮೊದಲೇ ಆ ಪ್ರಾಂತಕ್ಕೆ ಆತನ ಹೆಸರು ಪ್ರಖ್ಯಾತಿಗಳು ಸೇರಿಕೊಳ್ಳುತ್ತಿದ್ದವು. ಪ್ರಜೆಗಳು ವಿವಿಧ ರೀತಿಗಳಲ್ಲಿ ಆತನ ಜ್ಞಾಪಕಶಕ್ತಿಯನ್ನು ಪರೀಕ್ಷಿಸುತ್ತಿದ್ದರು. ಕೊನೆಗೆ ಅವರು ಆತನ ಅಸಾಧಾರಣ ಜ್ಞಾಪಕಶಕ್ತಿಗೆ ಆಶ್ಚರ್ಯಚಕಿತರಾಗಿ ಎಷ್ಟೋ ಅಭಿನಂದಿಸುತ್ತಿದ್ದರು. ಆ ಕಾಲದಲ್ಲಿಯೇ ಷೇಖ್ ಅಬೂಜರಾಆ (ರಹ್ಮಲೈ), ಅಬೂ ಹಾತಿಂ (ರಹ್ಮಲೈ). ಮುಹಮ್ಮದ್ ಬಿನ ನಸ್ರ್ (ರಹ್ಮಲೈ), ಇಬ್ನು ಖುಜೈಮಾ (ರಹ್ಮಲೈ). ಇಮಾಮ್ ತಿರ್ಮಿಜಿ (ರಹ್ಮಲೈ), ಇಮಾಮ್ ಮುಸ್ಲಿಮಂ (ರಹ್ಮಲೈ) ರು ಆತನಿಗೆ ಶಿಷ್ಯರಾಗಿ ಹೋದರು.

ಇಮಾಮ್ ಬುಖಾರೀ (ರಹ್ಮಲೈ) ರವರನ್ನು ಪ್ರಶಂಸಿಸುತ್ತಾ ಕೆಲವರು ಪ್ರಮುಖರು ತಿಳಿಸಿದ ಅಭಿಪ್ರಾಯಗಳನ್ನು ಕೇಳಿರಿ :

"ಬುಖಾರೀ (ರಹ್ಮಲೈ) ಹದೀಸು ವಿದ್ಯೆಯಲ್ಲಿ ನನಗಿಂತ ಹೆಚ್ಚಿನ ವಿವೇಕ, ದೂರದೃಷ್ಟಿ ಇರುವ ವ್ಯಕ್ತಿ. ಆತನು ದೈವದಾಸರಲ್ಲಿ ಎಲ್ಲರಿಗಿಂತ ಹೆಚ್ಚಿನ ವಿವೇಚನಾ ಪರನು. ನಿಜ ಹೇಳಬೇಕೆಂದರೆ ಬುಖಾರೀಯನ್ನು ಮೀರಿದವರೇ ಇಲ್ಲ."

- ಇಮಾಮ್ ದಾರಿಮಿ (ರಹ್ಮಲೈ)

"ಖುರಾಸಾನ್ ಭೂಭಾಗದಲ್ಲಿ ಇಮಾಮ್ ಬುಖಾರೀ (ರಹ್ಮಲೈ) ಅಂತಹ ಮಹೋನ್ನತ ವ್ಯಕ್ತಿ ಮತ್ತೊಬ್ಬರು ಜನ್ಮಿಸಲಿಲ್ಲ."

- ಇಮಾಮ್ ಅಹ್ಮದ್ (ರಹ್ಮಲೈ)

"ಸ್ವತಃವಾಗಿ ಇಮಾಮ್ ಬುಖಾರೀ (ರಹ್ಮಲೈ) ಕೂಡಾ ತನ್ನಂತಹ ವ್ಯಕ್ತಿಯನ್ನು ನೋಡಲಿಲ್ಲ."

- ಇಬ್ನುಲ್ ಮದೀನಿ (ರಹ್ಮಲೈ)

"ಇಮಾಮ್ ಮುಸ್ಲಿಂ ಬಿನ್ ಅಲ್ ಹಿಜಾಜ್ (ರಹ್ಮಲೈ) ಒಂದು ಬಾರಿ ಇಮಾಮ್ ಬುಖಾರೀ (ರಹ್ಮಲೈ) ಸನ್ನಿಧಿಗೆ ಹೋಗಿ ಆತನ ಎರಡು ಕಣ್ಣಿನ ಮಧ್ಯೆ

(ಹಣೆಯನ್ನು) ಮುದ್ದಾಡುತ್ತಿರುವಾಗ ನಾನು ಕಣ್ಣಾರಾ ನೋಡಿದ್ದೇನೆ. ಆ ನಂತರ ಆತನು 'ಗುರುಗಳಿಗೆ ಗುರುವೂ! ಹದೀಸು ತಜ್ಞರ ನಾಯಕಾ! ನಿಮ್ಮ ಪಾದಗಳನ್ನು ಚುಂಬಿಸಲು ನನಗೆ ಅಪ್ಪಣೆ ಕೊಡಿ' ಎಂದು ಅಂದಿದ್ದಾರೆ."

- ಅಹ್ಮದ್ ಬಿನ್ ಹಮ್ದಾನ್ (ರಹ್ಮಲೈ)

"ಆಕಾಶದ ಕೆಳಗೆ ಈ ಧರಣಿಯ ಮೇಲೆ ಮುಹಮ್ಮದ್ ಬಿನ್ ಇಸ್ಮಾಯಿಲ್ ಬುಖಾರೀ (ರಹ್ಮಲೈ) ಯನ್ನು ಮೀರಿದ ಹದೀಸು ಪಂಡಿತನು, ಪಾರಂಗತನು ಮತ್ತೊಬ್ಬರು ಇಲ್ಲ."

- ಇಬ್ನೆ ಖುಜೈಮಾ (ರಹ್ಮಲೈ)

ಇಮಾಮ್ ಜೀವನ ವಿಶೇಷಗಳಲ್ಲಿ ಮುಖ್ಯವಾಗಿ ಹೇಳಿಕೊಳ್ಳುವಂತಹ ಒಂದು ವಿಶೇಷವಿದೆ. ಆತನು ತನ್ನ ಜೀವನದಲ್ಲಿ ಎಂದಿಗೂ ಯಾರನ್ನೂ ನಿಂದಿಸಲಿಲ್ಲ. ದೂಷಿಸಲಿಲ್ಲ, ಬಾಧಿಸಲೂ ಇಲ್ಲ. ಆತನು ಸ್ವತಃವಾಗಿ ಈ ವಿಷಯವನ್ನು ಪ್ರಸ್ತಾಪಿಸುತ್ತಾ "ಪರಲೋಕ ವಿಚಾರಣೆ ದಿನದಂದು ಪರೋಕ್ಷ ನಿಂದನೆಯನ್ನು ಕುರಿತು ನನ್ನನ್ನು ಪ್ರಶ್ನಿಸುವುದು ನಡೆಯುವುದಿಲ್ಲವೆಂದು ನಾನು ಆಶಿಸುತ್ತಿದ್ದೇನೆ" ಎಂದು ಆಗಾಗ ಹೇಳುತ್ತಿದ್ದರು.

ಇಮಾಮ್ ಬುಖಾರೀ (ರಹ್ಮಲೈ) ಎಷ್ಟೋ ಆತ್ಮಾಭಿಮಾನವಿರುವ ವ್ಯಕ್ತಿ. ಇದನ್ನು ಕುರಿತು ಉಮರ್ ಬಿನ್ ಹಫ್ಸ್ (ರಹ್ಮಲೈ) ಹೀಗೆ ತಿಳಿಸುತ್ತಿದ್ದಾರೆ. "ಬಸ್ರಾದಲ್ಲಿನ ಹದೀಸು ಪಾಠಶಾಲೆಯಲ್ಲಿ ನಾನು. ಇಮಾಮ್ ಬುಖಾರೀ ಸಹ ವಿದ್ಯಾರ್ಥಿಗಳಾಗಿ ಇರುತ್ತಿದ್ದೆವು. ಒಂದು ದಿನ ಇಮಾಮ್ ಪಾಠಶಾಲೆಗೆ ಬರಲಿಲ್ಲ. ವಿಚಾರಿಸಿದರೇ ಆ ದಿನ ಇಮಾಮ್ ಬುಖಾರೀ ಹತ್ತಿರ ಬಟ್ಟೆ ಧರಿಸಿ ಹೊರಗೆ ಬರುವುದಕ್ಕೆ ಸರಿಯಾದ ಬಟ್ಟೆಗಳು ಸಹ ಇಲ್ಲವೆಂದು ತಿಳಿದಿದೆ. ಈ ವಿಷಯ ಇತರರ ಮುಂದೆ ಬಹಿರ್ಗತವಾಗುವುದು ಆತನಿಗೆ ಸ್ವಲ್ಪವೂ ಇಷ್ಟವಿಲ್ಲ. ಆದ್ದರಿಂದ ಆತನು ಆ ದಿನ ಮನೆಯಿಂದ ಹೊರಗೇ ಬರಲಿಲ್ಲ. ಆ ನಂತರ ಆತನಿಗೋಸ್ಕರ ಬಟ್ಟೆಗಳು ಸಂಪಾದಿಸಿ ತೆಗೆದುಕೊಂಡು ಹೋಗಿ ಕೊಟ್ಟಿದ್ದೇವೆ. ಅದರಿಂದ ಆತನು ಮರುದಿನದಿಂದ ಪಾಠಶಾಲೆಗೆ ಬರುವುದಕ್ಕೆ ಪ್ರಾರಂಭಿಸಿದ್ದಾರೆ.

ಇಮಾಮ್ ಬುಖಾರೀ (ರಹ್ಮಲೈ) ರಾಜರಿಗೂ, ಪಾಲಕರಿಗೂ ಯಾವಾಗಲೂ ದೂರವಾಗಿ ಇರುತ್ತಿದ್ದರು. ಆದರೇ ಒಂದು ದಿನ ಬುಖಾರಾ ಗೌವರ್ನರ್, ತನ್ನ ದರ್ಬಾರಿಗೆ ಬಂದು ತನಗೆ ಹದೀಸುಗಳು ಕೇಳಬೇಕೆಂದು ಇಮಾಮ್ ಬುಖಾರೀ (ರಹ್ಮಲೈ) ರವೆರಿಗೆ ಮನವಿ ಮಾಡಿದ್ದಾನೆ. ಅದರೊಂದಿಗೆ, ಇತರರ್ಯಾರೂ ಭಾಗವಹಿಸದಂತೆ ಇರುವ ಒಂದು ಪ್ರತ್ಯೇಕ ಸಮಾವೇಶದಲ್ಲಿ ತನ್ನ ಮಕ್ಕಳಿಗೆ ಹದೀಸು ವಿದ್ಯೆ ಕಲಿಸಬೇಕಾಗಿ ಸಹ ಆತನು ಇಮಾಮ್ ನನ್ನು ಕೋರಿದ್ದಾನೆ. ಇಮಾಮ್ ಈ ಎರಡು ಕೋರಿಕೆಗಳನ್ನು ತಿರಸ್ಕರಿಸುತ್ತಾ "ವಿದ್ಯೆಯನ್ನು ಗುರುವು ಹತ್ತಿರಕ್ಕೆ ಹೋಗಿ ಕಲಿಯಬೇಕಾಗಿದೆ. ನನ್ನ ಸಮಾ ವೇಶದಲ್ಲಿ ಧನಿಕ-ಬಡವ ಎನ್ನುವ ತಾರತಮ್ಯವಿಲ್ಲ. ಇಲ್ಲಿಗೆ ಬಂದು ಹದೀಸು ವಿದ್ಯೆ ಕಲಿಯಬೇಕೆಂದು ಪ್ರತಿ ಒಬ್ಬರಿಗೂ ಹಕ್ಕಿದೆ" ಎಂದು ಸಮಾಧಾನವನ್ನು ಕೊಟ್ಟಿದ್ದಾರೆ.

ಈ ಸಮಾಧಾನವನ್ನು ಕೇಳಿ ಬುಖಾರಾ ಗೌರ್ನರ್ ಅಗ್ರಹೋದಗ್ರ ನಾಗಿದ್ದಾನೆ. ಆ ನಂತರ ಅವರಿಬ್ಬರ ಮಧ್ಯ ದೂರ ಇನ್ನಷ್ಟು ಬೆಳೆದುಹೋಗಿದೆ. ಗೌರ್ನರ್ ಇಮಾಮ್ ಬುಖಾರೀ (ರಹ್ಮಲೈ) ಮೇಲೆ ಸೇಡನ್ನಿಟ್ಟುಕೊಂಡು ಬುಸಗುಟ್ಟುವುದಕ್ಕೆ ಆರಂಭಿಸಿದ್ದಾನೆ. ಅದರೊಂದಿಗೆ ಇಮಾಮ್ ಬುಖಾರೀ (ರಹ್ಮಲೈ) ಬುಖಾರಾ ಪೇಟೆಯನ್ನು ಬಿಟ್ಟು ಖರ್ತುಂಗ್ ಎನ್ನುವ ಪ್ರಾಂತಕ್ಕೆ ಹೋಗಿ ಬಚ್ಚಿಟ್ಟುಕೊಳ್ಳಬೇಕಾಯಿತು. ಅಲ್ಲಿಗೆ ಹೋದ ನಂತರ ಆತನು ವ್ಯಾಧಿಗ್ರಸ್ತರಾಗಿದ್ದಾರೆ. ಕೊನೆಗೆ ಹಿಜ್ರೀ ಶಕ 256ರಲ್ಲಿ ಈದುಲ್‌ಫಿತ್ರ್ ಆ ದಿನ 62 ವರ್ಷಗಳ ವಯಸ್ಸಿನಲ್ಲಿ ಆತನು ಕೊನೆಯುಸಿರೆಳೆದ. -ರಹ್ಮತುಲ್ಲಾ ಅಲೈ-

## ಜಾಮೆ ಸಹೀಹ್ ಬುಖಾರೀ :–

ಇದು ಇಮಾಮ್ ಬುಖಾರೀ (ರಹ್ಮಲೈ) ಜೀವನವೆಲ್ಲಾ ಶ್ರಮಿಸಿ, ಅನೇಕ ಪ್ರಾಂತಗಳು ಪರ್ಯಾಟಿಸಿ ಸಂಕಲನ ಮಾಡಿದ ಹದೀಸು ಗ್ರಂಥ. ಆತನು ವಿವಿಧ ಪ್ರಾಂತಗಳಿಂದ ಒಟ್ಟಾರೆ ಆರು ಲಕ್ಷಗಳ ಹದೀಸುಗಳನ್ನು ಶೇಖರಿಸಿ, ಅವುಗಳಲ್ಲಿ ಈ ಗ್ರಂಥಕ್ಕೋಸ್ಕರ ಅತ್ಯಂತ ಪ್ರಾಮಾಣಿಕವಾದ 7,397 ಹದೀಸುಗಳನ್ನು ಆಯ್ಕೆ

ಮಾಡಿ ಸಂಕಲನ ಮಾಡಿದ್ದಾರೆ. ಈ 7,397 ಹದೀಸುಗಳಲ್ಲಿಂದ ಪುನರಾವೃತ್ತ ಹದೀಸುಗಳನ್ನು ತೆಗೆದುಹಾಕಿದರೇ 2,602 ಹದೀಸುಗಳು ಮಾತ್ರವೇ ಉಳಿದಿರುತ್ತವೆ. ಇವೆಲ್ಲಾ ಬಲಿಷ್ಠವಾದ ಆಧಾರಗಳಿರುವ ನಿಜವಾದ ಹದೀಸುಗಳು, ಇವುಗಳನ್ನು ಆತನು ವಿವಿಧ ಶೀರ್ಷಿಕೆಗಳ ಕೆಳಗೆ ಪ್ರಕರಣಗಳಾಗಿ, ಅಧ್ಯಾಯ ಗಳಾಗಿ ವಿಭಜಿಸಿ ಒಂದು ಕ್ರಮ ಪದ್ಧತಿಯಲ್ಲಿ ಸಂಕಲನ ಮಾಡಿದ್ದಾರೆ.

ಇಮಾಮ್ ಬುಖಾರೀ (ರಹ್ಮಲೈ) ಈ ಮಹಾ ಕಾರ್ಯವನ್ನು ನಿರಂತರವಾಗಿ 16 ವರ್ಷಗಳಿಂದ ಅಹೋರಾತ್ರಿಗಳು ಬೆವರು ಸುರಿಸಿ ಪೂರ್ತಿ ಮಾಡಿದ್ದಾರೆ. ಆತನು ಪ್ರತಿ ಹದೀಸು ಗ್ರಂಥ ತಯಾರು ಮಾಡುವುದಕ್ಕೆ ಮೊದಲನೆಯದಾಗಿ ಸ್ನಾನ ಮಾಡಿ, ಎರಡು ರಕಾತುಗಳು ನಫಿಲ್ ನಮಾಜ್ ಮಾಡುತ್ತಿದ್ದರು. ಆ ನಂತರವೇ ಆ ಹದೀಸು ಬರೆಯುವುದಕ್ಕೆ ಉಪಕ್ರಮಿಸುತ್ತಿದ್ದರು. ಈ ವಿಧವಾಗಿ ಆತನು ಎಲ್ಲಾ ಹದೀಸುಗಳನ್ನು ಪೂರ್ತಿ ಪರಿಶುದ್ಧಾವಸ್ಥೆಯಲ್ಲಿ, ಎಷ್ಟೋ ಭಕ್ತಿ ಭಾವದಿಂದ ಗ್ರಂಥ ತಯಾರು ಮಾಡಿದ್ದಾರೆ.

ಪ್ರಖ್ಯಾತಿ ಹೊಂದಿದ ನೂರಾರು ಮಂದಿ ಹದೀಸುವೇತ್ತರು ಈ ಗ್ರಂಥ ಪ್ರಾಮಾಣಿಕತೆಯನ್ನು ಪರೀಕ್ಷಿಸುವುದಕ್ಕೆ ವಿವಿಧ ರೀತಿಗಳಲ್ಲಿ ಪ್ರಯತ್ನಿಸಿದ್ದಾರೆ. ಆದರೆ ಯಾವ ಒಬ್ಬರೂ ಇದರಲ್ಲಿನ ಯಾವೊಂದು ಹದೀಸು ಪ್ರಾಮಾಣಿಕ ತೆಯೊಂದಿಗೆ ಕೂಡಾ ವಿಭೇದಿಸಲಾರದೆ ಹೋಗಿದ್ದಾರೆ. ಕನಿಷ್ಟ ಅದರ ಕಡೆ ಸಂದೇಹವನ್ನು ಕೂಡಾ ತಿಳಿಸಲಾರದೆ ಹೋಗಿದ್ದಾರೆ. ಕೊನೆಗೆ ಅವರೆಲ್ಲಾ ದಿವ್ಯ ಖುರ್‌ಆನ್ ನಂತರ ಬಲಿಷ್ಠವಾದ ಪ್ರಾಮಾಣಿಕತೆಯೊಂದಿಗೆ ಕೂಡಿದ ನಿಜ ಗ್ರಂಥ ಯಾವುದಾದರೂ ಇದೆಯೆಂದರೇ ಅದು ವಹೀಹ್ ಬುಖಾರೀ ಮಾತ್ರವೇಯೆಂದು ತೀರ್ಮಾನಿಸಿದ್ದಾರೆ. ಈ ವಿಧವಾಗಿ ಇಸ್ಲಾಮೀ ಗ್ರಂಥಗಳಲ್ಲಿ ಸಹೀಹ್ ಬುಖಾರೀ ದ್ವಿತೀಯ ಸ್ಥಾನ ಹೊಂದಿದೆ.

ಈ ಗ್ರಂಥ ಪ್ರಾಶಸ್ತ್ಯ, ಪ್ರತ್ಯೇಕತೆಗಳನ್ನು ಕುರಿತು ಹೇಳಬೇಕೆಂದರೇ ಎಷ್ಟೋ ವಿಷಯಗಳು ಇವೆ. ಇಲ್ಲಿ ಎರಡು ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತಿದ್ದೇವೆ. ಇದರಲ್ಲಿನ ಹದೀಸುಗಳನ್ನು ಸ್ವತಃವಾಗಿ ಇಮಾಮ್ ಬುಖಾರೀ (ರಹ್ಮಲೈ) ಬಾಯಿಂದ

ತೊಂಬತ್ತು ಸಾವಿರ ಮಂದಿ ಹದೀಸು ತಜ್ಞರು ಕೇಳಿದ್ದಾರೆ. ಈ ಗ್ರಂಥಕ್ಕೆ 53 ವಿವರಣೆ ಗ್ರಂಥಗಳು ಹೊರಬಂದಿವೆ. ಅವುಗಳಲ್ಲಿ ಕೆಲವು ವಿವರಣೆ ಗ್ರಂಥಗಳು ಹದಿನಾಲ್ಕು ಸಂಪುಟಗಳಲ್ಲಿ ಹೊರಬಂದಿವೆ. ಇದನ್ನನುಸರಿಸಿ ಸಹೀಹ್ ಬುಖಾರೀ ರವರ ಗ್ರಂಥ ಎಷ್ಟು ಜನಾಧರಣೆ ಹೊಂದಿದ ಗ್ರಂಥವೋ ಊಹಿಸಬಹುದು.

## ಇಮಾಮ್ ಮುಸ್ಲಿಂ (ರಹ್ಮಲೈ) :–

ಸಹೀಹ್ ಮುಸ್ಲಿಂ ಗ್ರಂಥವನ್ನು ಸಂಕಲನ ಮಾಡಿದ ಇಮಾಮ್ ಅಬುಲ್ ಹುಸೈನ್ ಮುಸ್ಲಿಂ ಬಿನ್ ಹಿಜಾಜ್ (ರಹ್ಮಲೈ) ಹಿಜ್ರೀ ಶಕ 204ರಲ್ಲಿ ನೀಷಾಪೂರ್‌ನಲ್ಲಿ ಜನ್ಮಿಸಿದ್ದಾರೆ. ಬಾಲ್ಯದಿಂದಲೇ ಹದೀಸು ವಿದ್ಯಾರ್ಜನೆಯಲ್ಲಿ ನಿಮಗ್ನರಾಗಿ ಹೋಗಿದ್ದಾರೆ. ಹದೀಸುಗಳ ಅನ್ವೇಷಣೆಗೋಸ್ಕರ ಆತನು ಇರಾಖ್, ಹಿಜಾಜ್, ಈಜಿಪ್ಟ್ ದೇಶಗಳನ್ನು ಪರ್ಯಾಟಿಸಿ, ಅಲ್ಲಿನ ಪಂಡಿತರ ಹತ್ತಿರ ಹದೀಸುಗಳನ್ನು ಕಲಿತುಕೊಂಡಿದ್ದಾರೆ. ಅಂತಹ ಪಂಡಿತರಲ್ಲಿ ಇಮಾಮ್ ಬುಖಾರೀ (ರಹ್ಮಲೈ) ರವರ ಗುರುಗಳು ಸಹ ಇದ್ದಾರೆ. ಕೊನೆಗೆ ಆತನು ನೀಷಾಪೂರ್‌ನಲ್ಲಿ ಇಮಾಮ್ ಬುಖಾರೀ (ರಹ್ಮಲೈ)ನ್ನು ಭೇಟಿಮಾಡಿ, ಆತನ ಹತ್ತಿರ ಕೂಡಾ ಶಿಷ್ಯತ್ವ ಮಾಡಿದ್ದಾರೆ.

ಆ ಕಾಲದಲ್ಲಿ ದೊಡ್ಡ ದೊಡ್ಡ ಹದೀಸುವೆತ್ತರು ಸಹಿತ ಆಗಾಗ ಇಮಾಮ್ ಮುಸ್ಲಿಂ (ರಹ್ಮಲೈ) ಹತ್ತಿರಕ್ಕೆ ಬಂದು ಹದೀಸುಗಳು ಕೇಳಿಹೋಗುತ್ತಿದ್ದರು. ಅವರಲ್ಲಿ ಅಬೂ ಹಾತಿಂ ರಾಜಿ (ರಹ್ಮಲೈ). ಮುಸಾಬಿನ್ ಹಾರೂನ್ (ರಹ್ಮಲೈ), ಅಹ್ಮದ್ ಬಿನ್‌ಸಲ್ಮ (ರಹ್ಮಲೈ), ಇಮಾಮ್ ತಿರ್ಮಿಜೀ (ರಹ್ಮಲೈ) ಪ್ರಭೃತರು ಸಹ ಇದ್ದಾರೆ. ಆತನು ಬಾಲ್ಯದಿಂದ ಅಂತಿಮ ಶ್ವಾಸದವರೆಗು ಎಷ್ಟೋ ದೈವಭೀತಿ, ಧರ್ಮ ಪಾರಾಯಣತರಲ್ಲಿ ಕೂಡಿದ ಪವಿತ್ರ ಜೀವನವನ್ನು ಕಳೆದಿದ್ದಾರೆ. ಆತನು ಯಾವಾಗಲೂ ಒಬ್ಬರನ್ನು ನಿಂದಿಸುವುದಾಗಲೀ, ಬಾಧಿಸುವುದಾಗಲೀ ಮಾಡಲಿಲ್ಲ.

ಇಮಾಮ್ ಮುಸ್ಲಿಂ ಮರಣ ಸಂಘಟನೆ ಬಹಳ ವಿಚಿತ್ರವಾಗಿ ನಡೆದಿದೆ. ಒಂದು ಬಾರಿ ಒಂದು ಪಂಡಿತ ಗೋಷ್ಠಿಯಲ್ಲಿ ಒಬ್ಬ ವ್ಯಕ್ತಿ ಯಾವುದೋ ಹದೀಸನ್ನು ಕುರಿತು ಸಮಾಚಾರವನ್ನು ಕೇಳಿದ್ದಾನೆ. ಆದರೇ ಆ ಸಮಯದಲ್ಲಿ

ಇಮಾಮ್‌ರವರಿಗೆ ಆ ಹದೀಸನ್ನು ಕುರಿತಿರುವ ಸರಿಯಾದ ವಿವರಗಳು ತಿಳಿಯದೆ ಹೋಗುವುದರಿಂದ ಸಮಾಧಾನ ಕೊಡಲಾರದೆ ಹೋಗಿದ್ದಾರೆ. ನಂತರ ಆತನು ಮನೆಗೆ ಹೋಗಿ ಆ ಹದೀಸನ್ನು ಅನ್ವೇಷಿಸಲಾರಂಭಿಸಿದ್ದಾರೆ. ಗ್ರಂಥ ಪುಟಗಳನ್ನು ತೆಗೆಯುತ್ತಾ ಪಕ್ಕದಲ್ಲೇ ಇರುವ ಖರ್ಜೂರ ಹಣ್ಣಿನ ಪುಟ್ಟಿಯಲ್ಲಿಂದ ಒಂದೊಂದು ಖರ್ಜೂರವನ್ನು ತೆಗೆದು ತಿನ್ನುತ್ತಾ ಹೋಗಿದ್ದಾರೆ. ಹದೀಸು ಅನ್ವೇಷಣೆಯಲ್ಲಿ ತಾನೆಷ್ಟು ಖರ್ಜೂರ ಹಣ್ಣುಗಳು ತಿಂದಿದ್ದಾನೆನ್ನುವ ವಿಷಯವನ್ನೂ ಸಹ ಗಮನಿಸಲಿಲ್ಲ. ಕೊನೆಗೆ ಅನ್ವೇಷಿಸುತ್ತಿರುವ ಹದೀಸು ಲಭಿಸಿದ ನಂತರ ಪುಟ್ಟಿಯ ಕಡೆ ನೋಡಿದರೆ ಅದು ಸುಮಾರು ಖಾಲಿ ಆಗಿಹೋಗಿದೆ. ಆಗ ಅರ್ಥವಾಯಿತು ಆತನಿಗೆ ಆತನು ಪುಟ್ಟಿಯಲ್ಲಿರುವ ಹಣ್ಣುಗಳನ್ನೆಲ್ಲಾ ತಿಂದಿದ್ದೇನೆಂದು. ಆದರೆ ಇನ್ನು ಮಾಡುವುದೇನೂ ಇಲ್ಲ, ನಡೆಯಬೇಕಾಗಿರುವುದು ನಡೆದುಹೋಗಿದೆ. ಹೆಚ್ಚು ಹಣ್ಣು ತಿನ್ನುವುದರಿಂದ ಆತನು ವ್ಯಾಧಿಗ್ರಸ್ತರಾಗಿದ್ದಾರೆ. ಆ ವ್ಯಾಧಿಯಿಂದಲೇ ಆತನು ಹಿಜ್ರೀ ಶಕ 261, ರಜಬ್ ತಿಂಗಳು 24ನೇ ತಾರೀಖು ಭಾನುವಾರದಂದು ಸಂಜೆ ಶಾಶ್ವತವಾಗಿ ಇಹಲೋಕವನ್ನು ಬಿಟ್ಟು ಹೋಗಿದ್ದಾರೆ. ಮರಣಿಸುವ ಸಮಯಕ್ಕೆ ಆತನ ವಯಸ್ಸು 55 ವರ್ಷಗಳು ಮಾತ್ರವೇ. ಸ್ವಗ್ರಾಮವಾದ ನೀಷಾಪೂರ್‌ನಲ್ಲೇ ಆತನನ್ನು ಸಮಾಧಿ ಮಾಡಿದ್ದಾರೆ.

ಅಬೂಹಾತಿಂ (ರಹ್ಮಲೈ) ಹೀಗೆ ತಿಳಿಸುತ್ತಿದ್ದಾರೆ. "ಇಮಾಮ್ ಮುಸ್ಲಿಂ (ರಹ್ಮಲೈ) ಮರಣಿಸಿದ ನಂತರ ಒಂದು ರಾತ್ರಿ ನಾನು ಆತನನ್ನು ಕನಸಿನಲ್ಲಿ ನೋಡಿದ್ದೇನೆ. ಆತನ ಹತ್ತಿರಕ್ಕೆ ಹೋಗಿ ನಿಮ್ಮ ಪರಿಸ್ಥಿತಿ ಹೇಗೆ ಇದೆಯೆಂದು ಕೇಳಿದ್ದೇನೆ. ಅದಕ್ಕೆ ಇಮಾಮ್ ಮುಸ್ಲಿಂ (ರಹ್ಮಲೈ) 'ದೇವರು ತನಗೆ ಒಳ್ಳೆಯ ಸ್ಥಿತಿ ಕಲ್ಪಿಸಿದ್ದಾನೆಂದು, ಸ್ವರ್ಗದಲ್ಲಿ ತಾನು ಕೋರಿಕೊಂಡ ಪ್ರದೇಶಕ್ಕೆ ಹೋಗುವ, ಕೋರಿಕೊಂಡ ಕಡೆ ಇರುವ ಹಾಗೆ ಅನುಮತಿಯನ್ನು ಕೊಟ್ಟಿದ್ದಾನೆಂದು ಅಂದಿದ್ದಾರೆ.

## ಜಾಮೆ ಸಹೀಹ್ ಮುಸ್ಲಿಂ :–

ಈ ಗ್ರಂಥವೂ ಸಹ ಹದೀಸುಗಳ ಪ್ರಾಮಾಣಿಕತೆ ರೀತಿಯಲ್ಲಿ, ಅವುಗಳ ಆರೋಗ್ಯ ಸ್ಥಿತಿ ರೀತ್ಯಾ ಸಹೀಹ್ ಬುಖಾರೀಗೆ ಸ್ವಲ್ಪವೂ ಕಡಿಮೆಯಲ್ಲ. ಸಹೀಹ್

ಮುಸ್ಲಿಂ ಸಹ ಸಹೀಹ್ ಬುಖಾರೀಯೊಂದಿಗೆ ಸಮಾನವಾದ ಬೆಲೆ ಇರುವ ಗ್ರಂಥವೆನ್ನುವ ವಿಷಯದಿಂದ ಧರ್ಮವೇತ್ತರೆಲ್ಲರೂ ಏಕೀಭವಿಸಿದ್ದಾರೆ.

ಇಮಾಮ್ ಮುಸ್ಲಿಂ (ರಹ್ಮಲೈ) ಈ ಗ್ರಂಥವನ್ನು ಎಷ್ಟೋ ಯುಕ್ತಿಯಿಂದ, ವಿವೇಕದಿಂದ ಸಂಕಲನ ಮಾಡಿದ್ದಾರೆ. ಆದ್ದರಿಂದ ಇದನ್ನು ಬಹಳ ಸುಲಭವಾಗಿ ಅಧ್ಯಯನ ಮಾಡುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಉಂಟಾಯಿತು. ಇಮಾಮ್ ಮುಸ್ಲಿಂ (ರಹ್ಮಲೈ) ಈ ಗ್ರಂಥದಲ್ಲಿ ಅಲ್ಪಸ್ವಲ್ಪ ಒಂದೇ ಭಾವವಿರುವ ಹದೀಸುಗಳೆಲ್ಲವೂ ಒಂದು ಕಡೆ ಸೇರಿಸಿದ್ದಾರೆ. ಅದರೊಂದಿಗೆ ಹದೀಸುಗಳ ಪ್ರಮಾಣ ಪದ್ಧತಿಗಳನ್ನು, ಅವುಗಳ ಪದ ಜಾಲಗಳಲ್ಲಿನ ವ್ಯತ್ಯಾಸಗಳನ್ನು ಸಹ ಸಂಕ್ಷಿಪ್ತ ವಾಕ್ಯಗಳಲ್ಲಿ ಬಹಳ ಜಾಗ್ರತೆಯಾಗಿ ತಿಳಿಸಿದ್ದಾರೆ.

ಇಮಾಮ್ ಮುಸ್ಲಿಂ (ರಹ್ಮಲೈ) ಯಾವತ್ತು ಮುಸ್ಲಿಂ ಜಗತ್ತಿನಲ್ಲಿ ನಡೆಸಿದ ತನ್ನ ಸುದೀರ್ಘ ಪರ್ಯಾಟನ ಸಂದರ್ಭವಾಗಿ ನಾಲ್ಕು ಲಕ್ಷಗಳ ಹದೀಸುಗಳನ್ನು ಶೇಖರಿಸಿದ್ದಾರೆ. ಮೊದಲು ಅವುಗಳಲ್ಲಿ ಒಂದು ಲಕ್ಷ ಪುನರಾವೃತ್ತ ಹದೀಸುಗಳನ್ನು ತೆಗೆದುಹಾಕಿ ಮೂರು ಲಕ್ಷಗಳ ಹದೀಸುಗಳನ್ನು ಸಂಕಲನ ಮಾಡಿದ್ದಾರೆ. ಆ ನಂತರ ಒಂದು ಸುದೀರ್ಘಕಾಲದಿಂದ ಅವುಗಳನ್ನು ನಿಶಿತವಾಗಿ ಪರಿಶೀಲಿಸಿ ಕೊನೆಗೆ ಎಲ್ಲ ವಿಧಗಳಲ್ಲಿ ನಂಬಿಕೆವಾದವೆಂದು, ಪ್ರಾಮಾಣಿಕವಾದವೆಂದು, ಭಾವಿಸಿದ ಹದೀಸುಗಳನ್ನು ಮಾತ್ರವೇ ಆತನು ಈ ಗ್ರಂಥಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಹೀಗೆ ಮೂರು ಲಕ್ಷಗಳ ಹದೀಸುಗಳಲ್ಲಿ 7,275 ಹದೀಸುಗಳು ಮಾತ್ರವೇ ಗ್ರಂಥ ಮಾಡಲಾಗಿವೆ. ಆದರೇ ಅವುಗಳಲ್ಲಿಯೂ ಪುನರಾವೃತ ಹದೀಸುಗಳನ್ನು ತೊಲಗಿಸಿದರೆ ನಾಲ್ಕು ಸಾವಿರ ಹದೀಸುಗಳು ಮಾತ್ರವೇ ಉಳಿಯುತ್ತವೆ.

ಇಮಾಮ್ ಮುಸ್ಲಿಂ (ರಹ್ಮಲೈ) ಸ್ವತಃವಾಗಿ ತನ್ನ ಗ್ರಂಥವನ್ನು ಕುರಿತು ಹೀಗೆ ಅಂದಿದ್ದಾರೆ. "ನಾನು ಈ ಗ್ರಂಥದಲ್ಲಿ ಯಾವ ಹದೀಸನ್ನು ಗ್ರಂಥಸ್ತ ಮಾಡಿದರೂ ತೀಕ್ಷಣವಾಗಿ ಆಲೋಚಿಸಿದ ಮೇಲೆ ತಕ್ಕಾದ ಆಧಾರಗಳೊಂದಿಗೇ ಅದನ್ನು ಗ್ರಂಥಸ್ತ ಮಾಡಿದ್ದೇನೆ. ಹಾಗೇ ಈ ಗ್ರಂಥದಲ್ಲಿಂದ ಯಾವ ಹದೀಸನ್ನು ತೊಲಗಿಸಿದರೂ ತೀಕ್ಷಣವಾಗಿ ಆಲೋಚಿಸಿದ ನಂತರ ಸರಿಯಾದ ಆಧಾರ ಗಳೊಂದಿಗೇ ಅದನ್ನು ತೊಲಗಿಸಿದ್ದಾರೆ. ಆದ್ದರಿಂದ ಪ್ರಪಂಚದಲ್ಲಿನ ಜನರೆಲ್ಲಾ ಎರಡು

ನೂರು ವರ್ಷಗಳಿಂದ ಹದೀಸುಗಳನ್ನು ಪರಿಶೀಲಿಸಿ ಬರೆದರೂ, ಕೊನೆಗೆ ಅವರ ನಂಬಿಕೆ ಈ ಗ್ರಂಥದ ಮೇಲೇ ಇರುತ್ತದೆ.”

ಸಹೀಹ್ ಮುಸ್ಲಿಂ, ಸಹೀಹ್ ಬುಖಾರೀ ಗ್ರಂಥಗಳಲ್ಲಿ ಪ್ರಾಮಾಣಿಕತೆ, ಮತ್ತಿತರೆ ವಿಷಯಗಳ ರೀತ್ಯಾ ಯಾವುದು ದೊಡ್ಡದು ಎನ್ನುವ ವಿಷಯದಲ್ಲಿ ಧರ್ಮವೆತ್ತರ ಮಧ್ಯೆ ಭಿನ್ನಾಭಿಪ್ರಾಯಗಳು ಇವೆ. ಸಹೀಹ್ ಬುಖಾರೀ ಎಲ್ಲದಕ್ಕಿಂತ ಉನ್ನತವಾದುದೆಂದು ಕೆಲವರ ಅಭಿಪ್ರಾಯವಿದ್ದರೇ, ಸಹೀಹ್ ಮುಸ್ಲಿಂ ಎಲ್ಲದಕ್ಕಿಂತ ಉನ್ನತವಾದ ಗ್ರಂಥವೆಂದು, ಮತ್ತೆ ಕೆಲವರು ಅಭಿಪ್ರಾಯಪಟ್ಟರು. ಈ ಎರಡು ಅಭಿಪ್ರಾಯಗಳಿಗೆ ಭಿನ್ನವಾಗಿ ಇನ್ನು ಕೆಲವರು, ಕೆಲವು ವಿಷಯಗಳ ರೀತ್ಯಾ ಸಹೀಹ್ ಬುಖಾರೀ ಉನ್ನತವಾದುದು, ಮತ್ತು ಕೆಲವು ವಿಷಯಗಳ ರೀತ್ಯಾ ಸಹೀಹ್ ಮುಸ್ಲಿಂ ಉನ್ನತವಾದುದೆಂದು ಅಭಿಪ್ರಾಯಪಟ್ಟಿದ್ದಾರೆ.

ಏನಾದರೂ ಈ ಗ್ರಂಥಕರ್ತರು ಇಬ್ಬರೂ ದೊಡ್ಡ ಧರ್ಮ ಪಾರಾಯಣರು, ದೈವಭೀತಿಪರರು, ನಿಜಾಯಿತೀ ಪರರೆನ್ನುವ ವಿಷಯದಲ್ಲಿ ಮಾತ್ರ ಯಾರ ಮಧ್ಯೆ ಎಂತಹ ಭೇದಾಭಿಪ್ರಾಯವಿಲ್ಲ. ಅಂತಹ ಮಹನೀಯರು ಸಂಕಲನ ಮಾಡಿದ ಬುಖಾರೀ, ಮುಸ್ಲಿಂ ಗ್ರಂಥಗಳಲ್ಲಿನ ಏಕೀಭವಿತ (ಮುತ್ತಫಖುನ್‌ಅಲೈ) ಹದೀಸುಗಳ ಸಂಗತಿ ಇನ್ನು ಹೇಳುವುದೇನಿದೆ? ಬಲಿಷ್ಠವಾದ ಪ್ರಾಮಾಣಿಕ ಗ್ರಂಥಗಳಲ್ಲಿನ ಈ ‘ಏಕೀಭವಿತೆ’ ಹದೀಸುಗಳು ಮತ್ತೆಷ್ಟು ಪ್ರಾಮಾಣಿಕವಾದವೋ ಪ್ರತ್ಯೇಕವಾಗಿ ವಿವರಿಸಬೇಕಾದ ಅವಶ್ಯವಿಲ್ಲ.

ಸಹೀಹ್ ಬುಖಾರೀ, ಸಹೀಹ್ ಮುಸ್ಲಿಂರನ್ನು ಎರಡು ಸಮುದ್ರಗಳಾಗಿ, ಅವುಗಳಲ್ಲಿ ಇರುವ ಹದೀಸುಗಳನ್ನು ಮುತ್ತುಗಳಾಗಿ, ಹವಳಗಳಾಗಿ ಪ್ರಸ್ತುತ ಸಂಕಲನಕರ್ತ ಫವ್ವಾದ್ ಅಬ್ದುಲ್ ಬಾಖೀ ಅಭಿವರ್ಣಿಸಿದ ವಿಷಯ ಪ್ರಾರಂಭದಲ್ಲಿ ನಾನು ಪ್ರಸ್ತಾವಿಸಿದ್ದೇನೆ. ಅಂದರೆ ಒಂದು ಸಮುದ್ರದಲ್ಲಿ ಮುತ್ತುಗಳು ಇದ್ದರೇ, ಮತ್ತೊಂದು ಸಮುದ್ರದಲ್ಲಿ ಹವಳಗಳು ಇವೆ. ಈ ಎರಡೂ ಸಮುದ್ರಗಳಲ್ಲಿಯೂ ಮುತ್ತುಗಳು, ಹವಳಗಳನ್ನು ಆರಿಸಿ ಒದಗಿಸಿದ ಹಾರ ಇನ್ನೆಷ್ಟು ಬೆಲೆಯುಳ್ಳದ್ದೋ ಊಹಿಸಿರಿ. ಆ ಅಮೂಲ್ಯವಾದ ಹಾರವೇ ನಿಮ್ಮ ಮುಂದೆ ಇರುವ ಈ ಗ್ರಂಥ!

**ಇದರಲ್ಲಿ ಒಟ್ಟಾರೆ 1906 ಹದೀಸುಗಳಿವೆ. ಸಹೀಹ್ ಬುಖಾರೀಯಲ್ಲಿ ಪುನರಾವೃತ ಹದೀಸುಗಳು ತೆಗೆದುಹಾಕಿದಾಗ 2602 ಹದೀಸುಗಳು ಇವೆ. ಅಂದರೇ ಈ ಗ್ರಂಥದಲ್ಲಿ ಸಹೀಹ್ ಬುಖಾರೀಯಲ್ಲಿನ 696 ಹದೀಸುಗಳು ಕಡಿಮೆಯಾಗಿವೆ. ಮತ್ತೊಂದು ಮಾತಿನಲ್ಲಿ ಹೇಳಬೇಕೆಂದರೇ ಇಮಾಮ್ ಮುಸ್ಲಿಂ (ರಹ್ಮಲೈ) ರವರ ಗ್ರಂಥದಲ್ಲಿ ಇಲ್ಲದ 696 ಹದೀಸುಗಳು ಇಮಾಮ್ ಬುಖಾರೀ (ರಹ್ಮಲೈ) ರವರ ಗ್ರಂಥದಲ್ಲಿ ಅಳವಡಿಸಲಾಗಿವೆ. ಬೇರೊಂದು ವಿಧವಾಗಿ ಹೇಳಬೇಕೆಂದರೇ ಈ 696 ಹದೀಸುಗಳ ವಿಷಯದಲ್ಲಿ ಇಬ್ಬರು ಇಮಾಮುಗಳ ಮಧ್ಯೆ ಪೂರ್ತಿಯಾಗಿ ಏಕೀಭಾವ ಇಲ್ಲವೆನುಸುತ್ತದೆ.**

ಈಗ ಅವುಗಳಿಂದ ನಾವು ಲೆಕ್ಕ ಹಾಕಿಕೊಳ್ಳುತ್ತಾ ಹೋದರೇ ಇನ್ನೂ ನಮಗೆ ಎಷ್ಟು ಕೊನೆಗೆ ಉಳಿದಿವೆ ಎಂದರೇ 1900 ಹದೀಸುಗಳೇ ಮುಖ್ಯವಾಗಿ ನಾವು ತೆಗೆದುಕೊಂಡಿದ್ದೇವೆ. ಅಂದರೇ ಇಮಾಮ್ ಬುಖಾರಿರವರು ಬರೆದಿರುವುದನ್ನು ಇಮಾಮ್ ಮುಸ್ಲೀಮ್ ರವರು ಒಪ್ಪಿಕೊಳ್ಳುತ್ತಿಲ್ಲ. ಇಮಾಮ್ ಮುಸ್ಲೀಮ್‌ರವರು ಬರೆದಿರುವುದನ್ನು ಇಮಾಮ್ ಬುಖಾರಿರವರು ಒಪ್ಪಿಕೊಳ್ಳುತ್ತಿಲ್ಲ. ಆ ವಿಧವಾಗಿ ಇಬ್ಬರ ವಾಕ್ಯಗಳಲ್ಲಿ ಬೇದಾಭಿಪ್ರಾಯಗಳು ಬಂದಿವೆ, ಆದ್ದರಿಂದ ಅವೆಲ್ಲಾ ತೆಗೆದುಹಾಕಿದರೇ ಕೊನೆಗೆ ನಮಗೆ ಸುಮಾರು 1906 ಹದೀಸುಗಳು ಉಳಿದಿವೆ. ಈ ವಿಧವಾಗಿ ನಾವು ಲೆಕ್ಕಹಾಕಿಕೊಂಡರೇ 1906 ಹದೀಸುಗಳನ್ನು ಗಟ್ಟಿಯಾಗಿ ಈ ದಿನ ನಾವು ಶೇಖರಿಸಿ ಇಟ್ಟು ಕೊಂಡಿದ್ದೇವೆ. ಹೀಗೆ ಇರುವಂತಹವುಗಳಲ್ಲಿ ಯಾವು ಸರಿಯಾದವೋ, ಯಾವು ಸರಿಯಾದವು ಅಲ್ಲವೋ ಎಂದು ನಾವು ಲೆಕ್ಕಹಾಕಿಕೊಂಡರೆ, ಈಗ ಪ್ರತಿ ಒಬ್ಬರು ಎಲ್ಲಾ ಸತ್ಯವೇ ಎಂದು ನಂಬುವಂತಹ ಪರಿಸ್ಥಿತಿ ಬಂದಿದೆ. ಆ ಲೆಕ್ಕದ ಪ್ರಕಾರ ಹೋದರೇ ಅವೆಲ್ಲಾ ಖುರ್‌ಆನ್ ಗ್ರಂಥಕ್ಕೆ ಭಂಗ ಉಂಟಾಗುವಂತೆ, ಪ್ರವಕ್ತ ವಾಕ್ಯಗಳಿಗೆ ಭಂಗ ಉಂಟಾಗುವ ವಿಧವಾಗಿ ಇವೆಯೆಂದು ಆ ದಿನ ಹದೀಸು ಪಂಡಿತರೇ ಅವುಗಳನ್ನು ತೆಗೆದುಹಾಕುವುದು ನಡೆದಿದೆ. ಇದು ನಾವು ಹೇಳಿಕೊಳ್ಳಬೇಕಾದ ವಿಷಯ, ಅರ್ಥವಾಗಬೇಕಾದ ವಿಷಯ. ನಿಮಗೆ ಖುರಾನ್ ಅಂದರೆ ಏನೋ ತಿಳಿದಿಲ್ಲ, ಹದೀಸು ಎಂದರೇ ಏನೋ ತಿಳಿದಿಲ್ಲ ಆದ್ದರಿಂದ

ನಿಮಗೆ ಮುಂಚಿತವಾಗಿ ಹದೀಸುಗಳೆಂದರೇ ಇವು, ಖುರಾನ್ ಅಂದರೇ ಇದು ಎಂದು ಹೇಳುತ್ತಿದ್ದೇವೆ. ಈ ದಿನ ಮುಸ್ಲೀಮ್‌ರೆಲ್ಲರೂ ಹೆಚ್ಚಾಗಿ ಹದೀಸುಗಳನ್ನೇ ಆಚರಿಸುತ್ತಿದ್ದಾರೆ. ಅಂದರೇ 95% ಹದೀಸುಗಳನ್ನು, ಕೇವಲ 5% ಮಾತ್ರ ಖುರಾನ್‌ನನ್ನು ಅನುಸರಿಸುತ್ತಿದ್ದಾರೆಂದು ನಾವು ಹೇಳಿಕೊಳ್ಳಬೇಕು. ಈಗ ಖುರಾನ್‌ವೊಂದರ ಪವಿತ್ರತೆಯನ್ನು ಈ 'ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀ' ದೊಡ್ಡದಾಗಿ ಹೇಳಿಕೊಳ್ಳುತ್ತಾ ಇದೆ, ಖುರ್‌ಆನ್‌ವೊಂದರ ಪವಿತ್ರತೆಯನ್ನು ಅದು ಕಾಪಾಡುತ್ತಾ ಇದೆ. ಅಲ್ಲಿ ಖುರ್‌ಆನ್‌ವೊಂದರ ಪವಿತ್ರತೆ ನಂತರ ಮುಹಮ್ಮದ್ ಪ್ರವಕ್ತರವರ ಗೌರವಕ್ಕೆ ಎಲ್ಲೂ ಭಂಗ ಉಂಟಾಗದಂತೆ ಮಾಡುವಂತಹ ವಿಧಾನ ಈ ಸೊಸೈಟೀಯಲ್ಲಿ ಇದೆ, ಆದ್ದರಿಂದ ಈಗ ನಮಗೆ ಅಂತಹದ್ದು ತಪ್ಪು ಯಾವುದಾದರೂ ಎಲ್ಲಾದರೂ ಹದೀಸುಗಳಲ್ಲಿ ಕಾಣಿಸಿದರೂ, ಕೆಲವು ಲಕ್ಷಗಳ ಹದೀಸುಗಳನ್ನು ಅವರು ತೆಗೆದುಹಾಕಿದಾಗ, ನಾವು ಕೂಡಾ ಒಂದೋ ಎರಡೋ ಪಕ್ಕಕ್ಕೆ ಇಟ್ಟು, ಅದಕ್ಕಿಂತ ಮುಖ್ಯವಾದವು ಖುರ್‌ಆನ್ ಎಂದು ಹೇಳಿಕೊಳ್ಳುವುದು ನಮಗೆ ನಡೆಯುತ್ತದೆ. ಆ ಲೆಕ್ಕದ ಪ್ರಕಾರ ಹೋದರೆ ಖುರ್‌ಆನ್ ಗ್ರಂಥ ನಂತರ ಈ ಹದೀಸು ಗ್ರಂಥಗಳು ಬಂದಿವೆಯೆಂದು ತಿಳಿಯುತ್ತಿವೆ. ಹದೀಸುಗಳಲ್ಲಿ ಇನ್ನು ನಮಗೆ ಯೋಗ್ಯವಾದವು ಎಷ್ಟು? ಅಯೋಗ್ಯವಾದವು ಎಷ್ಟು? ಎಂದು ತಿಳಿದುಕೊಳ್ಳಬೇಕು. ಆ ವಿಧವಾಗಿ ನಾವು ಲೆಕ್ಕಹಾಕಿಕೊಳ್ಳುತ್ತಾ ಹೋದರೇ, ಹದೀಸುಗಳು, ಖುರ್‌ಆನ್ ಇವು ನಿಮಗೆ ಹೊಸ ವಾಕ್ಯಗಳಾಗಿ ಕಾಣಿಸಿದರೂ, ಇವು ನಾವು ಇಸ್ಲಾಮ್ ಮತವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬುನಾದಿಯಂತಹವು ಎಂದು ಹೇಳಿದರೂ ಹದೀಸುಗಳಿಗಿಂತ ಖುರ್‌ಆನ್ ಗ್ರಂಥವೇ ಮುಸ್ಲಿಮ್‌ರಿಗೆ ಮುಖ್ಯವಾದುದೆಂದು ಇನ್ನು ಕೆಲವರು ಹೇಳುತ್ತಿದ್ದಾರೆ. ಖುರ್‌ಆನ್ ದೈವಗ್ರಂಥವೆಂದು ನಾವು ಹೇಳುತ್ತಿದ್ದೇವೆ.

ಪ್ರಬೋಧಾನಂದ ಯೋಗೀಶ್ವರರು ಭಗವದ್ಗೀತೆ ಹೇಳುತ್ತಿದ್ದಾರೆ, ಇನ್ನೂ ಇಸ್ಲಾಮ್‌ದೊಳಗೆ ಹೋಗಿದ್ದಾನೆ ಎಂದು ನೀವು ಅಂದುಕೊಳ್ಳಬೇಡಿ. ನಾನು ಕ್ರೈಸ್ತವದಲ್ಲಿ ಮಾತನಾಡುತ್ತಿದ್ದೇನೆ, ಇಸ್ಲಾಮ್‌ದಲ್ಲಿ ಮಾತನಾಡುತ್ತಿದ್ದೇನೆ,

ಹಿಂದೂತ್ವದಲ್ಲಿ ಕೂಡಾ ಮಾತನಾಡುತ್ತಿದ್ದೇನೆ. ಈ ದಿನ 'ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀರವರು ನನ್ನನ್ನು ಕೇಳಿದಾಗ, ನನಗೆ ತಿಳಿದಷ್ಟುಮಟ್ಟಿಗೆ ನಾನು ಕೆಲವು ವಿಷಯಗಳು ಅವರೊಂದಿಗೆ ಹೇಳಿದ್ದೇನೆ. ಆ ಹೇಳಿದ ವಿಷಯಗಳನ್ನೇ ನಿಮಗೂ ಕೂಡಾ ಈಗ ತಿಳಿಸುತ್ತಿದ್ದೇವೆ. ನೀವು ಕೂಡಾ ಇದನ್ನೇ ಅರ್ಥ ಮಾಡಿಕೊಳ್ಳುವುದಾದರೇ, ಇಸ್ಲಾಮ್ ಅಂದರೇ ಏನು? ಇಂದೂತ್ವ ಎಂದರೇ ಏನು? ಎನ್ನುವುದು ತಿಳಿಯುತ್ತದೆ. ಒಬ್ಬರಿಗೊಬ್ಬರು ದ್ವೇಷಗಳು ಬೆಳಸಿಕೊಳ್ಳದಂತೆ ನಿಮ್ಮ ದೇವರು ಬೇರೆ, ನಮ್ಮ ದೇವರು ಬೇರೆ ಎಂದು ಅಂದುಕೊಳ್ಳದಂತೆ ಎಲ್ಲರೂ ಜ್ಞಾನವನ್ನು ಕುರಿತು ಅವಗಾಹನೆ ಮಾಡಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಹಿಂದೂಗಳನ್ನು ಆ ಮತದೊಳಗೆ ಹೋಗೆಂದು ಹೇಳಲಿಲ್ಲ ಅಲ್ಲವೆ! ಮುಸ್ಲೀಮ್‌ರನ್ನು ಈ ಮತದೊಳಗೆ ಬಾಯೆಂದು ಹೇಳಲಿಲ್ಲ ಅಲ್ಲವೆ! ಯಾರನ್ನೂ ಮತಗಳು ಬದಲಾಯಿಸಿಕೋ ಎಂದು ನಾನು ಹೇಳಲಿಲ್ಲ ಅಲ್ಲವೆ! ಮತದಲ್ಲಿ ಇರುವ ಸಾರಾಂಶ ತಿಳಿದುಕೋಯೆಂದು ಹೇಳುತ್ತಿದ್ದೇನೆ. ಯಾವ ಮತದಲ್ಲಿ ಇರುವವರು ಆ ಮತದಲ್ಲಿಯೇ ಇರಿ. ಮತಗಳ ಮಾರ್ಪಾಟು ಒಳ್ಳೆಯದಲ್ಲ ಎಂದು ನಾವು ಆದಿಯಿಂದಲೇ ಹೇಳುತ್ತಿದ್ದೇವೆ. ಅಷ್ಟು ಮಾತ್ರಕ್ಕೆ ನೀವು ಬೆಚ್ಚಿಬೀಳುವುದು ಏಕೆ? ಆ ವಿಧವಾಗಿ ಅಸೂಯೆ ಇಲ್ಲದಂತೆ ವಿಷಯವನ್ನು ಅವಗಾಹನೆ ಮಾಡಿಕೊಳ್ಳಿ. ಅವಗಾಹನೆ ಮಾಡಿಕೊಳ್ಳುವುದು ತಪ್ಪಲ್ಲ ಅಲ್ಲವೆ! ಇದೇನೂ ನಿಮಗೆ ದುಷ್ಟಕಾರ್ಯ ಅಲ್ಲ ಅಲ್ಲವೆ! ಮತ್ತೆ ನಾವು ಎಷ್ಟೋ ಕೆಲಸಕ್ಕೆ ಬಾರದ ಕೆಲಸಗಳನ್ನು ಮಾಡುತ್ತಿದ್ದೇವೆ. ಕಳ್ಳತನಗಳನ್ನು ಮಾಡುತ್ತಿದ್ದೇವೆ, ಎಷ್ಟೋ ವಿಧಗಳಾದ ಮೋಸಗಳನ್ನು ಮಾಡುತ್ತಿದ್ದೇವೆ, ಎಷ್ಟೋ ಹೀನವಾದ ಕೆಲಸಗಳನ್ನು ಮಾಡುತ್ತಿದ್ದೇವೆ. ಒಂದು ಪವಿತ್ರ ಗ್ರಂಥವನ್ನು ಕುರಿತು ತಿಳಿದುಕೊಳ್ಳುವುದು ಹೀನವಾದ ಕೆಲಸವೇನೂ ಅಲ್ಲ ಅಲ್ಲವೆ! ಅದೇನೂ ಕೆಟ್ಟ ಕೆಲಸ ಅಲ್ಲ ಅಲ್ಲವೆ! ಆದರೇ ಕೆಲವು ಮಂದಿ ನಮ್ಮನ್ನು ಕೂಡಾ ನಿಂದಿಸಿದವರು ಇದ್ದಾರೆ. ಅವರು ಅಜ್ಞಾನಿಗಳು, ಅವರೊಂದಿಗೆ ನಮಗೆ ಕೆಲಸವಿಲ್ಲ ಎನ್ನುವ ಉದ್ದೇಶದಿಂದ ನಮ್ಮ ಕೆಲಸ ನಾವು ಮಾಡುತ್ತಿದ್ದೇವೆಂದರೇ ಒಬ್ಬರ ಆರೋಪಣೆಯನ್ನು ಕುರಿತು ನಾವು ಹಿಡಿಸಿ ಕೊಳ್ಳಲಿಲ್ಲ. ನಾವು ದೇವರ ಜ್ಞಾನವನ್ನು ಪ್ರಚಾರ ಮಾಡಬೇಕೆಂದು

ಕೊಂಡಿದ್ದೇವೆ. ದೇವರ ಜ್ಞಾನವನ್ನೇ ಹೇಳುತ್ತಿದ್ದೇವೆ. ಆದ್ದರಿಂದ ಈ ದಿನ ನಮ್ಮ ಸಂಘವಾದ **"ಪ್ರಬೋಧ ಸೇವಾ ಸಮಿತಿ"** ಯಲ್ಲಿ ಎಷ್ಟೋ ಮಂದಿ ಮುಸ್ಲೀಮ್‌ರು ಇದ್ದಾರೆ. ಎಷ್ಟೋ ಮಂದಿ ಕ್ರೈಸ್ತವರು ಇದ್ದಾರೆ. ಅವರೆಲ್ಲರೂ ನಮ್ಮ ಜ್ಞಾನವನ್ನು ಅರ್ಥ ಮಾಡಿಕೊಂಡಿದ್ದರೆ ಅಲ್ಲವೆ! ಇಲ್ಲಿಗೆ ಬರುವುದು? ಆದರೆ ಮತದ್ವೇಷಗಳು ಇಟ್ಟುಕೊಂಡರೇ ಯಾರಾದರೂ ಇಲ್ಲಿಗೆ ಬರುತ್ತಾರಾ? ಆದರೇ ಮತದ್ವೇಷಗಳು ಇಲ್ಲದಂತೆ ಇರಬೇಕು ಎಂದರೇ ಮೊದಲು ನಿಮಗೆ ಮತಗಳ ಅವಗಾಹನೆ ಇರಬೇಕು. ಯಾವ ಮತದಲ್ಲಿ ಏನಿದೆ ಎನ್ನುವುದನ್ನು ತಿಳಿಯಬೇಕು. ಈಗ ನಮಗೆ ಕ್ರೈಸ್ತವ ಮತವನ್ನು ಕುರಿತು ಪೂರ್ತಿಯಾಗಿ ತಿಳಿದಿಲ್ಲ. ಅದರಲ್ಲಿ ಕೂಡಾ ಅದರ ವಿಷಯಗಳು ತಿಳಿಸುತ್ತೇವೆ. ಹಾಗೇ ಇಸ್ಲಾಮ್ ಮತವನ್ನು ಕುರಿತು ಪೂರ್ತಿಯಾಗಿ ತಿಳಿದಿಲ್ಲ ಆದ್ದರಿಂದ ನಾವು ಕೆಲವು ವಿಷಯಗಳು ಮಾತ್ರವೇ ನಿಮಗೆ ತಿಳಿಸುತ್ತಿದ್ದೇವೆ. ಆ ವಿಷಯಗಳನ್ನು ನೀವು ಪರಿಶೀಲಿಸಿದರೇ ಈಗ ಖುರ್‌ಆನ್ ಅಂದರೆ ಏನು? ಹದೀಸು ಎಂದರೆ ಏನು? ಎಂದು ನಿಮಗೆ ತಿಳಿದುಹೋಗುತ್ತದೆ.

ಹದೀಸು ಸಾಂಪ್ರದಾಯಗಳು, ಖುರ್‌ಆನ್ ಜ್ಞಾನ ಸ್ವಲ್ಪದಮಟ್ಟಿಗೆ ತಿಳಿದುಕೊಂಡಿದ್ದೇವೆ. ನಮಗೆ ಭಗವದ್ಗೀತೆಯಲ್ಲಿ ದೇವರ ಜ್ಞಾನ ಇದೆ ಆದರೆ ನೀವು ಪಂಚೆ ಕಟ್ಟಿಕೊಳ್ಳುವುದು, ಬೊಟ್ಟು ಇಟ್ಟುಕೊಳ್ಳುವುದು ಎನ್ನುವವು ದೇವರ ಜ್ಞಾನ ಅಲ್ಲ ಅವು ಭಗವದ್ಗೀತೆಯಲ್ಲಿ ಇಲ್ಲ. ನೀನು ಇಟ್ಟುಕೊಂಡರೂ, ಇಟ್ಟುಕೊಳ್ಳದಿದ್ದರೂ ದೇವರ ಜ್ಞಾನ ಎನ್ನುವುದು ನಿನ್ನ ಒಳಗೇ ಇರುತ್ತದೆ. ಇವೆಲ್ಲಾ ಸಾಂಪ್ರದಾಯಗಳು, ಆದರೇ ಸಾಂಪ್ರದಾಯಗಳು ಬೇರೆ, ಜ್ಞಾನ ಬೇರೆ. ಈಗ ನಾವು ತಿಳಿದುಕೊಳ್ಳುವುದು ಏನು ಎಂದರೇ ಇಸ್ಲಾಮ್ ಮತದಲ್ಲಿ ಇರುವ ಸಾಂಪ್ರದಾಯಗಳು ತಿಳಿದುಕೊಂಡರೇ, ನಾವು ಅವುಗಳಲ್ಲಿ ಇರುವ ಅರ್ಥವೇನು ಎಂದು ತಿಳಿದುಕೊಳ್ಳುತ್ತೇವೆ. ಆದರೆ ಇಲ್ಲಿ ಮುಖ್ಯವಾಗಿ ಏನು ಹೇಳುತ್ತಿದ್ದೇವೆ ಎಂದು ಗಮನಿಸಿದರೇ ನೀವು ಅರ್ಥ ಮಾಡಿಕೊಳ್ಳಬೇಕಾಗಿರುವುದು ಜ್ಞಾನಕ್ಕಿಂತ ಸಾಂಪ್ರದಾಯಗಳು ಮುಖ್ಯವಾದವು ಅಲ್ಲ, ದೊಡ್ಡವೂ ಅಲ್ಲ. ಜ್ಞಾನ ನಂತರವೇ ನಿಮಗೆ ಸಂಪ್ರದಾಯಗಳು ಆದ್ದರಿಂದ ಮೊದಲು ದೇವರ

ಜ್ಞಾನವನ್ನು ತಿಳಿದುಕೋ! ಖುರಾನ್ ಗ್ರಂಥದಲ್ಲಿ ಇರುವ ದೈವತ್ವವನ್ನು ತಿಳಿದುಕೋ! ನಂತರ ಇಸ್ಲಾಮ್ ಮತದಲ್ಲಿ ಇರುವಂತಹ ಸಾಂಪ್ರದಾಯಗಳು ಕಲಿತುಕೊಳ್ಳಿ. ನಿಮಗೆ ಮತ ಮುಖ್ಯವಲ್ಲ, ದೈವತ್ವ ಮುಖ್ಯ. ಆದ್ದರಿಂದ ನೀವು ಖುರ್‌ಆನ್ ಗ್ರಂಥವನ್ನು ದೊಡ್ಡದಾಗಿ ನೋಡಿಕೊಳ್ಳಿ. ನಂತರ ಹದೀಸು ಗ್ರಂಥವನ್ನು ನೋಡಿಕೊಳ್ಳಿ. ಮೊಟ್ಟಮೊದಲೇ ಹದೀಸು ಗ್ರಂಥವನ್ನು ನೋಡಿಕೊಂಡು ಖುರ್‌ಆನ್ ಗ್ರಂಥವನ್ನು ಪಕ್ಕದಲ್ಲಿಡಬೇಡಿ. ಅದಕ್ಕೆ ಬೆಲೆ ಇಲ್ಲದಂತೆ ಮಾಡಬೇಡಿ. ಆದ್ದರಿಂದ ನಾವು ಏನು ಹೇಳುತ್ತಿದ್ದೇವೆಂದರೆ ಮುಹಮ್ಮದ್ ಪ್ರವಕ್ತರವರ ಗೌರವಕ್ಕೆ ಧಕ್ಕೆ ಇಲ್ಲದಂತೆ ದೇವರವೊಂದರ ಶಕ್ತಿಗೆ ಮಾತ್ರ ಭಂಗ ಉಂಟಾಗದಂತೆ, ಎಲ್ಲರೂ ಗುರುತಿಸುವ ವಿಧವಾಗಿ ಈಗ ಹದೀಸುಗಳು, ಖುರ್‌ಆನ್ ವಿಷಯಗಳು ನಾವು ಹೇಳಿಕೊಳ್ಳುತ್ತಿದ್ದೇವೆ. ಇದರಲ್ಲಿ ಯಾವ ತಪ್ಪು ಇಲ್ಲ. ಯಾರೂ ನಾಚಿಕೆಪಡಬೇಕಾದ ಕೆಲಸವಿಲ್ಲ. ಒಬ್ಬ ಹಿಂದೂ ಮುಸ್ಲೀಮ್ ಮಾತುಗಳು ಹೇಳುವುದೇನು? ಎಂದು ಅಂದುಕೊಳ್ಳಬಾರದು. ಇದು ನಾಚಿಕೆಪಡಬೇಕಾದ ವಿಷಯ ಏನೂ ಅಲ್ಲ, ಸಂತೋಷಪಡಬೇಕಾದ ವಿಷಯ. ಏಕೆಂದರೇ ಅವರಿಗೆ ತಿಳಿಯದ ವಿಷಯಗಳನ್ನು ನಾವು ತಿಳಿದುಕೊಂಡು ಹೇಳುತ್ತಿದ್ದೇವೆಂದರೆ ನಿಮಗೂ ಸಹ ಹೆಮ್ಮೆಪಡುವಂತಹ ವಿಷಯವಾಗಿರುತ್ತದೆ. ಸಂತೋಷವಾಗಿರುತ್ತದೆ. ಏಕೆಂದರೇ ಹಿಂದೂಗಳಿಗೆ ಜ್ಞಾನ ಹೇಳುವ ವ್ಯಕ್ತಿ, ಇಸ್ಲಾಮ್ ಮತದಲ್ಲಿ ಕೂಡಾ ಜ್ಞಾನ ಹೇಳುತ್ತಿದ್ದಾನೆಂದರೇ ನಿಮಗೆ ಹೆಮ್ಮೆಯೇ ಅಲ್ಲವೇ. ಆದ್ದರಿಂದ ನೀವು ಕೂಡಾ ಸಂತೋಷಪಡಬೇಕಾದ ವಿಷಯವೇ. ಈಗ ಮುಖ್ಯವಾಗಿ ನಾವು ಏನು ಹೇಳುತ್ತಿದ್ದೇವೆಂದರೇ ಹದೀಸುಗಳು ಎನ್ನುವವುಗಳಿಗಿಂತ ಖುರ್‌ಆನ್ ದೊಡ್ಡದು. ಖುರ್‌ಆನ್ ಗ್ರಂಥದಲ್ಲಿ ಇರುವಂತಹ ಜ್ಞಾನ ದೊಡ್ಡದು. ಖುರ್‌ಆನ್ ಗ್ರಂಥದಲ್ಲಿ ಇರುವಂತಹ ಜ್ಞಾನದ ಪ್ರಕಾರ, ಮೊದಲು ಅದನ್ನು ನಾವು ಅನುಸರಿಸಿದರೇ ನಂತರ ಹದೀಸುಗಳನ್ನು ಕುರಿತು ತಿಳಿಯಬಹುದು. ಅದೇ ವಿಧವಾಗಿ ಇಂದೂ ಜ್ಞಾನದಲ್ಲಿ ಇರುವಂತಹ ಜ್ಞಾನವನ್ನು ನಾವು ತಿಳಿದುಕೊಳ್ಳುವುದಾದರೇ, ನಂತರ ಹಿಂದೂ ಸಾಂಪ್ರದಾಯಗಳನ್ನು ನಾವು ಯಾವ ವಿಧವಾಗಿಯಾದರೂ ತಿಳಿದುಕೊಳ್ಳಬಹುದು. ಸಾಂಪ್ರದಾಯ ಗಳಿಗಿಂತ

ಮೊದಲು ಜ್ಞಾನ ಮುಖ್ಯ. ಆದ್ದರಿಂದ ಈ ಜ್ಞಾನಕ್ಕೆ ಭಂಗ ಉಂಟಾಗುವ ಸಾಂಪ್ರದಾಯಗಳು ಎಲ್ಲೂ ಇರಬಾರದು. ಹಾಗೇ ಇವೆಯೆಂದು 6 ಲಕ್ಷಗಳ ಹದೀಸುಗಳು ಬರೆದುಕೊಂಡಿರುವಂತಹ ಆತನು ಕೊನೆಗೆ 2602 ಹದೀಸುಗಳಿಗೇ ಏಕೆ ಬಂದಿದ್ದಾನೆ? 4 ಲಕ್ಷಗಳ ಹದೀಸುಗಳು ಬರೆದುಕೊಂಡಿರುವಂತಹ ಆತನು 4000 ಹದೀಸುಗಳಿಗೇ ಏಕೆ ಬಂದಿದ್ದಾನೆ? ಅವುಗಳಲ್ಲಿ ಸಹ ಯಾವುದೋ ಭಂಗ ಉಂಟಾಗುವಂತಹ ವಿಷಯಗಳು ಇವೆಯೆಂದು ಕೊನೆಗೆ 1900 ಹದೀಸುಗಳನ್ನು ಮಾತ್ರ ಇಟ್ಟಿದ್ದಾನೆ. ಆದರೆ ಈ ದಿನ ನಾವು ಹದೀಸುಗಳನ್ನು ಕೇವಲವಾಗಿ ಮಾತನಾಡುತ್ತಿಲ್ಲ. ಅವುಗಳನ್ನು ಬರೆದ ಹಿರಿಯರೇ ಹದೀಸುಗಳನ್ನು ಆ ವಿಧವಾಗಿ ಕಡಿಮೆಮಾಡಿದ್ದಾರೆ. ಆದ್ದರಿಂದ ಹದೀಸು ಹಿರಿಯರನ್ನು (ಪಂಡಿತರನ್ನು) ಅನುಸರಿಸಿ ನಾವು ಕೂಡಾ ಎಲ್ಲಾದರೂ ಏನಾದರೂ ತಪ್ಪಿದ್ದರೇ ಅಂತಹ ಹದೀಸುಗಳನ್ನು ನಾವು ವಿಮರ್ಶಿಸಿಕೊಳ್ಳಬೇಕಾದ್ದೆ, ಬಿಡಿಸಿಕೊಳ್ಳಬೇ ಕಾದ್ದೆ ಅವುಗಳನ್ನು ಬಿಟ್ಟು ಖುರ್‌ಆನ್ ಗ್ರಂಥದೊಳಕ್ಕೆ ನಾವು ಪ್ರವೇಶಿಸಬೇಕಾದ್ದೇ, ಖುರ್‌ಆನ್ ಗ್ರಂಥವನ್ನು ವಿಶೇಷವಾಗಿ ಹೇಳಿಕೊಳ್ಳಬೇಕಾದ್ದೇ. ನಾವು ಹದೀಸು ಗ್ರಂಥಗಳಲ್ಲಿ ಇರುವಂತಹ ಎಲ್ಲಾದರೂ ಲೋಪಗಳನ್ನು ಯಾವ ವಿಧವಾಗಿ ಗುರುತಿಸಬಹುದು ಎಂದು ಅಂದರೇ ಈಗ ನಾವು ಒಂದು ವಿಷಯ ಹೇಳಿ ಕೊಳ್ಳೋಣ.

ಒಬ್ಬ ವ್ಯಕ್ತಿ ಎಲ್ಲಾದರೂ ಪ್ರಶ್ನೆ ಹಾಕಿದರೇ ಅದಕ್ಕೆ ಸಂಪೂರ್ಣವಾದ ಉತ್ತರ ಇದ್ದರೇ ಅದು ಜ್ಞಾನ, ಉತ್ತರ ಇಲ್ಲದೇ ಹೋದರೇ ಅದು ಅಜ್ಞಾನ ಎಂದು ಬಹಳ ಸಲ ನಾವು ಹೇಳಿಕೊಂಡಿದ್ದೇವೆ. ಆ ವಿಧವಾಗಿಯೇ ಒಬ್ಬ ಮುಸ್ಲೀಮ್ ವ್ಯಕ್ತಿ ಒಬ್ಬ ಮುಸ್ಲೀಮ್ ಪಂಡಿತನನ್ನು ಅಂದರೇ ಚೆನ್ನಾಗಿ ಜ್ಞಾನ ತಿಳಿದ ವ್ಯಕ್ತಿಯನ್ನು ಒಂದು ಪ್ರಶ್ನೆ ಕೇಳಿದ್ದಾನೆ. "ಈ ಹದೀಸಿನಲ್ಲಿ ಒಂದು ವಿಷಯ ಬರೆಯಲಾಗಿದೆ. ನನಗೆ ಅರ್ಥವಾಗಲಿಲ್ಲ ನೀನು ಹೇಳುತ್ತೀಯಾ" ಎಂದು ಕೇಳಿದ್ದಾನೆ. ಅಂದರೇ ಮತ ಹಿರಿಯರು, ಹದೀಸು ಪಂಡಿತರು ಆ ವಿಷಯಗಳು ಹೇಳುವುದಕ್ಕೇ ಅಲ್ಲವೇ! ಇರುವುದು. ಆಗ ನಾನು ಹೇಳುತ್ತೇನೆ ಎಂದು ಪಂಡಿತನು ಅಂದಿದ್ದಾನೆ. ಆಗ ಮುಸ್ಲೀಮ್ ವ್ಯಕ್ತಿ ಹೀಗೆ ಕೇಳಿದ್ದಾನೆ

“ಒಂದಾನೊಂದು ದಿನ ಮುಹಮ್ಮದ್ ಪ್ರವಕ್ತರವರಿಗೆ ಜ್ಞಾನವನ್ನು ತಿಳಿಸಿದ ದೈವದೂತ ಆದ ಜಿಬ್ರಯೇಲ್, ಮುಹಮ್ಮದ್ ಪ್ರವಕ್ತರವರನ್ನು ಕರೆದುಕೊಂಡು ಪಾಕಿಸ್ತಾನ್‌ಗೆ ಹೋಗಿ, ಅಲ್ಲಿ ಮಸೀದಿನಲ್ಲಿ ಪ್ರಾರ್ಥನೆ ಮಾಡಿದ್ದಾನೆ. ಪ್ರಾರ್ಥನೆ ಮಾಡಿದ ನಂತರ ಅಲ್ಲಿಂದ ಜಿಬ್ರಯೇಲ್ ದೂತ, ಮುಹಮ್ಮದ್ ಪ್ರವಕ್ತರವರನ್ನು ತೆಗೆದುಕೊಂಡು ಹೋದಂತೆ ಒಂದು ಹದೀಸಿನಲ್ಲಿ ಬರೆಯಲಾಗಿದೆ. ಆಕಾಶದ ವರೆಗು ಹೋದ ನಂತರ, ಜಿಬ್ರಯೇಲ್ ದೈವದೂತ ಆಕಾಶವನ್ನು ತೆರೆದುಕೋ ಎಂದು ಅಂದರೇ ಮೊದಲನೆ ಆಕಾಶ ತೆರೆದುಕೊಂಡಿತು. ಆಕಾಶ ತೆರೆದುಕೊಂಡ ನಂತರ ಅಲ್ಲಿ ಎಲ್ಲರಿಗೂ ತಂದೆ ಆದ ಆದಾಮು ಇದ್ದಾನೆ ಎಂದು ಬರೆದಿದ್ದಾರೆ. ಎಲ್ಲರಿಗೂ ತಂದೆ ಆದ ಆದಾಮು ಈತನು ದೈವ ಪ್ರವಕ್ತನೇ ಎಂದು ಪ್ರವಕ್ತನನ್ನು ಆಶೀರ್ವದಿಸಿದನು. ಅಲ್ಲಿಂದ ಆತನ ಆಶೀರ್ವಾದವನ್ನು ತೆಗೆದುಕೊಂಡು ಮತ್ತೆ ಜಿಬ್ರಯೇಲ್, ಮುಹಮ್ಮದ್ ರವರು ಇಬ್ಬರೂ ಇನ್ನೂ ಮೇಲಕ್ಕೆ ಹೋದರೇ ಅಲ್ಲಿ ಎರಡನೆ ಆಕಾಶ ಇದೆ. ಆಗ ಜಿಬ್ರಯೇಲ್ ದೈವದೂತ ಎರಡನೆ ಆಕಾಶವನ್ನು ತೆರೆಯಲಿ ಎಂದು ಕೋರಿದರೇ ಎರಡನೆ ಆಕಾಶ ಕೂಡಾ ತೆರೆದುಕೊಂಡಿತು. ಅಲ್ಲಿ ಈಸಾ, ಏಷಯಾ ಎನ್ನುವ ಇಬ್ಬರು ದೊಡ್ಡ ವ್ಯಕ್ತಿಗಳು ಇದ್ದಾರೆ. ಆ ಇಬ್ಬರೂ ದೊಡ್ಡ ವ್ಯಕ್ತಿಗಳು ಪ್ರವಕ್ತನನ್ನು ಆಶೀರ್ವದಿಸುವುದು ನಡೆದಿದೆ. ಈ ವಿಧವಾಗಿ ನಂತರ ಅವರು ಮೂರನೆ ಆಕಾಶಕ್ಕೆ ಹೋಗಿದ್ದಾರೆ. ಅಲ್ಲಿ ಕೂಡಾ ಒಬ್ಬರು ದೊಡ್ಡ ಪ್ರವಕ್ತ ಇದ್ದರು. ಆತನೂ ಸಹ ಪ್ರವಕ್ತರವರನ್ನು ಆಶೀರ್ವದಿಸುವುದು ನಡೆಯಿತು. ನಾಲ್ಕನೇ ಆಕಾಶಕ್ಕೆ ಹೋಗಿದ್ದಾರೆ. ಅಲ್ಲಿ ಕೂಡಾ ಇರುವವರು ಆಶೀರ್ವದಿಸುವುದು ನಡೆದಿದೆ.

ಹೀಗೆ ಆರನೆ ಆಕಾಶದವರೆಗು ಹೋದಾಗ ಆರನೇ ಆಕಾಶವೂ ಸಹ ತೆರೆದುಕೊಂಡಿತು. ಅಲ್ಲಿ ಪೂರ್ವ ಇರುವಂತಹ ಮೂಸಾ ಎನ್ನುವ ಪ್ರವಕ್ತ ಇರುತ್ತಿದ್ದನು. ಆತನು ಪ್ರವಕ್ತರನ್ನು ಆಶೀರ್ವದಿಸುವುದು ನಡೆಯಿತು. ಆಶೀರ್ವದಿಸಿದ ನಂತರ ಮೂಸಾ ಪ್ರವಕ್ತ ಅತ್ತಿದ್ದಾನಂತೆ. ಮುಹಮ್ಮದ್ ಪ್ರವಕ್ತರವರನ್ನು ನೋಡಿ ಆತನು ಅತ್ತಿದ್ದಾನೆ. ಏಕೆ ಅತ್ತಿದ್ದಾನೆಂದರೇ ನನ್ನ ಕಾಲದಲ್ಲಿ ನಾನು ಜ್ಞಾನವನ್ನು ಹೇಳಿದರೇ ಯಾರೂ ಸ್ವರ್ಗಕ್ಕೆ ಹೋಗುತ್ತಿರಲಿಲ್ಲ,

ಆದರೆ ನೀನು ಹೇಳುತ್ತಿದ್ದರೇ ಬಹಳ ಮಂದಿ ಸ್ವರ್ಗಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ನನಗೆ ಅಳು ಬಂದಿದೆ ಎಂದು ಅಂದಿದ್ದಾನೆ. ಹಾಗೆ ಅಳುವುದು ಸಂತೋಷದಿಂದನ, ಅಸೂಯದಿಂದನ ನನಗೇನೂ ಅರ್ಥವಾಗಲಿಲ್ಲ, ಆದರೆ ಒಂದು ವಿಧವಾಗಿ ಅಸೂಯದಿಂದಲೇ ಅಂದುಕೊಳ್ಳೋಣ. ನಂತರ ಅಲ್ಲಿಂದ ಅವರು ಯಾವುದೋ ಆಕಾಶದವರೆಗು ಹೋಗಿದ್ದಾರೆ. ಆಗ ಏಳನೆ ಆಕಾಶ ತೆರೆದುಕೊಂಡಿತು. ಅಲ್ಲಿ ದೇವರು ಇದ್ದಾನೆ ಎಂದು ಅರ್ಥ. ಚೆನ್ನಾಗಿ ನೆನಪಲ್ಲಿಟ್ಟುಕೊಳ್ಳಿ. ಇದಕ್ಕೂ ಮೊದಲು ಒಬ್ಬಾತನು ಇಂದ್ರಧನಸ್ಸಿನಲ್ಲಿ ಏಳು ಬಣ್ಣಗಳೇ ಏಕೆ ಇವೆ? ಎಂದು ಒಂದು ಪ್ರಶ್ನೆ ಕೇಳಿದ್ದಾನೆ. ಇಂದ್ರ ಧನಸ್ಸಿನಲ್ಲಿ ಏಳು ಬಣ್ಣಗಳು ಇರುವುದು ವಾಸ್ತವವೇ. ಅಲ್ಲಿ ಎಂಟು ಇಲ್ಲ, ಒಂಬತ್ತು ಇಲ್ಲ ಆದರೇ ಏಳೇ ಇವೆ. ಇಲ್ಲಿ ಕೂಡಾ ಏಳೇ ಆಕಾಶಗಳು ಇವೆ. ನಮಗೆ ತಿಳಿದಿಲ್ಲ ಆದರೇ ಇಲ್ಲಿ ಯಾವುದೋ ತಿಳಿಯದ ಸಂಗತಿ ಇದೆ. ಅದು ಮುಸ್ಲೀಮ್‌ರಿಗೆ ಕೂಡಾ ತಿಳಿದಿಲ್ಲ. ಆದರೇ ಇಲ್ಲಿ ನಮಗೆ ಏನು ತಿಳಿದಿದೆ ಎಂದರೇ ಏಳನೇ ಆಕಾಶದಲ್ಲಿ ದೇವರು ಇದ್ದಾನೆಂದು ನಮಗೆ ತಿಳಿದಿದೆ. ಇದು ಒಂದು ದೊಡ್ಡ ರಹಸ್ಯ, ಇದು ವಾಸ್ತವವೇ, ಇದು ನೂರಕ್ಕೆ ನೂರು ಪಾಲು ಸತ್ಯವೇ. ಈಗ ದೇವರ ಹತ್ತಿರಕ್ಕೆ ಹೋಗಿ ಇವರು ದೇವರಿಗೆ ನಮಸ್ಕರಿಸುವುದು ನಡೆದಿದೆ. ಆಗ ದೇವರು ಇವರಿಗೆ ಒಂದು ವಿಧಿ ವಿಧಾನವನ್ನು ಸಮರ್ಪಿಸಿದ್ದಾನೆ.

ದೇವರು ನೀವು ಒಂದು ದಿನದಲ್ಲಿ 50 ಹೊತ್ತು ನಮಾಜು ಮಾಡಿಕೊಳ್ಳಿ ಎಂದು ಹೇಳಿದ್ದಾನೆ. ಅಂದರೆ ಒಂದು ದಿನಕ್ಕೆ 50 ಬಾರಿ ಸರೀ! ಎಂದು ಅಲ್ಲಿ ಒಪ್ಪಿಕೊಂಡು ಮುಹಮ್ಮದ್ ಪ್ರವಕ್ತರವರು ಆರನೇ ಆಕಾಶಕ್ಕೆ ಬಂದಿದ್ದಾರೆ. ಅಲ್ಲಿಂದ ಕೆಳಕ್ಕೆ (ಆರನೇ ಆಕಾಶಕ್ಕೆ) ಬರುತ್ತಲೇ, ಅಲ್ಲಿ ಇರುವ ಮೂಸಾ ಪ್ರವಕ್ತ ಏನು ನಡೆದಿದೆಯೆಂದು ಅವರನ್ನು ಕೇಳಿದ್ದಾನೆ. 50 ಬಾರಿ ನಮಾಜು ಮಾಡೆಂದು ದೇವರು ಹೇಳಿದ್ದಾನೆ ಎಂದು ಮುಹಮ್ಮದ್ ಪ್ರವಕ್ತರವರು ಹೇಳಿದ್ದಾರೆ. ಈತನು ಮೊದಲೇ ಅತ್ತಿದ್ದಾನೆ. ನೀವು ಇರುವುದರಿಂದಲೇ ಹೆಚ್ಚು ಮಂದಿ ಸ್ವರ್ಗಕ್ಕೆ ಹೋಗುತ್ತಿದ್ದಾರೆ. ನಾನು ಇದ್ದಾಗ ಯಾರೂ ಹೋಗದಂತೆ ಇದ್ದಾರೆ ಎಂದು ಈತನಿಗೆ ಅಸೂಯೆ ಹೆಚ್ಚಾಗಿದೆನೋ ಮತ್ತೆ ಏನು ಹೆಚ್ಚು ಆಗಿದೆನೋ

ಆದರೆ ನೀವು 50 ಬಾರಿ ಎಲ್ಲಿ ಮಾಡುತ್ತೀರಾ? ಪುನಃ ಹಿಂದಕ್ಕೆ ಹೋಗಿ ಕಡಿಮೆ ಮಾಡಿಕೊಳ್ಳಿ ಎಂದು ದೇವರನ್ನು ಕೇಳಿ ಎಂದು ಮೂಸಾ ಪ್ರವಕ್ತ ಹೇಳಿದನು. ಆಗ ಮುಹಮ್ಮದ್ ಪ್ರವಕ್ತರವರು ಯಾವುದೋ ಒಂದು ವಿಧವಾಗಿ ಮಾಡುತ್ತೇವೆ ಬಿಡು ಎಂದರೇ, ಬೇಡ ಬೇಡ ನೀವು ಮಾಡಲು ಸಾಧ್ಯವಾಗುವುದಿಲ್ಲ, ಬಹಳ ಕಷ್ಟಪಡುತ್ತೀರಾ. ಏಕೆಂದರೇ 50 ಬಾರಿ ದಿನವೆಲ್ಲಾ ನಮಾಜು ಮಾಡುವುದೇ ಸರಿಹೋಗುತ್ತದೆ. ಇನ್ನೂ ಅನ್ನ ಯಾವಾಗ ತಿನ್ನುತ್ತೀರಾ? ನೀರು ಯಾವಾಗ ಕುಡಿಯುತ್ತೀರಾ? ಕೆಲಸಗಳನ್ನು ಯಾವಾಗ ಮಾಡಿ ಕೊಳ್ಳುತ್ತೀರಾ? ಬದುಕುವುದಕ್ಕೆ ಯಾವಾಗ ಸಂಪಾದಿಸಿಕೊಳ್ಳುತ್ತೀರಾ? ಕಾಲವೆಲ್ಲಾ ಅದಕ್ಕೇ ಸರಿಹೋಗುತ್ತದೆ. ಹಾಗೆ ಬೇಡ ನೀನು ಹೋಗಿ ದೇವರನ್ನು ಕೇಳು ಎಂದು ಮೂಸಾ ಹೇಳಿದ್ದಾನೆ. ಸರಿ ಎಂದು ಆಗ ಪ್ರವಕ್ತರವರು, ಜಿಬ್ರಯೇಲ್ ದೂತರವರು ಇಬ್ಬರೂ ಮೇಲಕ್ಕೆ ಹೋಗುವುದು ನಡೆದಿದೆ. ದೇವರು ಮೊದಲು ಎಲ್ಲಿ ಇದ್ದಾನೋ ಅಲ್ಲೇ ಇದ್ದಾನೆ. ಆಗ ಅಲ್ಲಾಹ್‌ನ್ನು ಏನು ಕೇಳಿದ್ದಾರೆಂದರೇ, ಈ 50 ನಮಾಜುಗಳು ನಾವು ಮಾಡಲಾರೆವು ಸ್ವಲ್ಪ ಕಡಿಮೆ ಮಾಡಿಕೊಳ್ಳಿರೆಂದು ಕೇಳಿದ್ದಾರೆ. ಆಗ ಅಲ್ಲಾಹ್ ಯಾವುದೋ ವಿಧವಾಗಿ ಮಾಡಿಕೊಳ್ಳಿ ಎಂದು ಸ್ವಲ್ಪ ಕಡಿಮೆ ಮಾಡಿಕೊಂಡು ಕಳುಹಿಸಿದ್ದಾನೆ. ನಂತರ ಅವರು ಕೆಳಕ್ಕೆ ಬಂದರೇ, ಪುನಃ ಮೂಸಾ ಏನಾಯಿತೆಂದು ಕೇಳಿದರೇ ಐದೋ ಆರೋ ಕಡಿಮೆ ಮಾಡಿಕೊಂಡಿದ್ದಾನೆ ಎಂದು ಮುಹಮ್ಮದ್ ಪ್ರವಕ್ತ ಹೇಳಿದ್ದಾನೆ. ಆಗ ಹಾಗೆ ಕೂಡಾ ನೀವು ಮಾಡಲಾರಿರಿ, ಬಹಳ ಕಷ್ಟ ನೋಡಿ! ನೀವು ಹೋಗಿ ಪುನಃ ಕೇಳಿರೆಂದು ಮೂಸಾ ಹೇಳಿದ್ದಾನೆ. ಸರಿ ಎಂದು ಅವರು ಪುನಃ ಏಳನೇ ಆಕಾಶಕ್ಕೆ ಹೋಗಿದ್ದಾರೆ. ಈ ವಿಧವಾಗಿ ಇವರು ಹೋಗುವುದು, ಆತನು ಕಡಿಮೆ ಮಾಡಿಕೊಳ್ಳುವುದು ಇವರು ಪುನಃ ಹೋಗುವುದು, ಆತನು ಕಡಿಮೆ ಮಾಡಿಕೊಳ್ಳುವುದು ಇಲ್ಲಿಗೆ ಬಂದರೇ ಮೂಸಾ ಹೋಗಿ ಎಂದು ಪುನಃ ಹೇಳುವುದು ಈ ವಿಧವಾಗಿ 7, 8 ಬಾರಿ ತಿರುಗಿದ ನಂತರ, ಕೊನೆಗೆ 5 ಬಾರಿ ಮಾಡಿಕೊಳ್ಳಿ ಎಂದು ಅಲ್ಲಾಹ್ ಹೇಳಿದ್ದಾನಂತೆ. ಕೊನೆಗೆ 50ರಿಂದ 5 ಬಾರಿಗೆ ಬಂದಿದೆ. 5 ಬಾರಿಗೆ ಬಂದರೇ, ಪುನಃ ಮೂಸಾ ಏನು ಹೇಳಿದ್ದಾನಂದರೇ 5

ಬಾರಿಯೂ ಸಹ ನೀವು ಮಾಡಲಾರಿರಿ ನಿಮಗೆ ಕಷ್ಟ ಇನ್ನೊಂದು ಬಾರಿ ಹೋಗಿ ಕೇಳಿರಿ ಎಂದು ಅಂದರೇ ಮುಹಮ್ಮದ್ ಪ್ರವಕ್ತ "ಅಲ್ಲಿಗೆ ಹೋಗಿ ಹೋಗಿ ನನಗೆ ನಾಚಿಕೆ ಆಗುತ್ತಿದೆ. ನಾನು ಹೋಗಿ ಕೇಳಲಾರೆನು. ಸಾಕು 5 ಬಾರಿ ನಾವು ಯಾವುದೋ ವಿಧವಾಗಿ ನಮಾಜ್ ಮಾಡಿಕೊಳ್ಳುತ್ತೇವೆ" ಎಂದು ಆತನ ಮಾತನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

5 ನಮಾಜುಗಳೊಂದಿಗೆ ತೃಪ್ತಿ ಪಟ್ಟು, ಅವರು ಕೆಳಗೆ ಬಂದಿದ್ದಾರೆ. ಕೆಳಗೆ ಬರುವಾಗ ಅವರಿಗೆ ದಾರಿಯಲ್ಲಿ ಎಲ್ಲಾ ಆಕಾಶಗಳಲ್ಲಿ ಪಾಪ ಮಾಡಿದವರು ಎಡಗಡೆಗೆ, ಪುಣ್ಯಗಳು ಮಾಡಿದವರು ಬಲಗಡೆಗೆ ಇದ್ದಂತೆ ಕಾಣಿಸಿದ್ದಾರೆ. ವ್ಯಭಿಚಾರ ಮಾಡಿದವರ ಎದೆಗಳಿಗೆ ಕೊಂಡಿಗಳನ್ನು ಹಾಕಿ ದೇವರು ನೇತಾಡಲು ಹಾಕಿದ್ದಾನಂತೆ. ಅಂದರೇ ಅವರು ಆ ವಿಧವಾದ ಕರ್ಮವನ್ನು ಅನುಭವಿ ಸುತ್ತಿದ್ದಾರೆ. ಇನ್ನೂ ಅಸತ್ಯಗಳನ್ನು ಹೇಳಿದವರಿಗೆ ಬಾಯಲ್ಲಿ ಅಗ್ನಿಯನ್ನು ಹಾಕಿದ್ದಾರಂತೆ. ಆ ಅಗ್ನಿಗೆ ಹೊಟ್ಟೆಯಲ್ಲಿ ಕರಳುಗಳು ಕುದಿಯುತ್ತಿವೆಯಂತೆ. ಈ ವಿಧವಾಗಿ ಅನೇಕ ವಿಧಗಳಾಗಿ ನರಕವನ್ನು ಅನುಭವಿಸುತ್ತಿದ್ದಾರಂತೆ. ಈ ವಿಧವಾಗಿ ಸ್ವರ್ಗ ಅನುಭವಿಸುವವರೂ ಇದ್ದಾರೆ. ನರಕವನ್ನು ಅನುಭವಿಸುವವರೂ ಇದ್ದಾರೆ. ವಿಧವಿಧಗಳ ನರಕಗಳನ್ನು ಸ್ವರ್ಗಗಳನ್ನು ಬಲ ಎಡ ಕಡೆಗೆ ಇವರು ನೋಡುತ್ತಾ ಬರುವುದು ನಡೆದಿದೆ. ಇದೆಲ್ಲಾ ನಡೆದ ನಂತರ ಖಚಿತವಾಗಿ ದೇವರ ಕಡೆಯಿಂದ ಬಂದಿರುವ ಆಜ್ಞೆ, ನೀವು 5 ಹೊತ್ತು ನಮಾಜು ಮಾಡಿಕೊಳ್ಳಿ ಎಂದು ಪ್ರಜೆಗಳಿಗೆ ಹೇಳುವುದು ನಡೆದಿದೆ. ಅಂದಿನಿಂದ ಹಾಗೇ ನಮಾಜು ಮಾಡಿಕೊಳ್ಳುತ್ತಿದ್ದಾರೆ. ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಬಹಳ ಅಸತ್ಯಗಳನ್ನು ಹೇಳಬೇಕಾಯಿತು. ಹಾಗೆ ಅಲ್ಲದೆ ಒಳ್ಳೆಯ ಕೆಲಸವನ್ನು ಒಳ್ಳೆಯ ಕೆಲಸವಾಗಿಯೇ ಹೇಳಿದರೇ ಸರಿಹೋಗುತ್ತದೆ. ನಮಾಜು ಮಾಡುವುದು (ದೇವರ ಪ್ರಾರ್ಥನೆ ಮಾಡುವುದು) ಬಹಳ ಒಳ್ಳೆಯ ಕೆಲಸ. ಆದರೂ ಈ ಕಥೆ ಹೇಳಿಕೊಳ್ಳದಂತೆ ಹೇಳಿದ್ದರೇ ಚೆನ್ನಾಗಿರುತ್ತಿತ್ತು. ಹೇಗಾದರೇ ಹಿಂದೂಮತದಲ್ಲಿ ಪುರಾಣಗಳು ಹೇಳಿದ್ದಾರೋ ಹಾಗೇ ಇವರೂ ಸಹ ಹೇಳಿದ್ದಾರೆ. ಭಕ್ತಿಯನ್ನು ಉಂಟು ಮಾಡುವುದಕ್ಕೆ ಮನುಷ್ಯನಿಗೆ ಪುರಾಣಗಳನ್ನು ಹೇಳಿದ್ದಾರೆ. ಆದರೇ ಭಕ್ತಿಯನ್ನು

ಉಂಟುಮಾಡುವುದಕ್ಕೆ ಅಷ್ಟು ಅಸತ್ಯಗಳನ್ನು ಹೇಳಿದ್ದಾರೆ. ಅಸತ್ಯಗಳನ್ನು ಹೇಳಿದಾಗ ಸ್ವಲ್ಪ ಬುದ್ಧಿ ಇರುವವನು ಇದು ಎಲ್ಲಾ ಅಸತ್ಯ ಎಂದು ಅಂದರೇ ಮೊದಲಿಗೇ ಮೋಸ ಎಂದು ಬಿಟ್ಟುಹಾಕುವುದಕ್ಕೆ ಅವಕಾಶವಿದೆ. ಆ ವಿಧವಾಗಿಯೇ ಈಗ ಈ ಕಥೆಯಲ್ಲಿ ದೇವರಿಗೆ ಪ್ರಾರ್ಥನೆ ಮಾಡುವುದು, ಮಾಡೆಂದು ಹೇಳುವುದು ಚೆನ್ನಾಗಿದೆ, ಇದನ್ನು ಇನ್ನೊಂದು ವಿಧವಾಗಿ ದೇವರು ಹೀಗೆ ಹೇಳಿದ್ದಾನೆ ನೀವೂ ಸಹ ಹೀಗೇ ಮಾಡಿ ಎಂದು ಅಂದರೇ ಚೆನ್ನಾಗಿರುತ್ತಿತ್ತು. ಆದರೇ ಈ ವಿಧವಾಗಿ ಈ ಕಥೆಯನ್ನು ಸೃಷ್ಠಿಸುವುದು ತಪ್ಪು. ಇದು ಹದೀಸು ಗ್ರಂಥದಲ್ಲಿ ಇರುವ ಒಂದು ಘಟ್ಟ. ಆದರೇ ಇದರಲ್ಲಿ ಇರುವ ತಪ್ಪು ಒಪ್ಪುಗಳನ್ನು ನಾವು ತೆಗೆದುಕೊಂಡರೇ ಇದು ಖುರ್‌ಆನ್ ಗ್ರಂಥದಲ್ಲಿನ ದೈವ ಪ್ರವಕ್ತ ಗೌರವಕ್ಕೆ, ಅಲ್ಲಾಹ್ ಗೌರವಕ್ಕೆ ಭಂಗ ಉಂಟುಮಾಡುವ ವಾಕ್ಯಗಳಾಗಿ ಇವೆ. ಆದ್ದರಿಂದ ನಾವು ಇವುಗಳನ್ನು ಸವರಿಸಿಕೊಂಡು ಈ ಕಥೆಯನ್ನು ಮರೆತುಹೋಗಿ, ನಾವು ದೇವರಿಗೋಸ್ಕರ ಪ್ರಾರ್ಥನೆ ಮಾಡಬೇಕು ಎನ್ನುವುದು ಮುಖ್ಯವಾಗಿ ಇಟ್ಟುಕೊಂಡು 5 ಹೊತ್ತು ನಮಾಜನ್ನು ನೀವು ಮಾಡಿ ಎಂದು ನಾನು ಎಲ್ಲರಿಗೂ ತಿಳಿಸುತ್ತಿದ್ದೇನೆ. ಎಲ್ಲರಿಗೂ ಅಂದರೇ ಹಿಂದೂಗಳು ಸಹ ದೇವರನ್ನು 5 ಹೊತ್ತು ನೆನಪಿಸಿಕೊಳ್ಳುವುದು ಒಳ್ಳೆಯದು.

ಮುಸ್ಲೀಮ್‌ರು 5 ಹೊತ್ತು ದೇವರನ್ನು ಪ್ರಾರ್ಥನೆ ಮಾಡಿರಿ ಒಳ್ಳೆಯದೇ ಆದರೇ ಈ ಕಥೆಯನ್ನು ಅನುಸರಿಸಿ ನೀವು ಮಾಡಬೇಡಿ. ಕಥೆಯನ್ನನ್ನುಸರಿಸಿ ಮಾಡಿದರೇ ನಮಗೆ ಕಷ್ಟ ಆಗುತ್ತದೆ. ಏಕೆ ಕಷ್ಟ ಆಗುತ್ತದೆ ಎಂದರೇ, ಒಂದನೇ ಆಕಾಶ ಹತ್ತಿರಕ್ಕೆ ಹೋದಾಗ ಅಲ್ಲಿ ಆದಾಮು ಇದ್ದಾನೆ. ಎಲ್ಲರಿಗೂ ತಂದೆ ಆದಾಮು ಎಂದು ಅಲ್ಲಿ ಆ ಮಾತು ಹೇಳಿದ್ದಾರೆ. ಮತ್ತೆ ಅಲ್ಲಿ ಯಾವ ಅಂತರಾಯ ಉಂಟಾಗುತ್ತದೆಂದು ಆಲೋಚಿಸಿದರೇ ಎಲ್ಲರಿಗೂ ತಂದೆ ದೇವರು ಒಬ್ಬನೇ ಆದರೇ ಮಧ್ಯದಲ್ಲಿ ಆದಾಮು ಎಲ್ಲಿಂದ ಬಂದಿದ್ದಾನೆ? ಆದಾಮು ನಿಮ್ಮ ಅಪ್ಪನೂ ಅಲ್ಲ, ನಮ್ಮ ಅಪ್ಪನೂ ಅಲ್ಲ. ನಮ್ಮೆಲ್ಲರಿಗೂ ತಂದೆ, ನಿಮ್ಮ ಅಪ್ಪನಿಗೂ, ನಮ್ಮ ಅಪ್ಪನಿಗೂ, ನಿನಗೂ ಎಲ್ಲರಿಗೂ ತಂದೆ ಒಬ್ಬನು ಇದ್ದಾನೆ. ಆತನೇ **'ದೇವರು'** (ಅಲ್ಲಾಹ್) ಎಂದು ನಾವು ಹೇಳಿಕೊಳ್ಳುತ್ತಾ ಬಂದಿದ್ದೇವೆ.

ಈಗ ಖುರಾನ್ ಗ್ರಂಥವೂ ಸಹ ಅದೇ ವಿಷಯವನ್ನೇ ಹೇಳುತ್ತಿದೆ. ಹಾಗಿರುವಾಗ ಆದಾಮು ಕೂಡಾ ಯಾರಿಗೂ ತಂದೆ ಅಲ್ಲ. ಆದರೇ ಎಲ್ಲರಿಗೂ ತಂದೆ ಆದಾಮು ಎಂದು ಅಂದರೇ ದೇವರನ್ನು ಪಕ್ಕಕ್ಕೆ ಇಡಬೇಕಾದ ಕೆಲಸ ಬರುತ್ತದೆ. 'ಎಲ್ಲರಿಗೂ ತಂದೆ ಆದಾಮು' ಎನ್ನುವ ವಾಕ್ಯ ನಮಗೆ ವಿರುದ್ಧವಾಗಿ ಕಾಣಿಸುತ್ತದೆ. ಬೇರೆ ಮತಸ್ಥರು ವಿಮರ್ಶಿಸುವುದಕ್ಕೆ ಅವಕಾಶವಿದೆ. ಬೇರೆ ಮತಸ್ಥರು ಇಸ್ಲಾಮ್ ಗ್ರಂಥವನ್ನು ವಿಮರ್ಶಿಸುವುದಕ್ಕೆ ಅವಕಾಶವಿದೆ, ಆದ್ದರಿಂದ ಅಂತಹ ಅವಕಾಶ ಅವರಿಗೆ ಕೊಡದಂತೆ ಇರಬೇಕು ಅಂದರೇ ಆದಾಮು ಎಲ್ಲರಿಗೂ ತಂದೆಯೆಂದು ನಾವು ಹೇಳಿಕೊಳ್ಳಬಾರದು. ಏಕೆಂದರೇ ಅಲ್ಲಾಹ್ ಎಲ್ಲರಿಗೂ ತಂದೆ. ಆತನು ಸೃಷ್ಠಿಕರ್ತ ಎಲ್ಲರನ್ನೂ ಸೃಷ್ಠಿಸಿರುವಂತಹವನು ಸಮಸ್ತ ಮಾನವರಿಗೂ ಅಲ್ಲಾಹ್ ತಂದೆ ಆದಾಗ ಮಧ್ಯದಲ್ಲಿ ಆದಾಮು ಎನ್ನುವುದು ಒಳ್ಳೆಯದಲ್ಲ. ಈ ಮಾತನ್ನು ನಾವು ಪಕ್ಕದಲ್ಲಿಡೋಣ. ಇನ್ನೂ ಏನಿದೆಯೆಂದರೇ ದೇವರು ಹೇಳಿದ ನಂತರ ದೇವರ ವಾಕ್ಯವನ್ನು ದೊಡ್ಡದಾಗಿ ನಾವು ಸ್ವೀಕರಿಸುವಂತದ್ದಾಗಿ ಇರಬೇಕಾಗಲೀ, ಮಾತು ಮಾತಿಗೂ ನಮಾಜು ಮಾಡುವುದು ನನ್ನಿಂದ ಆಗುವುದಿಲ್ಲ ಎಂದು ಹೇಳಿದರೇ ಏನು ಚೆನ್ನಾಗಿರುತ್ತದೆ. ದೇವರು ಹೇಳಿದ ವಾಕ್ಯವನ್ನು ನನ್ನಿಂದ ಆಗುವುದಿಲ್ಲ ಎಂದು ಪುನಃ ಎದುರು ಹೇಳಿದಂತೆ ಇರುತ್ತದೆ. ಅಂದರೇ ದೇವರು ಒಂದು ಕೆಲಸ ಹೇಳಿದರೇ ನಾವು ನಮ್ಮಿಂದ ಆಗುವುದಿಲ್ಲ, ನನ್ನಿಂದ ಆಗುವುದಿಲ್ಲ ಅಂದರೇ ಏನು ಚೆನ್ನಾಗಿರುತ್ತದೆ. ದೇವರಿಗೆ ಗೌರವ ಇರುತ್ತದಾ!

ಆದ್ದರಿಂದ ಅಂತಹ ಸಾಂಪ್ರದಾಯವನ್ನು ಮನುಷ್ಯನಿಗೆ ಕಲಿಸದಂತೆ ಇರಬೇಕೆಂದರೇ ದೇವರನ್ನು ಪುನಃ ಕೇಳಬಾರದು. ದೇವರು ಏನು ಹೇಳಿದರೇ ಅದು ಮಾಡುವ ರೀತಿಯಲ್ಲಿ ಇರಬೇಕು. ನೀನು ಸತ್ತುಹೋಗು! ಅಂದರೇ ಸತ್ತುಹೋಗುವುದಕ್ಕೆ ಸಿದ್ಧವಾಗಿ ಇರಬೇಕು. ಅಗ್ನಿಯಲ್ಲಿ ದೂಕು ಎಂದರೇ ದೂಕುವ ರೀತಿಯಲ್ಲಿ ಇರಬೇಕು. ಎಲ್ಲರಿಗೂ ದೊಡ್ಡವನು ದೇವರು. ಎಲ್ಲರಿಗೂ ದೊಡ್ಡವ ದೇವರು ಆದಾಗ ದೇವರ ಮಾತುಗಳು ಕೇಳದಂತೆ ನನಗೆ ಕೈಲಾಗುವುದಿಲ್ಲ, ನನಗೆ ಕೈಲಾಗುವುದಿಲ್ಲ ಎನ್ನುತ್ತಾ ಹೋದರೇ ಹೇಗೆ? 50 ರಿಂದ 5 ಕ್ಕೆ ಕಡಿಮೆ ಮಾಡಿಕೊಂಡರೇ ಏನಾಗುತ್ತದೆ? ನಿನ್ನಷ್ಟು ಸೋಂಬೇರಿ

ಮನುಷ್ಯನೇ ಇಲ್ಲ, ಮುಸ್ಲೀಮ್ ಮತದಲ್ಲಿ ಸೋಂಬೇರಿ ಮನುಷ್ಯರಿದ್ದಾರೆಂದು ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಈ ಪದವನ್ನು ಕೂಡಾ ಮರೆತುಹೋಗೋಣ. ನಮಗೆ ಏನು ಹೇಳಿದ್ದಾನೆ ಅಂದರೆ ದೇವರು ಏನು ಮಾಡಿದರೂ ಸಹ, ಏನು ಹೇಳಿದರೂ ಸಹ ಅದಕ್ಕೆ ಸಂಸಿದ್ಧವಾಗಿ ಇರುವುದೇ ಮುಖ್ಯ ಆದರೆ, ಏನೋ ನನಗೆ ಕೈಲಾದರೇ ಮಾಡುತ್ತೇನೆ ಇಲ್ಲದೇ ಹೋದರೇ ಇಲ್ಲ ಎನ್ನುವ ವಿಧವಾಗಿ ಇರಬಾರದು. ಈ ಪದ್ಧತಿ ನೋಡಿದರೇ ಹಾಗೇ ಇದೆ. 50 ಇದ್ದರೇ 5ಕ್ಕೆ ಕಡಿಮೆ ಮಾಡಿಕೊಂಡರೇ ಅದು ಏನು ಚೆನ್ನಾಗಿರುತ್ತದೆ? ಆದ್ದರಿಂದ ನಾವು ಇದನ್ನು ಕೂಡಾ ಮರೆತುಹೋಗೋಣ. ಇದನ್ನು ಇನ್ನೊಬ್ಬರು ವಿಮರ್ಶಿಸಿದರೇ ನಾವು ಅದಕ್ಕೆ ಉತ್ತರ ಹೇಳಲಾರೆವು ಆದ್ದರಿಂದ ಇದು ಕೂಡಾ ನಮಗೆ ಆತಂಕ ಯೋಗ್ಯವಾಗಿ ಇದೆ. ಅಂದರೇ ಖುರಾನ್ ಪವಿತ್ರತೆಗೆ ಭಂಗ ಉಂಟಾಗುವಂತೆ ಇದೆ ಆದ್ದರಿಂದ ಇದನ್ನು ನಾವು ತೆಗೆದುಹಾಕಿ ಖುರ್‌ಆನ್‌ನಲ್ಲಿ ಹೇಳಿದಂತೆ ಅಲ್ಲಾಹ್‌ಯೇ ಎಲ್ಲರಿಗೂ ದೇವರು ಅಂದುಕೊಳ್ಳೋಣ. ಅಲ್ಲಾಹ್ ಏನು ಹೇಳಿದರೇ ಅದು ಮಾಡುತ್ತೇವೆ ಅಂದುಕೊಳ್ಳೋಣ. ಅಂದರೇ ದೇವರು ಏನು ಹೇಳಿದರೂ ಮಾಡುವುದಕ್ಕೆ ಸಂಸಿದ್ಧವಾಗಿ ಇರಬೇಕು. ದೇವರು ಈ ಗಂಟೆಯಲ್ಲಿ ನೀನು ಸತ್ತು ಹೋಗು ಎಂದರೇ ಸತ್ತುಹೋಗುವುದಕ್ಕೆ ಸಂಸಿದ್ಧವಾಗಿ ಇರಬೇಕು. ನೀನು ಎಲ್ಲರನ್ನೂ ಬಿಟ್ಟು ಬಿಡು ಎಂದರೇ ಬಿಟ್ಟು ಹಾಕುವುದಕ್ಕೆ ಸಂಸಿದ್ಧವಾಗಿ ಇರಬೇಕು.

ಅದೇ ಬೈಬಲ್‌ನಲ್ಲಿ ಏನು ಹೇಳಿದ್ದಾರೋ ತಿಳಿದಿದೆಯಾ? ದೇವರ ವಿಷಯದಲ್ಲಿ ನಿನ್ನ ಕೈ ನಿನ್ನನ್ನು ಆತಂಕಪಡಿಸಿದರೇ ನಿನ್ನ ಕೈಯ್ಯನ್ನು ತೆಗೆದುಹಾಕು ಎಂದಿದ್ದಾನೆ. ನಿನ್ನ ಕಣ್ಣು ಆತಂಕಪಡಿಸಿದರೇ ಕಣ್ಣನ್ನು ಕಿತ್ತು ಹಾಕು ಎಂದಿದ್ದಾನೆ. ಆ ವಿಧವಾಗಿ ಹೋದರೇ ಕೈಗಳು, ಕಾಲುಗಳು, ಕಣ್ಣು ಎಲ್ಲಾ ಅವಯವಗಳನ್ನೇ ಒಟ್ಟಾರೆ ತೆಗೆದುಹಾಕಿ ಪಕ್ಕದಲ್ಲಿಡು ಎಂದಾಗ ನಾವು ಎಲ್ಲದಕ್ಕೂ ಸಂಸಿದ್ಧವಾಗಿ ಇರಬೇಕೆಂದೇ ಅಲ್ಲಿ ಬೋಧಿಸಿದ್ದಾರೆ. ನನಗೆ ಕೈಲಾದರೇ ಮಾಡುತ್ತೇನೆ ಇಲ್ಲದಿದ್ದರೇ ಇಲ್ಲ ಅಂದರೇ ಕಾಲು ಬೇಡಬಿಡು ಇನ್ನೊಂದು ಚಿಕ್ಕದ್ದನ್ನು ಹೇಳು ಎಂದು ನಾವು ಕೇಳುತ್ತೇವಾ? ಆ ವಿಧವಾಗಿ ಕೇಳದಂತೆ ಮೊದಲೇ ಏನು ಹೇಳುತ್ತಿದ್ದೇ

ವೆಂದರೇ ಇದು ಒಳ್ಳೆಯ ಪದ್ಧತಿ ಅಲ್ಲ. ದೇವರ ವಿಷಯದಲ್ಲಿ ಎಲ್ಲದಕ್ಕೂ ನಾವು ಸಂಸಿದ್ಧವಾಗಿ ಇರಬೇಕು. ಆದ್ದರಿಂದ ಯಾವುದಕ್ಕೂ ಕೂಡಾ ನಾವು ಹಿಂದಕ್ಕೆ ಹೋಗಬಾರದು ಎನ್ನುವುದು ನಾವು ಕಲಿಯಬೇಕೆಂದರೇ ಈ ಹದೀಸುಗಳನ್ನು ನಾವು ಮರೆತುಹೋಗುವುದರಲ್ಲಿ ತಪ್ಪೇನಿದೆ? 7 ಲಕ್ಷಗಳ ಹದೀಸುಗಳಲ್ಲಿ ಅವರು 2000ಕ್ಕೆ ಬಂದಾಗ ನಾವು ಒಂದು ಹದೀಸನ್ನು ಪಕ್ಕಕ್ಕೆ ಇಟ್ಟುಕೊಳ್ಳೋಣ. ದೇವರಿಗೆ ಆತಂಕವಲ್ಲವೇ! ಇದು ಪುನಃ ಪ್ರಶ್ನಾರ್ಥಕ ಆಗುತ್ತದೆ ಅಲ್ಲವೆ! ಅದರಲ್ಲಿ ತಪ್ಪೇನಿದೆ? ಅಂದರೇ ದೇವರು ಹೇಳಿದಂತೆ ಕೇಳಬೇಕು ಎನ್ನುವುದು ಒಳ್ಳೆಯದಾಗಲಿ ಕೇಳಿಕೊಳ್ಳೋಣ ಎಂದು ಹೋಗುವುದು ಒಳ್ಳೆಯದಾ? ಇಲ್ಲ ನನಗೆ ಕೈಲಾಗುವುದಿಲ್ಲ ಎಂದು ಹೇಳುವುದು ಒಳ್ಳೆಯದಾ? ಈ ಮಾತು ಸಹ ನಮಗೆ ಆತಂಕ ಉಂಟುಮಾಡುವಂತೆ ಇದೆ ಆದ್ದರಿಂದ ನಾವು ಆ ಮಾತನ್ನು ಸಹ ಪಕ್ಕದಲ್ಲಿಡೋಣ.

ನಂತರ ಇನ್ನೊಂದು ಮಾತು ಏನು ಎಂದರೇ ಜಿಬ್ರಯೇಲ್, ಮುಹಮ್ಮದ್ ಪ್ರವಕ್ತರವರು ಬರುವಾಗ ಸ್ವರ್ಗ, ನರಕವೊಂದರ ಸ್ಥಾನಗಳು ನೋಡಿದ್ದಾರೆ. ಸ್ವರ್ಗವನ್ನು ಅನುಭವಿಸುವವರನ್ನೂ ನೋಡಿದ್ದಾರೆ. ನರಕವನ್ನು ಅನುಭವಿಸುವವರನ್ನೂ ನೋಡಿದ್ದಾರೆ. ಸ್ವರ್ಗವನ್ನು, ನರಕವನ್ನು ಅನುಭವಿಸುವವರು ಅಲ್ಲಿ ಕಾಣಿಸಿದಾಗ ಅಂದರೇ ಅವರೊಂದರ ನರಕ ಬಾಧೆಗಳು, ಸ್ವರ್ಗ ಸುಖಗಳು ನೋಡಿದಾಗ ನಮಗೆ ತಪ್ಪದೆ ಒಂದು ಪ್ರಶ್ನೆ ಬರುತ್ತದೆ. ಏಕೆಂದರೇ ಆಗ ಇನ್ನೂ ಪ್ರವಕ್ತ ಇದ್ದಾನೆ, ಮನುಷ್ಯರು ಇದ್ದಾರೆ. ಪ್ರಳಯ ಬರಲಿಲ್ಲ. ಪ್ರಳಯದ ಕೊನೆಯ ದಿನಗಳಲ್ಲಿ ಮನುಷ್ಯರೆಲ್ಲಾ ಸಮಾಧಿಯಿಂದ ಎಬ್ಬಿಸಲ್ಪಡುತ್ತಾರೆ. ಎಬ್ಬಿಸಲ್ಪಟ್ಟಾಗ ದೇವರು ಬಂದು ತೀರ್ಪನ್ನು ಕೊಡುತ್ತಾನೆ. ಆಗ ಸ್ವರ್ಗಕ್ಕು ನರಕಕ್ಕು ಕಳುಹಿಸುತ್ತಾನೆ ಎಂದಾಗ ಇವರು ಮೊದಲೇ ಸ್ವರ್ಗಕ್ಕೆ, ನರಕಕ್ಕೆ ಏಕೆ ಹೋಗಿದ್ದಾರೆ? ಯಾರಾದರೂ ಹೀಗೆ ಪ್ರಶ್ನಿಸಿದರೇ ನಮಗೆ ಕಷ್ಟವೇ ಅಲ್ಲವೇ! ಆದ್ದರಿಂದ ಅವರು ಸ್ವರ್ಗ, ನರಕ ಮೊದಲೇ ನೋಡಿದ್ದಾರೆ ಎಂದು ಹೇಳುವುದು ಕೂಡಾ ತಪ್ಪೇ, ಅಂದರೇ ಇವರನ್ನು ದೇವರು ಕಳುಹಿಸುವುದಕ್ಕಿಂತ ಮೊದಲೇ ಹೇಗೆ ಹೋಗಿದ್ದಾರೆ?

ಎಂದು ಪ್ರಶ್ನೆ ಬರುತ್ತದೆ. ಅಂದರೇ ದೇವರು ಕೊನೆಯ ದಿನಗಳಲ್ಲಿ ಅಲ್ಲವೆ ಕಳಿಸುವುದು. ಈಗ ಹೇಗೆ ಕಳುಹಿಸಿದ್ದಾನೆ? ಆತನು ಕಳುಹಿಸದೇನೇ ಮನುಷ್ಯರು ಹೋಗಿದ್ದಾರಾ ಎನ್ನುವ ಪ್ರಶ್ನೆ ಕೂಡಾ ನಮಗೆ ಬರುತ್ತದೆ. ಇಂತಹ ಪ್ರಶ್ನೆಗಳು ಬೇರೇಯವರು ಕೇಳಿದರೇ ನಮಗೆ ಉತ್ತರ ಹೇಳಲಾರದ ಪರಿಸ್ಥಿತಿ ಇದೆ. ಆದ್ದರಿಂದ ಒಬ್ಬ ಮುಸ್ಲೀಮ್ ಕೇಳಿದರೇ ಇನ್ನೊಬ್ಬ ದೊಡ್ಡ ಮುಸ್ಲೀಮ್ ಈ ಪ್ರಶ್ನೆಗಳಿಗೆ ಉತ್ತರ ಹೇಳಲಾರದೆ ಹೋಗುತ್ತಿದ್ದಾರೆ. ಒಬ್ಬ ಮುಸ್ಲೀಮ್ ಹುಡುಗನು ಕೇಳಿದರೇ ಅವರ ಮನೆಯಲ್ಲಿ ತಂದೆಯಾಗಿ ಇರುವಂತಹ ಮುಸ್ಲೀಮೇ ಇಂತಹ ಪ್ರಶ್ನೆಗಳಿಗೆ ಉತ್ತರ ಹೇಳಲಾರದೇ ಹೋಗುತ್ತಿದ್ದಾನೆ. ಆದ್ದರಿಂದ ನಿಮ್ಮ ಹುಡುಗ ನಿಮ್ಮ ಮನೆಯಲ್ಲಿ ಕೇಳಿದರೇ ಉತ್ತರ ಹೇಳಲಾರದ ಪರಿಸ್ಥಿತಿಯಲ್ಲಿ ಇದ್ದಾಗ ನೀವು ಅಂತಹ ಹದೀಸನ್ನು ಹೊರಗೆ ಹೇಳಬೇಡಿ. ಖುರ್‌ಆನ್ ಕುರಿತು ಹೇಳಿ ಇಲ್ಲದೇ ಹೋದರೇ ದೇವರ ಪವಿತ್ರತೆಯನ್ನು ಕಾಪಾಡುವ ವಿಷಯಗಳನ್ನು ಹೇಳಿರಿ. ದೇವರಿಗೆ ಪ್ರಶ್ನಾರ್ಥಕವಾದಂತಹ ವಿಷಯಗಳನ್ನು ಹೇಳಬೇಡಿ.

ಹಿಂದೂಮತದಲ್ಲಿ ಹೀಗೆ ಇದ್ದಾರೆ ಎಂದು, ಭಗವದ್ಗೀತೆಯಲ್ಲಿ ತಪ್ಪುಗಳು, ಒಪ್ಪುಗಳು ನೀವು ಹೇಳಬಹುದು. ಹಾಗೋ ಹೀಗೋ ಪುನಃ ಈ ಇಸ್ಲಾಮ್ ಮತದಲ್ಲಿ ತಪ್ಪುಗಳು ಇವೆಯೆಂದು ಹೇಳುವುದು ಏಕೆ ಎಂದು ಕೆಲವರು ನನ್ನನ್ನು ಕೇಳಬಹುದು. ಅದಕ್ಕೆ ನನ್ನ ಉತ್ತರ, ಯಾರಿಗಾದರೂ ಆಗಲಿ ತಪ್ಪು ತಪ್ಪೇ ಒಪ್ಪು ಒಪ್ಪೇ. ಈಗ ನಾವು ಏನು ಹೇಳುತ್ತಿದ್ದೇವೆಂದರೇ, ಇಸ್ಲಾಮ್ ಮತದಲ್ಲಿ ಕೂಡಾ ದೇವರು ಹೇಳಿರುವಂತಹ ವಾಕ್ಯಗಳಿಗೆ ಭಂಗ ಉಂಟಾಗದಂತೆ ಇರಬೇಕು ಎಂದು ಹೇಳುತ್ತಿದ್ದೇವೆ. ನಾನು ಸರ್ವರನ್ನು ಸೃಷ್ಠಿಸಿದ್ದೇನೆ ಎಂದು ದೇವರು ಅಲ್ಲಿ ಹೇಳಿದಾಗ ಪುನಃ ಕೊನೆಯಲ್ಲಿ ಪಾಪ, ಪುಣ್ಯಗಳನ್ನು ಅನುಸರಿಸಿ ತೀರ್ಪನ್ನು ಹೇಳುತ್ತೇನೆ ಅಂದಾಗ, ಸಮಾಧಿಗಳಿಂದ ಕೊನೆಯಲ್ಲಿ ಎಬ್ಬಿಸುತ್ತೇನೆ ಎಂದು ಹೇಳಿದಾಗ ಇವರೆಲ್ಲಾ ಮೊದಲೇ ಸ್ವರ್ಗ ನರಕಗಳಲ್ಲಿ ಏಕೆ ಇದ್ದಾರೆ ಎಂದು ನಾವು ಪ್ರಶ್ನಿಸಿಕೊಳ್ಳುವುದಕ್ಕೆ ಅವಕಾಶವಿದೆ. ಬೇರೆಯವರು ಕೇಳಿದರೇ ಕೂಡಾ ನಮ್ಮ ಹತ್ತಿರ ಉತ್ತರವಿಲ್ಲ. ಆದ್ದರಿಂದ ನೀವು ಒಂದು ಕೆಲಸವನ್ನು ಮಾಡಿ, ಖುರ್‌ಆನ್ ಗ್ರಂಥದಲ್ಲಿ ವಿಷಯಗಳ ಮೇಲೆಯೇ ನೀವು ದೃಷ್ಠಿ ಇಟ್ಟುಕೊಳ್ಳಿ

ಎಂದು ನಾವು ಪ್ರತ್ಯೇಕಿಸಿ ಎಲ್ಲರಿಗೂ ಹೇಳುತ್ತಿದ್ದೇವೆ. ಇದೇನು? ಪುನಃ ಭಗವದ್ಗೀತೆಯನ್ನು ಬಿಟ್ಟು ಖುರ್‌ಆನ್ ಎನ್ನುತ್ತಿದ್ದೀಯ? ಎಂದು ಅಂದು ಕೊಳ್ಳಬೇಡಿ. ನೀವು ಭಗವದ್ಗೀತೆ ನೋಡಿಕೊಂಡರೂ ಖುರ್‌ಆನ್ ನೋಡಿ ಕೊಂಡರೂ ಎಲ್ಲರಿಗೂ ದೇವರ ಜ್ಞಾನ ಅರ್ಥವಾಗುವ ವಿಧವಾಗಿ ನಾನು ಹೇಳುತ್ತಿದ್ದೇನೆ. ಒಂದು ವೇಳೇ ಕೈಲಾದರೇ ಬೈಬಲ್ ಸಹ ನೀವು ನೋಡಿರಿ. ನಾವು ಭಗವದ್ಗೀತೆ ನೋಡಿದ್ದೇವೆ. ಹಾಗೇ ಖುರ್‌ಆನ್ ಕೂಡಾ ನೋಡಿದ್ದೇವೆ. ಕೈಲಾದ್ದರಿಂದ ಬೈಬಲ್‌ನ್ನು ಸಹ ನೋಡಿದ್ದೇವೆ. ಕೈಲಾದ್ದರಿಂದ ಎಲ್ಲರಿಗೂ ತಿಳಿಯದ ವಿಷಯಗಳು ಕೂಡಾ ನಾನು ತಿಳಿದುಕೊಂಡಿದ್ದೇನೆ. ಕೈಲಾದ್ದರಿಂದ ಪ್ರಶ್ನಿಸುತ್ತಿದ್ದೇವೆ. ಕೈಲಾಗಲಿಲ್ಲ ಆದ್ದರಿಂದ ಬಹಳ ಜನ ಹೇಳಲಿಲ್ಲ. ಆದ್ದರಿಂದ ಅಂತಹ ಸಂಧರ್ಭ ಬಾರದಂತೆ ನೀವು ಎಲ್ಲಾ ವಿಷಯಗಳನ್ನು ತಿಳಿಸಬೇಕಲ್ಲವೆ! ನೀವು ಹೇಳುವ ಸಾಮರ್ಥ್ಯದಲ್ಲಿ ಇದ್ದೀರಾ? ಈಗ ನೀವು ನಿಮ್ಮನ್ನು ಪ್ರಶ್ನಿಸಿಕೊಂಡು ನೋಡಿಕೊಳ್ಳಿ ನೀವು ಪ್ರತಿ ಪ್ರಶ್ನೆಗೂ ಉತ್ತರ ಹೇಳುತ್ತಿರೇನೋ ಎದೆಯಮೇಲೆ ಕೈ ಇಟ್ಟುಕೊಂಡು ನೋಡಿಕೊಳ್ಳಿ. ಹೇಳುತ್ತೀರೋ? ಇಲ್ಲವೋ.

ಈ ಮಧ್ಯ ಕಾಲದಲ್ಲಿ ವಿಜಯನಗರ ಮೀಟಿಂಗ್‌ನಲ್ಲಿ ಕೂಡಾ ನಾನು ಹೇಳಿದ್ದೇನೆ. ಅಲ್ಲಿ ನನ್ನ ಹತ್ತಿರಕ್ಕೆ ಕೆಲವು ಮಂದಿ ಮುಸ್ಲೀಮ್‌ರು ಬಂದಿದ್ದಾರೆ. ನನ್ನನ್ನು ಅವರ ಮತದೊಳಗೆ ಸೇರಿಸಿಕೊಳ್ಳಬೇಕು ಎಂದರೇ ಲಕ್ಷಣವಾಗಿ ಸೇರಿಹೋಗುತ್ತೇನೆ. ನನಗೇನು ಅಭ್ಯಂತರ ಇಲ್ಲ. ನನಗೆ ಸ್ವಲ್ಪ ಜ್ಞಾನ ಅರ್ಥವಾದರೇ ಅಲ್ಲವೆ! ಮತದಲ್ಲಿ ಬೆರೆತುಹೋದ ನಂತರ ಯಾರಾದರೂ ಕೇಳಿದರೇ ನಾನು ಏನು ಹೇಳಬೇಕು? ಮೊದಲು ನನಗೆ ಸ್ವಲ್ಪ ಜ್ಞಾನ ಅರ್ಥ ಆಗಬೇಕು ಎಂದಿದ್ದೇನೆ. ಆಗ ಅವರು ಏನು ಅರ್ಥವಾಗಲಿಲ್ಲವೋ ಹೇಳಿರಿ ಎಂದಿದ್ದಾರೆ. ನಾನು ಒಂದು ಪ್ರಶ್ನೆ ಕೇಳಿದರೇ, ಅವರು ಗೊಂದಲಕ್ಕೀಡಾಗಿ ಕೊನೆಗೆ ಇಂಟರ್‌ನೆಟ್‌ನಲ್ಲಿ ನೋಡಿ ಹೇಳುತ್ತೇವೆ ಎಂದಿದ್ದಾರೆ. ಆಗ ನಾನು ನೀವು ಉತ್ತರ ಹೇಳಿದ ನಂತರ ನೋಡುತ್ತೇವೆ ಎಂದು ಹೇಳಿ ಹೊರಗೆ ಬಂದಿದ್ದೇವೆ. ಆ ವಿಧವಾಗಿ ಮತ ಹಿರಿಯರಾದವರು ಹೇಳಲಾರದೆ ಹೋಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ

ಅವರು ಇದ್ದಾರೆ. ಆದ್ದರಿಂದ ನಾವು ಹಾಗೆ ಅಲ್ಲದೆ ಅಂದರೇ ನಾವು ತಿಳಿಯುವುದಾದರೇ ಯಾವುದಾದರೂ ತಿಳಿಯಬಹುದು. ಆದ್ದರಿಂದ ನಾವು ಒಂದು ಚಿಕ್ಕ ಪ್ರಶ್ನೆ ಕೇಳಿದರೇ ಅದಕ್ಕೆ ಉತ್ತರ ಹೇಳಲಾರದ ಪರಿಸ್ಥಿತಿ ಅದರಲ್ಲಿ ಇದೆ. ಆದ್ದರಿಂದ ಹಾಗೆ ಅಲ್ಲದೆ ಅಂತಹ ಪರಿಸ್ಥಿತಿ ಖುರ್‌ಆನ್ ಗ್ರಂಥದಲ್ಲಿ ಬಾರದಂತೆ ಪ್ರತಿ ವಾಕ್ಯಕ್ಕೂ ಅಂದರೇ ಪ್ರತಿ ಆಯತ್‌ಗೂ ಉತ್ತರ ಹೇಳುವ ಸಾಮರ್ಥ್ಯ ಕಲ್ಪಿಸಬೇಕೆಂದರೆ ಪ್ರತಿ ಒಬ್ಬ ಮುಸ್ಲೀಮ್ ಆ ವಿಧವಾಗಿ ತಯಾರಾಗಬೇಕೆನ್ನುವ ಉದ್ದೇಶದಿಂದ ನಿಮ್ಮ ಹತ್ತಿರ ನಿಮಗೆ ಏನಾದರೂ ತಿಳಿಯದ ವಿಷಯಗಳು ಇದ್ದರೇ ನಮ್ಮನ್ನು ಕೇಳಿ ಅದಕ್ಕೆ ವಿವರವನ್ನು ಹೇಳುತ್ತೇವೆ. ಈ ಮತ, ಆ ಮತ ಎಂದು ಮತ ಬೇಧ ಇಟ್ಟುಕೊಳ್ಳಬೇಡಿ. ನಿಮಗೆ ದೇವರ ವಿಷಯ ಅಲ್ಲವೆ ಬೇಕಾಗಿರುವುದು! ನನಗೂ ಸಹ ದೇವರ ವಿಷಯವೇ ಅವಶ್ಯ. ದೇವರ ವಿಷಯವನ್ನು ಪ್ರಶ್ನಿಸಿರಿ ನಮ್ಮ ಖುರ್‌ಆನ್ ಗ್ರಂಥದಲ್ಲಿ ಇದು ಇದೆ. ಇದರ ಅರ್ಥ ಏನು ಎಂದು ಕೇಳಿದರೆ ತಪ್ಪದೆ ಹೇಳುತ್ತೇವೆ. ನಮ್ಮವರು ಹೇಳಲಾರದ ಅರ್ಥವನ್ನು ನೀವು ಹೇಳುತ್ತೀರಾ? ಎಂದು ಅಂದುಕೊಳ್ಳಬೇಡಿ. ನಿಮ್ಮವರೇ ನಿಮಗೆ ಹೇಳಲಾರದೆ ಹೋದರೂ ಅದರ ಅರ್ಥ ನಾನು ಹೇಳುತ್ತೇನೆ ಎಂದು ಹೇಳುತ್ತಿದ್ದೇನೆ. ಇಲ್ಲಿ ನಿಮ್ಮವರು ನಮ್ಮವರು ಎಂದು ಅಂದುಕೊಳ್ಳಬಾರದು.

ಜ್ಞಾನ ತಿಳಿದವರು ಯಾರಾದರೂ ನಿಮ್ಮವರೇ. ಆದ್ದರಿಂದ ದೇವರು ಎಲ್ಲರಿಗೂ ಒಬ್ಬನೇ. ನಿಮ್ಮ ದೇವರು, ನಮ್ಮ ದೇವರು ಎಂದು ಬೇರೆ ಬೇರೆಯಾಗಿ ಇಲ್ಲ, ನಿಮ್ಮ ಜ್ಞಾನ, ನಮ್ಮ ಜ್ಞಾನ ಏನು? ಎಲ್ಲಾ ಒಂದೇ ಜ್ಞಾನವೇ. ಆದ್ದರಿಂದ ನಾವು ಯಾವ ಜ್ಞಾನಕ್ಕಾದರೂ ಉತ್ತರ ಹೇಳುತ್ತೇವೆ. ಅದು ನಮ್ಮ ಜ್ಞಾನವೇ! ದೇವರು ಎಲ್ಲರಿಗೂ ಒಬ್ಬನೇ. ಹಾಗಿರುವಾಗ ಏನಿದೆ? ನಾವು ಎಲ್ಲದಕ್ಕೂ ಸಮಾಧಾನ ಹೇಳುತ್ತೇವೆ ಅಲ್ಲವೆ! ಆದ್ದರಿಂದ **ಖುರಾನ್‌ನಲ್ಲಿ ಜ್ಞಾನವಾಕ್ಯಗಳು** ಎನ್ನುವ ಹೆಸರು ಇಟ್ಟು ಒಂದು ಗ್ರಂಥ, **ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು** ಎನ್ನುವ ಹೆಸರಿಂದ ಮತ್ತೊಂದು ಗ್ರಂಥವೂ ಸಹ ಬರೆದಿದ್ದೇವೆ. ಅದು ಸಾಧಾರಣವಾಗಿ **"ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀ"** ಗೆ ಆ ಗ್ರಂಥಗಳನ್ನು ಕೊಡಬೇಕೆಂದುಕೊಂಡಿದ್ದೇವೆ. ಆ ಗ್ರಂಥಗಳೊಂದಿಗೆ ಅವರು

ಮುಂದಕ್ಕೆ ಹೋಗಬೇಕೆಂದುಕೊಂಡಿದ್ದಾರೆ. ಈಗ ನಿಮಗೆ ಹೇಳುವುದು ಏನು ಎಂದರೇ ಖುರ್‌ಆನ್ ಬೇರೆ, ಹದೀಸುಗಳು ಬೇರೆ. ಹದೀಸುಗಳಿಗಿಂತ ಖುರ್‌ಆನ್ ಶ್ರೇಷ್ಟವಾದುದು. ಖುರ್‌ಆನ್‌ನಲ್ಲಿನ ವಿಷಯಗಳನ್ನು ನೀವು ತಿಳಿದುಕೊಳ್ಳಿ. ಎಲ್ಲಾದರೂ ಹದೀಸುಗಳಲ್ಲಿ ಯಾವುದಾದರೂ ತಪ್ಪಿದ್ದರೇ ಅವುಗಳನ್ನು ಬಿಟ್ಟುಬಿಡಿ. ಆದರೇ ಖುರ್‌ಆನ್‌ನಲ್ಲಿ ಒಂದನ್ನು ಕೂಡಾ ಬಿಡಬೇಡಿ. 7 ಲಕ್ಷಗಳ ಹದೀಸುಗಳಲ್ಲಿ ಅವರು ಎರಡು ಸಾವಿರಕ್ಕೆ ಬಂದಿದ್ದಾರೆ. 7 ಲಕ್ಷಗಳ ಹದೀಸುಗಳನ್ನು ಬರೆದವರೇ ಎಲ್ಲವನ್ನೂ ಅಲ್ಲವೆಂದು ಕೊನೆಗೆ ಎರಡು ಸಾವಿರ ಮುಖ್ಯ ಎಂದು ಅಂದಿದ್ದಾರೆ. ಯಾವಾಗಲೋ ಪ್ರವಕ್ತರವರು ಮರಣಿಸಿದ ನಂತರ 120 ವರ್ಷಗಳ ನಂತರ ಹೇಳಿಕೊಂಡಿರುವಂತಹ ವಿಷಯಗಳು ನಮಗೆ ಎಷ್ಟು ಸ್ವಚ್ಚತೆಯನ್ನು ಕೊಡುತ್ತವೋ ನಾವು ಹೇಳಲಾರೆವು.

ಆದರೇ ಆ ದಿನ ಪ್ರವಕ್ತರವರು ಇದ್ದಾಗಲೇ ಕೆಲವರು ತಪ್ಪು ಮಾಡುತ್ತಿದ್ದರೇ ಅವರಿಗೆ ಪ್ರವಕ್ತ ರವರು ಹೇಳಿದ ಮಾತುಗಳೇ ಅರ್ಥ ಆಗದಂತೇ ಇದ್ದರೇ, “ಇದು ತಪ್ಪು, ಪ್ರವಕ್ತರವರು ಈ ವಿಧವಾಗಿ ಹೇಳಲಿಲ್ಲ. ಪ್ರವಕ್ತರವರು ಹೇಳಿರುವುದನ್ನು ನೀವು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಪ್ರವಕ್ತರವರು ಹೇಳಿರುವಂತಹ ಭಾವ ಇದು. ಈ ಭಾವದ ಪ್ರಕಾರ ನೀವು ನಡೆದುಕೊಳ್ಳದಂತೆ ಬೇರೇ ಭಾವನೆಯಿಂದ ನಡೆದುಕೊಳ್ಳುತ್ತಿದ್ದೀರೆಂದು” ಪ್ರವಕ್ತ ಇರುವ ದಿನಗಳಲ್ಲಿಯೇ, ಪ್ರವಕ್ತ ಹೆಂಡತಿಯಾದ ಆಯೇಷಾರವರು ಹೇಳಿದ್ದಾರೆ. ಆ ದಿನ ಪ್ರವಕ್ತ ರವರು ಇರುವ ದಿನಗಳಲ್ಲಿಯೇ ಅವರಿಗೆ ಅರ್ಥವಾಗದಿರುವಾಗ ಪ್ರವಕ್ತ ಹೋದ ನಂತರ ಕೆಲವು ವರ್ಷಗಳಿಗೆ ಅದು ನಿಜ ಎಷ್ಟೋ, ಅಸತ್ಯವೆಷ್ಟೋ ಹದೀಸುಗಳನ್ನು ಬರೆದುಕೊಂಡು ಅದನ್ನೇ ಸತ್ಯವಾಗಿ ಹೇಳಿಕೊಂಡರೇ ನಮ್ಮ ಜ್ಞಾನಕ್ಕೆ ಕಷ್ಟವಾಗುತ್ತದೆ ಆದ್ದರಿಂದ ಅವುಗಳಲ್ಲಿ ಎಲ್ಲಾ ಕೆಲಸಕ್ಕೆ ಬರುವುದಿಲ್ಲ ಎಂದು ನಾನು ಹೇಳಲಿಲ್ಲ. ಕೆಲವು ಕೆಲಸಕ್ಕೆ ಬಾರದಿರುವವು ಇವೆ. ಅವುಗಳನ್ನು ತೆಗೆದುಹಾಕಬಹುದು, ಆದರೇ ಖುರ್‌ಆನ್ ಗ್ರಂಥದಲ್ಲಿ ಹಾಗೆ ಅಲ್ಲ ಪ್ರತಿ ವಾಕ್ಯ ಕೆಲಸಕ್ಕೆ ಬರುವುದೇ. ಎಲ್ಲ ವಾಕ್ಯಗಳಿಗೂ ನಾನು ವಿವರವನ್ನು ಹೇಳಲಿಲ್ಲ. ಏಕೆಂದರೇ ದೇವರು ಹೇಳಿದ ಎಲ್ಲ ವಾಕ್ಯಗಳಿಗೂ ವಿವರ ಹೇಳುವುದಕ್ಕೆ ನಮಗೆ ಕೈಲಾಗುವುದಿಲ್ಲ. ನಾವು ಕೆಲವು ವಾಕ್ಯಗಳಿಗೆ ಮಾತ್ರವೇ ವಿವರ ಹೇಳುತ್ತೇವೆ.

ನಾವು ಏನು ಹೇಳುತ್ತಿದ್ದೇವೆಂದರೇ ದೇವರು ಹೇಳಿದ ಎಲ್ಲ ವಾಕ್ಯಗಳಿಗೂ ದೇವರೇ ಸಮಾಧಾನವನ್ನು ಹೇಳಬೇಕು. ದೇವರು ಇಂತಹವನು ಎಂದು ಹೇಳುವುದಕ್ಕೆ ಯಾವ ಮನುಷ್ಯನಿಂದಲೂ ಆಗುವುದಿಲ್ಲ. ನಾವು ಸಾಧಾರಣವಾಗಿ ಕೆಲವು ವಿಷಯಗಳನ್ನು ಹೇಳಿಕೊಳ್ಳಬಹುದು. ಆದ್ದರಿಂದ ದೇವರ ವಿಷಯಗಳು ದೇವರೇ ಹೇಳಬೇಕು. ಖುರ್‌ಆನ್ ವಾಕ್ಯಗಳಲ್ಲಿ ಯಾವ ವಾಕ್ಯವನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ಆದರೇ ಎಲ್ಲ ವಾಕ್ಯಗಳು ನಮಗೆ ತಿಳಿದಿಲ್ಲ. ಕೆಲವು ವಾಕ್ಯಗಳ ಕುರಿತೇ ನಾವು ಬರೆದುಕೊಳ್ಳುತ್ತಿದ್ದೇವೆ, ಆದರೇ ಎಲ್ಲ ವಾಕ್ಯಗಳ ಕುರಿತು ನಾವು ಬರೆಯಲಾರೆವು. ಆದ್ದರಿಂದ ನಾವು ಕೆಲವು ವಾಕ್ಯಗಳಿಗೇ ವಿವರವನ್ನು ಬರೆದಿದ್ದೇವೆ. ಅವು ಜ್ಞಾನ ವಾಕ್ಯಗಳು, ವಜ್ರವಾಕ್ಯಗಳು ಎಂದು ಎರಡು ಹೆಸರುಗಳಿಂದ ಇವೆ. ಖುರ್‌ಆನ್ ಗ್ರಂಥ ದೊಡ್ಡದು ಆ ಖುರ್‌ಆನ್ ವಾಕ್ಯಗಳೇ ನಾವು ಮುಖ್ಯವಾಗಿ ಕೆಲವನ್ನು ಬರೆದಿದ್ದೇವೆ. ಖುರ್‌ಆನ್ ನಂತರ ಹದೀಸುಗಳು ಎರಡನೆಯದು. ಆದ್ದರಿಂದ ಹದೀಸುಗಳಲ್ಲಿ ನೀವು ಕೆಲವು ತೆಗೆದುಹಾಕಿಕೊಳ್ಳಬಹುದು.

ಖುರಾನ್ ಗ್ರಂಥದಲ್ಲಿ ಜ್ಞಾನದ ಪ್ರಕಾರ ನಡೆದುಕೊಳ್ಳುವುದಕ್ಕೆ, ಆತಂಕ ಉಂಟಾಗದಂತೆ ಇರುವುದಕ್ಕೆ ಹದೀಸು ಗ್ರಂಥದಲ್ಲಿ ಕೆಲವನ್ನು ಬಿಟ್ಟರೂ ಪರವಾಗಿಲ್ಲ. ಆದರೇ ಖುರ್‌ಆನ್ ಗ್ರಂಥದಲ್ಲಿ ಬಿಟ್ಟುಹಾಕುವುದಕ್ಕೆ ಅವಕಾಶವೇ ಇಲ್ಲ. ನಿನಗೆ ಅರ್ಥವಾಗದೇ ಹೋದರೇ ಕೆಲವು ಹೇಳಿಕೋ, ಕೆಲವು ಬಿಟ್ಟುಬಿಡು ಯಾರನ್ನಾದರೂ ಕೇಳಿ ತಿಳಿದುಕೋ ಪರವಾಗಲ್ಲ. ಅಷ್ಟೇ ಹೊರತು ಯಾವ ಒಂದೂ ಸಹ ತೆಗೆದುಹಾಕುವುದಕ್ಕೆ ಆಗುವುದಿಲ್ಲ. ಆದ್ದರಿಂದ ಪವಿತ್ರವಾದ ಖುರ್‌ಆನ್ ಗ್ರಂಥದಲ್ಲಿ ದೇವರ ಧರ್ಮ ಇದೆ. ಪ್ರವಕ್ತರವರ ಜ್ಞಾನ ಇದೆ. ಮನುಷ್ಯರಾದಂತಹ ನಾವು ದೇವರ ಜ್ಞಾನವನ್ನು ಆಚರಿಸಬೇಕೆನ್ನುವ ಉದ್ದೇಶದಿಂದ ಹೇಳುತ್ತಿರುವುದೇನೆಂದರೇ! ಪವಿತ್ರ ಖುರ್‌ಆನ್ ಗ್ರಂಥದಲ್ಲಿ ಧರ್ಮ ದೇವರದು, ಜ್ಞಾನ ಪ್ರವಕ್ತರದು, ಆಚರಣೆ ಮನುಷ್ಯರದು. ಆದ್ದರಿಂದ ನಾವು ಆಚರಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಎರಡನೆ ವಿಧಾನ ನಮಗೆ ಬೇಡ. ಆದ್ದರಿಂದ ಖುರಾನ್ ಗ್ರಂಥದಲ್ಲಿ ಇರುವಂತಹ ವಿಷಯಗಳನ್ನು ಪ್ರತಿ

ಮುಸ್ಲೀಮ್ ತಿಳಿದುಕೊಂಡು ಅದರಲ್ಲಿ ಸಾರಾಂಶವನ್ನು ಗ್ರಹಿಸಿಕೊಳ್ಳಬೇಕು. ನೀವು ಸುಮ್ಮನೆ ಓದುವುದು ಮುಖ್ಯವಲ್ಲ. ಪ್ರತಿ ವಾಕ್ಯದಲ್ಲಿ ಇರುವ ಸಾರಾಂಶವನ್ನು ತಿಳಿದುಕೊಂಡು, ಅದರ ಆಚರಣೆ ಯಾವ ವಿಧವಾಗಿ ಮಾಡಬೇಕೆನ್ನುವ ಉದ್ದೇಶದಿಂದ ನೀವು ಆಚರಿಸಿದರೇ ದೇವರಿಗೆ ಹತ್ತಿರವಾಗಿ ಹೋಗಬಹುದು. ಅಲ್ಲಾಹ್ ಹತ್ತಿರಕ್ಕೆ ನೀವು ಸೇರಿಕೊಳ್ಳಬಹುದು. ಈ ಜನ್ಮದಲ್ಲೇ ಸೇರಿಕೊಳ್ಳಬಹುದು. ಆದ್ದರಿಂದ ಪ್ರತಿ ಒಬ್ಬರೂ ಅದೇ ಪ್ರಯತ್ನವನ್ನು ಮಾಡಿರಿ. ಖುರ್‌ಆನ್‌ವೊಂದರ ಸ್ವಚ್ಛವಾದಂತಹ ವಿವರಗಳನ್ನು ತಿಳಿದುಕೊಳ್ಳಿ. ಅಲ್ಲಾಹ್ ಹತ್ತಿರಕ್ಕೆ ಹೋಗುವುದಕ್ಕೆ ಪ್ರಯತ್ನವನ್ನು ಮಾಡಿರಿ.

ಇನ್ನೂ ಕೆಲವರು ಮುಸ್ಲೀಮ್ ಪಂಡಿತರು ಖುರ್‌ಆನ್‌ನೇ ಮುಖ್ಯ, ಹದೀಸುಗಳು ಮುಖ್ಯವಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ ಪ್ರವಕ್ತರವರು ಬದುಕಿರುವಾಗ ಹದೀಸುಗಳನ್ನು ಬರೆಯಬೇಕೆಂದುಕೊಂಡವರನ್ನು ಹೆಚ್ಚರಿಸಿ ಅದು ತಪ್ಪು ದೇವರ ಗ್ರಂಥ ಒಂದೇ ಮನುಷ್ಯರಿಗೆ ಅವಶ್ಯ. ಆದ್ದರಿಂದ ಯಾರೂ ಹದೀಸುಗಳನ್ನು ಬರೆಯಬಾರದು ಎಂದು ಹೇಳಿದ್ದಾರೆ. ಆ ವಿಷಯಗಳನ್ನು ಶೇಖರಿಸಿ ಕೆಳಗೆ ಒದಗಿಸುತ್ತಿದ್ದೇವೆ ನೋಡಿರಿ.

# ಹದೀಸುಗಳ ಚರಿತ್ರೆ

*** ಯಾವಾಗ ಏಕೆ ಬರೆದಿದ್ದಾರೆ.**

*** ಮುಹಮ್ಮದ್ ಪ್ರವಕ್ತ ಹದೀಸುಗಳು ಬರೆಯುವುದು ನಿಷೇದಿಸಿದ್ದಾರೆ.**

ಮುಹಮ್ಮದ್ ಪ್ರವಕ್ತ ಹದೀಸುಗಳು ಬರೆಯುವುದನ್ನು ನಿಷೇಧಿಸಿದ್ದಾನೆ. ಈ ದಿನ ನಮ್ಮ ಹತ್ತಿರವಿರುವ ಎಲ್ಲ ಹದೀಸುಗಳು, ಯಾವನ್ನು ಹದೀಸು ಪಂಡಿತರು ನಿರ್ಧಾರಿಸಿದ್ದಾರೋ, ಅವು ಎಲ್ಲವೂ ಪ್ರವಕ್ತ ಮರಣಿಸಿದ 200 ವರ್ಷಗಳ ನಂತರ ಬರೆದಿರುವವು. 200 ವರ್ಷಗಳವರೆಗು ಪ್ರವಕ್ತ ವಿಧಿಸಿದ

ನಿಯಮಗಳಿಂದ, ಯಾವ ಹದೀಸು ಗ್ರಂಥವೂ ನಿರ್ಧಾರಿಸಲ್ಪಟ್ಟು ಬರೆಯಲಿಲ್ಲ. ಈ ದಿನ ನಮ್ಮ ಹತ್ತಿರ ಇರುವ ಷಾಹೀ ಶೇಖರಣೆಗಳು (ಹದೀಸುಗಳು) ರಚಿಸಿದ ಬುಖಾರಿ ಕೂಡಾ ಹಿಜ್ರಾ (870) ನಂತರ 194 ವರ್ಷಗಳಿಗೆ ಜನ್ಮಿಸಿದ್ದಾನೆ. ಉಳಿದ 6 ಹದೀಸುಗಳ ರಚನಕಾರರು ಸಹ ಬುಖಾರಿ ಜನ್ಮಿಸಿದ ನಂತರ ಜನ್ಮಿಸಿದ್ದಾರೆ.

ಖುರ್‌ಆನ್, ಹದೀಸು ಕಲ್ಪಿತವನ್ನು ಕುರಿತು ಹೇಳುತ್ತದೆ. ಅದು ಪ್ರವಕ್ತವೊಂದರ ಶತ್ರುಗಳಿಂದ ಕಲ್ಪಿಸಲ್ಪಡುತ್ತದೆ. 6ನೇ ಸೂರಾ, 112ನೇ ಆಯತ್ (6–112) ನಾವು ಪ್ರತಿ ಪ್ರವಕ್ತಗು, ಮಾನವನಿಗೂ, ಜಿನ್ನರಿಗೂ ಶತ್ರುಗಳನ್ನು ತಯಾರು ಮಾಡಿದ್ದೇವೆ. ಒಬ್ಬರನ್ನೊಬ್ಬರು ಪ್ರೇರೇಪಿಸುವುದಕ್ಕೆ ಆಕರ್ಷಣೀಯ ಮಾತುಗಳು, ಮೋಸ ಮಾಡುವುದಕ್ಕೆ ದೇವರು ನೆನೆದಿದ್ದರೇ ಅವರು ಹಾಗೆ ಮಾಡುತ್ತಿರಲಿಲ್ಲ. ನೀವು ಹದೀಸುಗಳನ್ನು ಬಿಟ್ಟುಹಾಕಬೇಕು. ಅವರು ಕಲ್ಪಿಸಿರುವವು.

ಖುರಾನ್ ಸಹ ನಿರ್ಧರಿಸುತ್ತದೆ ಅದು ದೇವರವೊಂದರ ಇಷ್ಟದಿಂದಲೇ ಹದೀಸುಗಳ ಕಲ್ಪನೆ (ತಯಾರಿಸುವುದು) ಅನುಮತಿಸಲ್ಪಟ್ಟಿದೆ. ಇದು ಒಂದು ಖುರ್‌ಆನ್ ಸೂತ್ರದ ಪ್ರಕಾರ, ದುರ್ಮಾರ್ಗರೆಂದು ಮತ್ತು ವಿಶ್ವಾಸಿಗಳೆಂದು ಬೇರೆ ಮಾಡುವುದಕ್ಕೆ. ಯಾರು ಹದೀಸುಗಳನ್ನು ಆಚರಿಸುತ್ತಾರೋ ಅವರು ಅಸತ್ಯ ವಿಶ್ವಾಸಿಗಳು ಎಂದು ನಿರ್ಧಾರಿಸಲ್ಪಟ್ಟಿದೆ. ನಿಜವಾದ ವಿಶ್ವಾಸಿಗಳು ದೇವ ರೊಂದಿಗೆ ಮಾತ್ರವೇ ಸಂತೃಪ್ತಿ ಹೊಂದುತ್ತಾರೆ. ಅವರು ದೇವರ ಮಾತುಗಳಿಂದಲೇ ಸಂತೃಪ್ತಿ ಹೊಂದುತ್ತಾರೆ, ಇನ್ನೂ ದೇವರ ಧರ್ಮದೊಂದಿಗೆ (ಖುರ್‌ಆನ್ ವೊಂದಿಗೆ) ಮಾತ್ರವೇ ತಪ್ತಿ ಪಡೆಯುತ್ತಾರೆ. ಅವರು ದೇವರವೊಂದರ ಮಾತುಗಳನ್ನೇ ವಿಶ್ವಾಸಿಸುತ್ತಾರೆ, ಯಾವುದು ಖುರ್‌ಆನ್ ಸಂಪೂರ್ಣ ಮತ್ತು ವಿವರಣಾತ್ಮಕ ಎಂದು ವರ್ಣಿಸುತ್ತವೋ ಅವುಗಳನ್ನೇ ನಂಬುತ್ತಾರೆ. ಆದ್ದರಿಂದ ಅವರಿಗೆ ಅವರೇ ಇನ್ನು ಯಾವುವೂ ಅವಶ್ಯವಿಲ್ಲ.

(6–114, 115) "ನಾನು ದೇವರನ್ನು ಬಿಟ್ಟು ಬೇರೇ ಮತ್ತೊಂದು ತೀರ್ಪು ಕೊಡುವವನನ್ನು ಅನ್ವೇಷಿಸಬೇಕಾ? ಅಸಲು ಆತನೇ ಅಲ್ಲವೇ! ಪೂರ್ತಿ

ವಿವರಗಳೊಂದಿಗೆ ಈ ಗ್ರಂಥವನ್ನು ಕಳುಹಿಸಿದವನು". ನಿನಗೆ ಪೂರ್ವ ಗ್ರಂಥ ಕೊಡಲ್ಪಟ್ಟವರಿಗೆ ನಿನ್ನ ಪ್ರಭುವಿನಿಂದಲೇ ಸತ್ಯಪೂರಕವಾದ ಈ ಗ್ರಂಥವೂ ಕೂಡಾ ಅವತರಿಸಿದೆಯೆಂದು ತಿಳಿದಿದೆ. ಆದ್ದರಿಂದ ನೀವು ಅವಮಾನಿಸುವವರಲ್ಲಿ ಸೇರಿಹೋಗಬೇಡ. ನಿನ್ನ ಪ್ರಭು ವಾಕ್ಕು ಸತ್ಯ, ನ್ಯಾಯಗಳ ದೃಷ್ಠಿಯಲ್ಲಿ ಸ್ವಚ್ಛವಾದುದು, ಸಮಗ್ರವಾದುದು. ಆತನ ವಚನಗಳನ್ನು ಯಾರೂ ಬದಲಾಯಿಸಲಾರರು. ಆತನು ಸಮಸ್ತವನ್ನು ಕೇಳುತ್ತಿದ್ದಾನೆ, ಸರ್ವವೂ ತಿಳಿದವನು.

ಅವರು ದೇವರ ಆಜ್ಞೆಯನ್ನು ಪಾಲಿಸುತ್ತಾರೆ. ಖುರ್‌ಆನ್ ಹೊರತು ಯಾವ ಹದೀಸನ್ನು ಆಚರಿಸಬಾರದು ಎಂದು.

(45–6) ಇವು ದೇವರು ತಿಳಿಸಿದ ವಿಷಯಗಳು, ಇವುಗಳನ್ನು ನಾವು ನಿಮಗೆ ಸತ್ಯವಾಗಿ ಹೇಳುತ್ತಿದ್ದೇವೆ. ದೇವರು ಮತ್ತು ದೇವರ ಸಂದೇಶಗಳು ಅಲ್ಲದೆ ಅವರು ಯಾವ ಹದೀಸನ್ನು ವಿಶ್ವಾಶಿಸುತ್ತಿದ್ದಾರೆ? (ಯಾವುದನ್ನೂ ವಿಶ್ವಾಸಿಸುವುದಿಲ್ಲ.)

ಅವರು ದೇವರ ಆಜ್ಞೆಯನ್ನು ಪಾಲಿಸುತ್ತಾರೆ ಖುರ್‌ಆನ್ ಹೊರತು ಯಾವ ಹದೀಸನ್ನು ಆಚರಿಸಬಾರದು ಎಂದು ಅನ್ನುತ್ತಾರೆ.

ಮತ್ತೊಂದು ಕಡೆ, ಅಸತ್ಯ ವಿಶ್ವಾಸಿಗಳು ಧರ್ಮಕ್ಕೆ ಆಧಾರವಾದ ಖುರ್‌ಆನ್‌ನೊಂದಿಗೆ ಸಂತೃಪ್ತಿ ಹೊಂದಲಿಲ್ಲ, ಅದಕ್ಕೇ ಅವರು ಇತರ (ಹದೀಸು) ಗ್ರಂಥಗಳಿಗೋಸ್ಕರ ನೋಡುತ್ತಿದ್ದಾರೆ.

(6–113) ಪರಲೋಕ ನಂಬದವರ ಹೃದಯಗಳು ಇರುವವರು ಸಹಜವಾಗಿಯೇ ಮನುಷ್ಯರು ಹೇಳಿದ ಸಿಹಿಯಾದ ಮಾತುಗಳನ್ನು ಕೇಳುವುದಕ್ಕೆ ಇಷ್ಟವನ್ನು ತೋರಿಸುತ್ತವೆ. ಆದ್ದರಿಂದ ಅವರು ಹಿಂದೆ ಮಾಡುತ್ತಾ ಬಂದಿರುವ ಕಾರ್ಯಗಳೇ ಈಗಲೂ ಮಾಡುತ್ತಿದ್ದಾರೆ.

ಹದೀಸು ಗ್ರಂಥ ಹೇಳುತ್ತಿದೆ, ಪ್ರವಕ್ತ ತನ್ನ ಹದೀಸು ಬರೆಯುವುದು ನಿಷೇಧಿಸಿದ್ದಾನೆ ಎಂದು. ಇನ್ನೂ ಆತನ ಅನುಚರರಿಗೆ ಕೂಡಾ ಖುರ್‌ಆನ್

ಹೊರತು ಬೇರೇ ಗ್ರಂಥ ಬರೆಯಬಾರದು ಎಂದು ಆದೇಶಿಸಿದ್ದಾನೆ! ಪ್ರವಕ್ತ ತಾನು ಹೇಳಿರುವುದನ್ನು ತಾನು ಮರಣಿಸುವವರೆಗೂ ಆಚರಿಸಿದ್ದಾನೆ. ಕೆಳಗೆ ಅಂತಹ ಹದೀಸುಗಳನ್ನು ನೋಡಿರಿ.

1) ಇಬ್ನ್ ಸಯೀದ್ ಅಲ ಖುದ್ರಿ ಹೀಗೆ ನಿವೇದಿಸಿದ್ದಾನೆ, ದೇವರ ದೂತ (ಜಿಬ್ರಯೇಲ್) ಹೀಗೆ ಹೇಳಿದ್ದಾನೆ.

"ನನ್ನಿಂದ ಬಂದಿರುವ ಖುರ್‌ಆನ್ ಹೊರತು ಬೇರೆಯದನ್ನು ಬರೆಯಬೇಡಿ. ಯಾರಾದರೂ ಖುರ್‌ಆನ್ ಹೊರತು ಇತರ ಬರೆದಿದ್ದರೇ ಅವುಗಳನ್ನು ತೆಗೆದುಹಾಕಬೇಕು". (ಅಹ್ಮದ್ ಸಂ 1, ಪುಟ 171 ಮತ್ತು ಷಾಹೀ ಮೊಸ್ಲಿಂ, ಜುಹಾಡ್, ಬುಕ್ 42, ನೆಂಬರ್ 7147)

ಕೆಲವು ಮಂದಿ ಹದೀಸು ಪಂಡಿತರು ಮುಹಮ್ಮದ್ ಹದೀಸುಗಳು ಬರೆಯುವುದನ್ನು ಕುರಿತು ತನ್ನ ಮನಸ್ಸು ಬದಲಾಯಿಸಿಕೊಂಡಿದ್ದಾನೆ ಎಂದು ಹೇಳಿದ್ದಾರೆಂದು ಪ್ರಯತ್ನ ಮಾಡಿದ್ದಾರೆ. ಆದರೇ, ಕೆಳಗೆ ಹೇಳಿರುವ ಹದೀಸುಗಳು ಪ್ರವಕ್ತ ಮರಣಿಸಿದ ಬಹಳ ವರ್ಷಗಳ ನಂತರ ಬರೆದಿರುವವು, ಮಹಮ್ಮದ್ ಪ್ರವಕ್ತ ಎಂದಿಗೂ ಹದೀಸುಗಳನ್ನು ಬರೆಯುವುದು ಅನುಮತಿಸಲಿಲ್ಲ, ತಾನು ತನ್ನ ಅನುಚರರಿಗೆ ಹದೀಸುಗಳನ್ನು ಬರೆಯಬೇಡ ಎಂದು ಹೇಳಿದ ನಂತರ ಎಂದು ನಿರ್ಧರಿಸುತ್ತಿವೆ.

## ಇಬ್ನ್ ಹಂಬಲ್ :–

2) ಜಾಯಿದ್ ಇಬ್ನ್ ತಬಿತ್ (ಪ್ರವಕ್ತ ಹತ್ತಿರ ಅನುಚರನು ಮತ್ತು ಖುರ್‌ಆನ್ ರಚಯಿತ) ಖಲೀಫಾಮು ಅವಿಯಾನು (ಪ್ರವಕ್ತ ಮರಣಿಸಿದ 30 ವರ್ಷಗಳ ನಂತರ) ಭೇಟಿಯಾಗಿದ್ದಾನೆ, ಮತ್ತು ಆತನಿಗೆ ಪ್ರವಕ್ತ ಕುರಿತು ಒಂದು ಕಥೆ ಹೇಳಿದ್ದಾನೆ. ಮು ಆವಿಯಾಕಿ ಆ ಕಥೆ ಇಷ್ಟವಾಯಿತು. ಇನ್ನೂ ಆ ಕಥೆಯನ್ನು ರಚಿಸಿರೆಂದು ಹೇಳಿದ್ದಾನೆ. ಆದರೇ ಜಾಯೀದ್ ಅಂದಿದ್ದಾನೆ **"ದೇವರ ದೂತ ನಮಗೆ ಯಾವಾಗಲೂ ತನ್ನ ಹದೀಸು ಬರಿಯೆಂದು ಆಜ್ಞಾಪಿಸಲಿಲ್ಲ".**

3) ಪ್ರಖ್ಯಾತ ಪುಸ್ತಕ "ಉಲೂಮ್ ಅಲ್ ಹಡಿತ್" ಇದು ಇಬ್ನ್ ಅಲ್ ಸಲಹೆಯಿಂದ ಬರೆಯಲಾಗಿದೆ. ಇದು ಅಬೂ ಹುರಾಯ ಹೇಳಿದ ಹದೀಸನ್ನು ನಿವೇದಿಸುತ್ತದೆ. ಅದರಲ್ಲಿ ಅಬೂ ಹುರೈರಾ ಹೀಗೆ ಹೇಳಿದ್ದಾನೆ "ನಾವು ಹದೀಸುಗಳನ್ನು ಬರೆಯುತ್ತಿರುವಾಗ ಪ್ರವಕ್ತ ನಮ್ಮ ಹತ್ತಿರಕ್ಕೆ ಬಂದು ನೀವು ಏನು ಬರೆಯುತ್ತಿದ್ದೀರಾ? ಎಂದು ಕೇಳಿದ್ದಾರೆ. ನಾವು ಹೇಳಿದೆವು "ಓ ಪ್ರವಕ್ತಾ! ನಿಮ್ಮಿಂದ ಕೇಳಿದ ಹದೀಸುಗಳನ್ನು ಬರೆಯುತ್ತಿದ್ದೇವೆ." ಆತನು ಹೀಗೆ ಅಂದಿದ್ದಾನೆ "ಏನು? ದೇವರ ಗ್ರಂಥ ಅಲ್ಲದೆ ಇನ್ನೊಂದಾ? ಅಂದಾಗ ನಾವು ಅಂದಿದ್ದೇವೆ "ನಿನ್ನನ್ನು ಕುರಿತು ನಾವು ಮಾತನಾಡೋಣವೇ?" ಆತನು (ಪ್ರವಕ್ತ) ಹೇಳಿದರು "ನನ್ನನ್ನು ಕುರಿತು ಮಾತನಾಡಿರಿ ಅದು ಒಳ್ಳೆಯದು, ಆದರೆ ಅಸತ್ಯವನ್ನು ಹೇಳುವವರು ನರಕಕ್ಕೆ ಹೋಗುತ್ತಾರೆ." ಅಬೂ ಹುರೈರಾ ಹೇಳಿದ್ದಾನೆ, ನಾವು ಬರೆದ ಎಲ್ಲ ಹದೀಸುಗಳನ್ನು ಶೇಖರಿಸಿ ಅವುಗಳನ್ನು ಅಗ್ನಿಯಲ್ಲಿ ಸುಟ್ಟುಹಾಕಿದ್ದೇವೆ.

4) ಪ್ರಖ್ಯಾತ ಗ್ರಂಥ "ತಕ್–ಈದ್ ಅಲ್–ಇಲ್ಮ್" ನಲ್ಲಿ ಅಬೂ ಹುರೈರಾ ಹೀಗೆ ಹೇಳಿದ್ದಾನೆ. ಕೆಲವು ಮಂದಿ ಹದೀಸುಗಳನ್ನು ಬರೆಯುತ್ತಿದ್ದಾರೆ ಎಂದು ಪ್ರವಕ್ತರಿಗೆ ತಿಳಿದಿದೆ. ಪ್ರವಕ್ತ ಮಸ್ಜೀದ್‌ನಲ್ಲಿ ವೇದಿಕೆ ಹತ್ತಿರಕ್ಕೆ ತೆಗೆದುಕೊಂಡು ಹೋಗಿದ್ದಾನೆ, ಇನ್ನೂ ಹೀಗೆ ಅಂದಿದ್ದಾನೆ. "ನೀವು ಬರೆದಿದ್ದೀರ ಎಂದು ನಾನು ಕೇಳಿದ ಈ ಗ್ರಂಥಗಳು ಯಾವುವು?" "ನಾನು ಕೇವಲ ಒಬ್ಬ ಮನುಷ್ಯ. ಹೀಗೆ ಬರೆದಿರುವವು ಇನ್ನೂ ಯಾರ ಹತ್ತಿರವಾದರೂ ಇದ್ದರೇ ಅವುಗಳನ್ನು ಇಲ್ಲಿಗೆ ತೆಗೆದುಕೊಂಡುಬನ್ನಿ ಎಂದಿದ್ದಾನೆ. ಆಗ ಅಬೂ ಹುರಾಯ ಹೇಳಿದ್ದಾನೆ, ನಾವು ಅವುಗಳನ್ನು ಶೇಖರಿಸಿ ಎಲ್ಲವನ್ನೂ ಅಗ್ನಿಯಲ್ಲಿ ಸುಟ್ಟುಹಾಕಿದ್ದೇವೆ.

5) ಇಬ್ನ್ ಹಂಬಲ್ ತನ್ನ ಗ್ರಂಥ ಮುಸ್ನಾದ್‌ನಲ್ಲಿ ಒಂದು ಹದೀಸನ್ನು ಹೀಗೆ ಹೇಳಿದ್ದಾನೆ. ಅದರಲ್ಲಿ ಅಬ್ದುಲ್ಲಾಹ್ ಇಬ್ನ್ ಒಮರ್ ಹೀಗೆ ಹೇಳಿದ್ದಾನೆ. ಪ್ರವಕ್ತ ಒಂದು ದಿನ ನಮ್ಮ ಹತ್ತಿರಕ್ಕೆ ತಾನು ಹತ್ತಿರದಲ್ಲೇ ಮರಣಸುವವನ ಹಾಗೆ ಬಂದಿದ್ದಾನೆ ಮತ್ತು ಪ್ರವಕ್ತ ಹೀಗೆ ಹೇಳಿದ್ದಾನೆ. "ನಾನು ಹೊರಟು ಹೋದ (ಸತ್ತುಹೋದ) ನಂತರ ದೇವರ ಗ್ರಂಥಕ್ಕೆ ಕಟ್ಟು ಬಿದ್ದು ಇರಿ. ಅದು

ಯಾವುದನ್ನು ನಿಷೇಧಿಸುತ್ತದೋ ಅದನ್ನು ನಿಷೇಧಿಸಿರಿ ಮತ್ತು ಅದು ಯಾವುದನ್ನು ಹಲಾಲ್ ಮಾಡಿದೆಯೋ ಅದನ್ನು ಹಲಾಲ್‌ಯಾಗಿ ಸ್ವೀಕರಿಸಿ".

6) ಇನ್ನೂ "ತಕ್–ಈದ್ ಅಲ್–ಇಲ್ಮ್" ನಲ್ಲಿ ಅಬೂ ಸಯೀದ್ ಅಲ್–ಖುದ್ರೀ ಹೀಗೆ ಹೇಳಿದ್ದಾನೆ. "ನಾನು ಪ್ರವಕ್ತನನ್ನು ಆತನ ಹದೀಸನ್ನು ಬರೆಯವುದಕ್ಕೆ ಅನುಮತಿ ಕೇಳಿದ್ದೇನೆ, ಆದರೆ ಆತನು ಅನುಮತಿ ಕೊಡುವುದಕ್ಕೆ ನಿರಾಕರಿಸಿದ್ದಾನೆ".

7) ಪ್ರವಕ್ತ ವೊಂದರ ಬೀಳ್ಕೊಡುಗೆ ಯಾತ್ರ ಮುಸ್ಲೀಮ್ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಈ ಯಾತ್ರೆಯಲ್ಲಿ ಪ್ರವಕ್ತ ಕೊಟ್ಟಿರುವ ತನ್ನ ಕೊನೆಯ ಪ್ರಸಂಗವನ್ನು ಎಷ್ಟೋ ಸಾವಿರಮಂದಿ ಮುಸ್ಲೀಮ್‌ರು ವೀಕ್ಷಿಸಿದ್ದಾರೆ. ಆದರೆ ಈ ಪ್ರಸಂಗ ಹದೀಸು ಗ್ರಂಥಗಳಲ್ಲಿ ಮೂರು ವಿಧಗಳಾಗಿ ಇದೆ. ಈ ಒಂದು ವಿಷಯವೇ ಹದೀಸು ಗ್ರಂಥಗಳು ಎಲ್ಲಿಯವರೆಗು ಅಸ್ಥಿರವಾಗಿ (ಒಂದೇ ವಿಧಾನ ಅಲ್ಲದೆ) ಇವೆಯೋ ತೋರಿಸುತ್ತದೆ. ಏಕೆಂದರೇ ಪ್ರವಕ್ತ ವೊಂದರ ಕೊನೆಯ ಪ್ರಸಂಗ ಎಷ್ಟೋ ಮಂದಿ ನೋಡಿರುವುದು.

**1. ಮೊದಲನೆ ವಿಧ.** "ನಾನು ನಿಮಗೆ ಬಿಟ್ಟುಬಿಟ್ಟಿದ್ದೇನೆ, ಯಾವುದನ್ನು ನೀವು ಇಟ್ಟುಕೊಂಡರೇ, ನೀವು ಎಂದಿಗೂ ಅಪಮಾರ್ಗ ಹಿಡಿಸಲ್ಪಡುವುದಿಲ್ಲ. ದೇವರವೊಂದರ ಗ್ರಂಥ ಮತ್ತು ನನ್ನ ಕುಟುಂಬ. ಮೊಸ್ಲಿಂ 44/4, ನಂಬರ್ 2408, ಇಬ್ನ್ ಹಂಬಲ್ 4/366, ದರಿಮಿ 23/1, ನಂಬರ್ 3319.

ಈ ಮಾತುಗಳು ಒಂದು ವಿಧ. ಇವುಗಳನ್ನು ಷಿಯಾ ಮುಸ್ಲೀಮ್ಸ್ ನಿರ್ಧರಿಸುತ್ತಾರೆ.

**2. ಎರಡನೆ ವಿಧ** "ನಾನು ನಿಮಗಾಗಿ ಬಿಟ್ಟುಹಾಕಿದ್ದೇನೆ ಯಾವುದನ್ನು ನೀವು ಹಿಡಿದುಕೊಳ್ಳುತ್ತೀರೋ, ನೀವು ಎಂದಿಗೂ ಅಪಮಾರ್ಗ ಹಿಡಿಸಲ್ಪಡುವು ದಿಲ್ಲ. ದೇವರ ಗ್ರಂಥ ಮತ್ತು ನನ್ನ ಸುನ್ನಹ್ (ಸಂಪ್ರದಾಯ / ವಿಧಾನ) – ಮುವಾತ, 46/3.

ಈ ವಿಧ ಮಾತುಗಳನ್ನು ಸುನ್ನಿ ಮುಸ್ಲೀಮ್ಸ್‌ರವರು ನಿರ್ಧರಿಸುತ್ತಾರೆ.

**3. ಮೂರನೆ ವಿಧ** "ನಾನು ನಿಮಗೋಸ್ಕರ ಬಿಟ್ಟು ಹಾಕಿದ್ದೇನೆ ಯಾವುದನ್ನು ನೀವು ಹಿಡಿದುಕೊಂಡರೇ, ನೀವು ಎಂದಿಗೂ ಅಪಮಾರ್ಗ ಹಿಡಿಸಲ್ಪಡುವುದಿಲ್ಲ. ದೇವರ ಗ್ರಂಥ." ಮೊಸ್ಲೀಂ 15/19, ನಂ. 1218, ಇಬ್ನ್ ಮಜ 25/84, ಅಬೂ Dawud 11/56.

ಈ ಮೂರನೆ ವಿಧ ಮಾತುಗಳನ್ನು ಸುನ್ನಿ, ಷಿಯಾ ಮುಸ್ಲೀಮ್ಸ್ ಇಬ್ಬರೂ ಒಂದೇ ವಿಧವಾಗಿ ದ್ವೇಷಿಸುತ್ತಾರೆ. ಈ ಮೂರನೆ ವಿಧ ಮಾತ್ರವೇ ಮುಹಮ್ಮದ್ ಸಂದೇಶ ಮಾತ್ರವೇ ಖುರಾನ್ ಎಂದು ಪುನಃ ಪುನಃ ಎಷ್ಟೋ ಬಾರಿ ಹೇಳಿದ ಮಾತುಗಳನ್ನು ನಿರ್ಧಾರಿಸುತ್ತದೆ. ಬಹಳ ಮಂದಿ ಸುನ್ನಿ, ಷಿಯಾ ಮುಸ್ಲೀಮ್‌ರಿಗೆ ಈ ಮೂರನೆ ವಿಧ ಇದೆಯೆಂದು ಕೂಡಾ ತಿಳಿದಿಲ್ಲ. ವಾಸ್ತವಕ್ಕೆ ಅವರು ಅದನ್ನು ತಿಳಿದುಕೊಳ್ಳಬೇಕೆಂದುಕೊಳ್ಳಲಿಲ್ಲ. ಏಕೆಂದರೇ ನಿಜ ಕಠಿನವಾಗಿ ಇರುತ್ತದೆ.

## ಹದೀಸು ಗ್ರಂಥಗಳು ಬರೆಯುವುದರೊಂದರ ಚರಿತ್ರೆ :

ದೇವರು ಪುನಃ ಪುನಃ ನಿರ್ಧಾರಿಸಿದ್ದಾನೆ ಖುರ್‌ಆನ್ ಸಂಪೂರ್ಣ ಗ್ರಂಥ ಎಂದು, ಖಚಿತವಾದುದು ಮತ್ತು ಪೂರ್ತಿಯಾಗಿ ವಿವರಿಸಲ್ಪಟ್ಟಿದೆ ಎಂದು (6–19, 38, 114, 115; 50–45, 12–111) ಮತ್ತು, ಒಂದು ವೇಳೆ ಅವಶ್ಯವಿದ್ದರೇ ಆತನೇ (ದೇವರು) ನಮಗೆ ನೂರಾರು ಗ್ರಂಥಗಳನ್ನು ಕೊಡುತ್ತಿದ್ದನು, ಒಂದು ಖುರ್‌ಆನ್ ಗ್ರಂಥ ಮಾತ್ರವೇ ಅಲ್ಲ (ನೋಡಿರಿ 18–109, 31–27).

## ಹಡಿತ್ ಮತ್ತು ಖೈಫಾಸ್ ಅಲ್–ರಾಷಿದೀನ್ (ಗೈಡೆಡ್ ಖೈಫಾಸ್)

ಪ್ರವಕ್ತ ಮರಣಿಸಿದ ನಂತರ ಮುಸ್ಲೀಮ್ ಉಮ್ಮ (ದೇಶ) ವನ್ನು ಪಾಲಿಸಿದ ನಾಲ್ವರು ನಡಿಸಲ್ಪಟ್ಟ ಖೈಫಾಲು ಮಹ್ಮದ್ ಪ್ರವಕ್ತ ವೊಂದರ ಆದೇಶವನ್ನು ಗೌರವಿಸಿ ಹದೀಸುಗಳನ್ನು ಬರೆಯುವುದು ಖಂಡಿಸಿದ್ದಾರೆ. ಮತ್ತು ಅಂದಿಗೇ ಅವುಗಳನ್ನು ನಿಷೇಧಿಸಿದ್ದಾರೆ. ಅವರು ಖುರ್‌ಆನ್ ಪೂರ್ತಿಯಾಗಿ

ವಿವರಿಸಲ್ಪಟ್ಟಿದೆ ಎನ್ನುವ ವಿಷಯವನ್ನು ಸ್ವೀಕರಿಸಿದ್ದಾರೆ ಮತ್ತು ಅದು ಮಾತ್ರವೇ ಮತಕ್ಕು ಪ್ರಜೆಗಳಿಗು ಮೂಲ ಎಂದು (6–114). ಅಬೂ ಬಕರ್‌ಗೆ ಒಂದಾನೊಂದು ಸಮಯದಲ್ಲಿ ನಿರ್ಧರಿಸಿಕೊಳ್ಳಲಾರದೆ ಹೋಗಿದ್ದಾನೆ ತನಗೆ ತಿಳಿದ ಹದೀಸುಗಳನ್ನು ಇಡಬೇಕೋ ಇಡಬಾರದೋ ಎಂದು. ಎಷ್ಟೋ ಕಾಲ ಮುಹಮ್ಮದ್ ಪ್ರವಕ್ತರೊಂದಿಗೆ ಬೆರೆತಿರುವ ಸಮಯದಲ್ಲಿ ಆತನು (ಅಬೂ ಬಾಕರ್) 500 ಹದೀಸುಗಳನ್ನು ಶೇಖರಿಸಿದ್ದಾನೆ, ಆದರೇ ತಾನು ಅವುಗಳನ್ನು ಸುಡುವವರೆಗು ರಾತ್ರಿ ನಿದ್ರಿಸಲಿಲ್ಲ. ಒಮರ್ ಇಬ್ನ್ ಅಲ್–ಖತ್ತಾಬ್ ತನ್ನ ಮಗ ಅಬ್ದುಲ್ಲಾಹ್ ಶೇಖರಿಸಿದ ಹದೀಸುಗಳನ್ನು ನಾಶ ಮಾಡಬೇಕೆಂದು ಹಠ ಹಿಡಿದಿದ್ದಾನೆ. ಇಸ್ಲಾಮ್ ಚರಿತ್ರೆ ಒಮರ್ ಇಬ್ನ್ ಅಲ್–ಖತ್ತಾಬ್ ಪ್ರವಕ್ತ ವೊಂದರ ನಾಲ್ವರು ಅನುಚರರಿಗೆ ದೂರವಾಗಿ ಇರುವ ಚರಿತ್ರೆಯನ್ನು ಹೇಳುತ್ತಿದೆ. ಏಕೆಂದರೇ, ಅವರು ಹದೀಸುಗಳನ್ನು ಹೇಳಬೇಕೆಂದು ಹಠ ಹಿಡಿದಿದ್ದಾರೆ. ಆ ನಾಲ್ವರು ಅನುಚರರು ಇಬ್ನ್ ಮಸೂದ್, ಅಬೂ ಅಲ್–ದರ್ದಾ, ಅಬೂ ಮಸೂದ್ ಅಲ್–ಅನ್ಸಾರೀ ಮತ್ತು ಅಬೂ ತರ್‌ಅಲ್–ಗಫ್ಫಾರೀ. ಒಮರ್ (ಕರೆದಿದ್ದಾನೆ) ಅಬುಹುರಾಯರಾನಿ ಅಸತ್ಯಗಳನ್ನು ನುಡಿಯುವವನು ಎಂದು ಅಂದಿದ್ದಾನೆ ಮತ್ತು ಪ್ರವಕ್ತನನ್ನು ಕುರಿತು ಅಸತ್ಯಗಳು ಹೇಳುವುದು ನಿಲ್ಲಿಸದೇ ಹೋದರೇ ತಾನು (ಅಬೂ) ಎಲ್ಲಿಂದ ಬಂದಿದ್ದಾನೋ (ಯೊಮೆನ್) ಅಲ್ಲಿಗೆ ಪುನಃ ಕಳುಹಿಸುತ್ತೇನೆಂದು ಅಬೂನಿ ಹೆದರಿಸಿದ್ದಾನೆ. ಆತನು ಒಮರ್ ಮರಣಿಸುವವರೆಗು ಸುಮ್ಮನೇ ಇದ್ದಾನೆ. ನಂತರ ಪುನಃ ಶುರು ಮಾಡಿದ್ದಾನೆ.

ಒಮರ್ ಕೂಡಾ ಹೀಗೆ ನಿವೇದಿಸಿದ್ದಾನೆ ಎಂದು ಹೇಳಲ್ಪಟ್ಟಿದೆ. ಏನೆಂದರೇ ಆತನು ಪ್ರವಕ್ತ ಮಾತನಾಡಿದ ವಚನಗಳನ್ನು ಬರೆಯಬೇಕೆಂದು ಕೋರಿದ್ದಾನೆ, ಆದರೇ ಮುಸ್ಲೀಮ್‌ರು ಖುರ್‌ಆನ್‌ನನ್ನು ಬಿಟ್ಟು ಹದೀಸುಗಳನ್ನು ಸ್ವೀಕರಿಸುತ್ತಾರೇನೋ ಎಂದು ಭಯಪಟ್ಟು ಅವುಗಳನ್ನು ಬರೆಯುವುದು ಬಿಟ್ಟಿದ್ದಾನೆ.

"ನಾನು ಸುನ್ನಹ್ ಬರೆಯಬೇಕೆಂದು ಕೋರಿಕೊಂಡರೂ, ಮತ್ತು ನಾನು ಜ್ಞಾಪಕ ತಂದುಕೊಂಡರೂ ನಿನಗಿಂತ ಮೊದಲು ಇರುವ ಪ್ರಜೆಗಳು ಕುರಿತು, ಅವರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳನ್ನು ಅನುಸರಿಸುವುದಕ್ಕೆ

ಮತ್ತು ದೇವರ ಗ್ರಂಥವನ್ನು ಬಿಡುವುದಕ್ಕೆ. ಮತ್ತು ನಾನು ಪ್ರತಿಜ್ಞೆ ಮಾಡುತ್ತಿದ್ದೇನೆ ನಾನು ಯಾವಾಗಾಗಲೀ ದೇವರ ಗ್ರಂಥವನ್ನು ಬೇರೊಂದು ಗ್ರಂಥದೊಂದಿಗೆ ಬದಲಾಯಿಸುವುದಿಲ್ಲವೆಂದು "ಜಮಿ ಅಲ್–ಬಯನ್ 1/67 ಅಲೀ ಇಬ್ನ್ ಅಬೂ ತಾಲಿಬ್, ನಾಲ್ಕನೇ ಖಲೀಫಾ ತನ್ನ ಪ್ರಸಂಗಗಳಲ್ಲಿ ಒಂದರಲ್ಲಿ ಹೀಗೆ ಹೇಳಿದ್ದಾನೆ. "ಯಾರ್ಯಾರು ಪ್ರವಕ್ತನಿಂದ ಬರಹಗಳನ್ನು ತೆಗೆದುಕೊಂಡಿದ್ದಾರೋ ಅವರೆಲ್ಲರನ್ನೂ ಅರ್ಥಿಸುತ್ತಿದ್ದೇನೆ, ನೀವು ಮನೆಗೆ ಹೋಗಿ ಅವುಗಳನ್ನು ಅಳಿಸಿಹಾಕಿ. ನಿಮಗಿಂತ ಮೊದಲು ಪ್ರಜೆಗಳು ನಾಶ ಮಾಡಲ್ಪಟ್ಟಿದ್ದಾರೆ. ಏಕೆಂದರೇ ಅವರು ಪಂಡಿತರು ಬರೆದ ಹದೀಸುಗಳನ್ನು ಅನುಸರಿಸಿ ಮತ್ತು ಅವರಿಗೆ ದೇವರು ಕೊಟ್ಟಿರುವ ಗ್ರಂಥವನ್ನು ಬಿಟ್ಟುಹಾಕಿದ್ದಾರೆ" (ಸುನನ್ ಅಲ್–ಧರಾಮಿ).

## ಖಲೀಫಾ ಒಮರ್ ಇಬ್ನ್ ಅಬ್ದುಲ್ ಆಜಿಜ್, ಅಂತ್ಯವೊಂದರ ಮೊದಲು.

ಅಬೂ ಹುರೈರಾ ಎಲ್ಲರಿಗಿಂತ ಹೆಚ್ಚಾಗಿ ಯಾರೂ ಹೇಳಲಾರದಷ್ಟು ಹದೀಸುಗಳನ್ನು ಹೇಳಿದ್ದಾನೆ. ಇನ್ನೂ ಪ್ರವಕ್ತರೊಂದಿಗೆ ಸೇರಿ ಅವರು ಜೀವಿತಾಂತ ಜೀವಿಸಿದ ಅಬೂ ಬಾಕರ್, ಒಮರ್ ಅಲೀ ಮತ್ತು ಆಯಿಷಾ ಅವರಿಗಿಂತ ಕೂಡಾ ಹೆಚ್ಚು ಹದೀಸುಗಳು ಹೇಳಿದ್ದಾನೆ. ಕೇವಲ ಎರಡು ವರ್ಷಗಳಿಗಿಂತ ಕಡಿಮೆ ಸಮಯ ಪ್ರವಕ್ತರೊಂದಿಗೆ ಬೆರೆತಿರುವ ಸಮಯದಲ್ಲಿ ಆತನು ಪ್ರವಕ್ತ ಅನುಚರರು ಎಲ್ಲರೂ ಬರೆದ ಹದೀಸುಗಳಿಗಿಂತ ಹೆಚ್ಚು ಹದೀಸುಗಳು ಬರೆದಿದ್ದಾನೆ. ಆತನು ಒಟ್ಟಾರೆ 5374 ಹದೀಸುಗಳನ್ನು ಹೇಳಿದ್ದಾನೆ. ಇಬ್ನ್ ಹಂಬಲ್ ಒಟ್ಟಾರೆ 3848 ಹದೀಸುಗಳನ್ನು ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಪ್ರವಕ್ತ ಮರಣಿಸಿದ ನಂತರ ಮುಸ್ಲೀಮ್ ದೇಶವನ್ನು ಪಾಲಿಸಿದ ನಡೆಸಲ್ಪಟ್ಟ ಖೈಫಾಗಳು ಖುರ್‌ಆನ್ ಹೊರತು ಬೇರೇ ಯಾವುದೂ ಬರೆಯಬಾರದು ಎನ್ನುವ ಪ್ರವಕ್ತರ ಕೋರಿಕೆಯನ್ನು ಗೌರವಿಸಿ ಮತ್ತು, ಹದೀಸುಗಳು ಮತ್ತು ಸುನ್ನಾಹ್ ಬರೆಯುವ ಎಂತಹ ಪ್ರಯತ್ನ ಆದರೂ ತಪ್ಪು ಎಂದು ಹೇಳಿದ್ದಾರೆ. (ಖಂಡಿಸಿದ್ದಾರೆ/ನಿಷೇಧಿಸಿದ್ದಾರೆ.)

ಅವರು ಸೂಚಿಸಿದ ಪದ್ಧತಿಯನ್ನು ಪ್ರವಕ್ತ ಮರಣಿಸಿದ ಎರಡು ನೂರು ವರ್ಷಗಳವರೆಗು ಆಚರಿಸಿದ್ದಾರೆ. ಆ ಸಮಯಕ್ಕೇ, ಪ್ರವಕ್ತರನ್ನು ಕುರಿತು ಅಸತ್ಯಗಳು ವ್ಯಾಪ್ತಿ ಹೊಂದಿವೆ ಮತ್ತು ಪ್ರಜೆಗಳು ಹದೀಸುಗಳಿಗಾಗಿ ಖುರ್‌ಆನ್‌ನನ್ನು ಬಿಟ್ಟುಹಾಕಿದ್ದಾರೆ. ಅಂತಹ ಆ ಸಮಯದಲ್ಲಿ ಖಲೀಫಾ ಇಬ್ನ್ ಅಬ್ದೇಲ್–ಆಜಿಜ್, ಹದೀಸುಗಳು ಮತ್ತು ಸುನ್ನಾಹ್ ಬರೆಯುವುದಕ್ಕೆ ಅನುಮತಿ ಆದೇಶವನ್ನು ಕೊಟ್ಟಿದ್ದಾರೆ, ಏಕೆಂದರೇ ಅದರಿಂದ ಕೇವಲ ವಾಸ್ತವ ಹದೀಸುಗಳು ಮಾತ್ರವೇ ರಿಕಾರ್ಡು ಮಾಡಲಾಗುತ್ತವೆ ಮತ್ತು ಅವು ಅಸತ್ಯಗಳಿಗೆ ಮುಗಿಸುವಂತೆ ಮಾಡುತ್ತವೆ ಎಂದು ಆಲೋಚಿಸಿ ಖಲೀಫಾ ಆ ನಿರ್ಣಯ ತೆಗೆದುಕೊಂಡಿದ್ದಾರೆ. ಆತನ ಪಾಲನೆಯಲ್ಲಿ, ಆತನು ಖುರ್‌ಆನ್‌ನಲ್ಲಿನ ದೇವರ ಧರ್ಮಗಳನ್ನು ಮತ್ತು ಪ್ರವಕ್ತ ನಿಯಮಗಳನ್ನು ಇನ್ನೂ ಆತನಿಗಿಂತ ಮೊದಲು ಪ್ರಜೆಗಳ ಉದಾಹರಣೆ ಗಳನ್ನು ಮತ್ತು ಆತನ ಕಾಲದಲ್ಲಿನ ಎಷ್ಟೋ ಮಂದಿ ಪಂಡಿತರ ಅಭ್ಯಂತರಗಳನ್ನು ನಿರಾಕರಿಸಿದ್ದಾನೆ. ಅಂದಿನಿಂದ ದೇವರ ಮತ ಆದ ಖುರ್‌ಆನ್‌ನಿಂದ, ಇಸ್ಲಾಮ್ ಹದೀಸುಗಳು ಸುನ್ನಾಹ್‌ಗಳ ಮೇಲಕ್ಕೆ ಹೋಗಿದೆ, ಯಾವನ್ನು (ಹದೀಸುಗಳನ್ನು, ಸುನ್ನಾಹ್‌ಗಳನ್ನು) ದೇವರು ಆತನ ಪ್ರವಕ್ತ ವಾಸ್ತವಕ್ಕೆ ನಿಷೇಧಿಸಿದ್ದಾರೋ, ಅವುಗಳ ಮೇಲಕ್ಕೇ ಇಸ್ಲಾಮ್ ಮತ ಹೋಗಿದೆ.

## ಹದೀಸುಗಳ ಮೊದಲ ಬರಹಗಳು :–

ಚರಿತ್ರೆ ಪ್ರಕಾರ ಹದೀಸುಗಳು ಪ್ರವಕ್ತ ಇರುವ ಕಾಲದಲ್ಲಿಯೇ ಬರೆದಿದ್ದಾರೆ ಎನ್ನುವುದು ವಾಸ್ತವ, ಆದರೇ ಪ್ರವಕ್ತ ಮತ್ತು ಆತನ ನಂತರ ಪಾಲಿಸಿದವರು ಈ ಬರಹಗಳನ್ನು (ಹದೀಸುಗಳನ್ನು) ಖಂಡಿಸಿದ್ದಾರೆ, ನಾಶನ ಮಾಡಿದ್ದಾರೆ. ಮತ್ತು ಹದೀಸುಗಳನ್ನು ಬರೆದವರನ್ನು ಅವಮಾನಕರವಾಗಿ ನೋಡಿದ್ದಾರೆ. ಹದೀಸು ಗ್ರಂಥಗಳು ಹೀಗೆ ಹೇಳಿವೆ, ಮಹ್ಮದ್ ಪ್ರವಕ್ತ, ಶೇಖರಿಸಲ್ಪಟ್ಟ ಎಲ್ಲ ಹದೀಸುಗಳನ್ನು ಸುಟ್ಟು ಹಾಕಿದ್ದಾನೆ. ಮತ್ತು "ಖುರ್‌ಆನ್ ವೊಂದಿಗೆ ಇನ್ನೊಂದು ಗ್ರಂಥ ತಯಾರು ಮಾಡಿರುವುದಕ್ಕೆ" ಅವರ ಕಡೆ ಕೋಪೋದ್ರಿಕ್ತನಾಗಿದ್ದಾನೆ. ಅಬೂ ಬಾಕರ್ ಮತ್ತು ಇಬ್ನ್ ಅಲ್–ಖತ್ತಾಬ್ ಸಹ ಸೇಕರಿಸಿದ ಹದೀಸು ಗಳೆಲ್ಲವನ್ನೂ (ಕಲೆಕ್ಷನ್ಸ್) ಸುಟ್ಟು ಹಾಕಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ.

ಈ ಹದೀಸುಗಳ ನಿಷೇಧ ಹಾಗೆಯೇ ಮುಂದುವರೆದಿದೆ ಒಮರ್ ಅಬ್ದೇಲ್–ಆಜಿಜ್ ಹದೀಸುಗಳು ಬರೆಯುವುದಕ್ಕೆ ಅನುಮತಿ ಕೊಡುವವರೆಗು, ಆಗ ಬಹಳ ಗ್ರಂಥಗಳು ಮತ್ತು (ಕರಾರೀಸ್) ಹದೀಸುಗಳು ಹೊಂದಿರುವವು ಬಂದಿವೆ, ಉದಾಹರಣೆಗೆ ಇಬ್ನ್ ಗ್ರೀಗ್, ಮಾಲಿಕ್ ಇಬ್ನ್ ಅನಾಸ್, ಮಹಮ್ಮದ್ ಇಬ್ನ್ ಇಷಾಕ್. ಇವುಗಳೆಲ್ಲವುಗಳಲ್ಲಿ ಅತ್ಯಂತ ಪ್ರಖ್ಯಾತವಾದುದು ಮಾಲಿಕ್ ಇಬ್ನ್ ಅನಾಸ್‌ವೊಂದರ ಗ್ರಂಥ (ಅಲ್–ಮುವಾತ್ತಾ) ಅದು ಸುಮಾರು 500 ಹದೀಸುಗಳನ್ನು ಹೊಂದಿದೆ. ಎರಡನೆ ಶತಾಬ್ದದ ಕೊನೆಯಲ್ಲಿ ಮಾಸಾನಿದ್ ಎನ್ನುವ ಗ್ರಂಥಗಳು ಬಂದಿವೆ. ಉದಾಹರಣೆಗೆ ಅಹ್ಮದ್ ಇಬ್ನ್ ಹಂಬಲ್ ವೊಂದರ ಮಸ್ನಾದ್ ಗ್ರಂಥ ಇದು 40,000 ಹದೀಸುಗಳನ್ನು ಹೊಂದಿದೆ. ಮೂರನೆ ಶತಾಬ್ದ ಮೊದಲ 50 ವರ್ಷಗಳಲ್ಲಿ ಪ್ರಖ್ಯಾತ ಆರು ಹದೀಸು ಗ್ರಂಥಗಳು ತಯಾರಾಗಿವೆ ಮತ್ತು ಇವುಗಳನ್ನು ಇಂದಿನ ಎಷ್ಟೋ ಮಂದಿ ಪಂಡಿತರು ಉಪಯೋಗಿಸುತ್ತಿದ್ದಾರೆ. 1) ಷಾಹೀ ಬುಖಾರೀ, 2) ಷಾಹೀ ಮೊಸ್ಲೇಮ್, 3) ಸುನನ್ ಅಬೂ ದಾವುದ್, 4) ಸುನನ್ ಅಲ್–ಟೆರ್ಮಿತೇ, 5) ಸುನನ್ ಅಲ್–ನೇಸೆಯ್, 6) ಸುನನ್ ಇಬ್ನ್ ಮಗೆಹ್.

ಈ ಗ್ರಂಥಗಳಲ್ಲಿ ಒಂದು ಹೊಸ ಮತ ಬರೆಯಲಾಗಿದೆ ಅದು ಖುರ್‌ಆನ್ ಮೇಲೆ ಅಧಿಪತ್ಯ ವಹಿಸಿದೆ. ಅದು ಪ್ರಕಟಿಸಿದ ವಿಷಯಕ್ಕೆ ವಿರುದ್ಧವಾಗಿ (ಅಂದರೇ ಅವು ತಮಗೆ ತಾವು ಖುರ್‌ಆನ್‌ಗಿಂತ ಕಡಿಮೆ ಎಂದು ಹೇಳಿರುವುದಕ್ಕೆ) ಈ ಗ್ರಂಥಗಳು ಬರೆಯುವುದರಲ್ಲಿ ರಚನಕಾರರು, ಹದೀಸುಗಳು ಖುರ್‌ಆನ್‌ಗೆ ವಿರುದ್ಧವಾಗಿ ಇದ್ದರೂ ಅಥವಾ ಇತರ ಹದೀಸುಗಳಿಗೆ ವಿರುದ್ಧವಾಗಿ ಇದ್ದರೂ ಅಥವಾ ಸಾಧಾರಣ ವಿಚಕ್ಷಣೆ ಇಲ್ಲದಿದ್ದರೂ ಅವುಗಳನ್ನು ಹಿಡಿಸಿಕೊಳ್ಳಲಿಲ್ಲ. ವಾಸ್ತವಕ್ಕೆ ಅವು 6–112, 113ನಲ್ಲಿ ಹೇಳಿದ ದೇವರ ಪ್ರತಿಜ್ಞೆಯನ್ನು ಈಡೇರಿಸಿವೆ.

(6–112, 113) ಅದೇ ವಿಧವಾಗಿ ನಾವು ಪೈಶಾಚಿಕ ಸ್ವಭಾವವಿರುವ ಮಾನವರನ್ನು, ಜಿನ್ನರನ್ನು, ಪ್ರತಿ ದೈವ ಪ್ರವಕ್ತರಿಗೂ ಶತ್ರುಗಳಾಗಿ ನೋಡಿದ್ದೇವೆ.

ಅವರು ಆತ್ಮ ವಂಚನೆಯಿಂದ ಪರಸ್ಪರ ಮನೋಹರವಾದ ಮಾತುಗಳು ಹೇಳಿಕೊಳ್ಳುತ್ತಾರೆ. ಹಾಗೆ ಮಾಡಬಾರದೆಂದು ಮೊದಲೇ ನಿನ್ನ ಪ್ರಭು ನಿರ್ಣಯಿಸಿದ್ದರೇ ಅವರು ಹಾಗೆ ಎಂದಿಗೂ ಮಾಡುವುದಿಲ್ಲ. ಆದ್ದರಿಂದ ಅವರು ಹಾಗೇ ಸಿಹಿಯಾದ ಮಾತುಗಳೊಂದಿಗೆ (ಹದೀಸುಗಳೊಂದಿಗೆ) ಒಬ್ಬರನ್ನೊಬ್ಬರು ಮೋಸ ಮಾಡಿಕೊಳ್ಳುವ ಹಾಗೆ ಅವರಷ್ಟಕ್ಕೆ ಅವರನ್ನು ಬಿಟ್ಟು ಬಿಡಿ. ಪರಲೋಕವನ್ನು ವಿಶ್ವಾಸಿಸಿದವರ ಹೃದಯಗಳು ಸಹಜವಾಗಿಯೇ ಸಿಹಿಯಾದ ಮಾತುಗಳ ಕಡೆ ಸೆಳೆಯುತ್ತವೆ. ಆ ಮಾತುಗಳೆಂದರೇನೆ ಅವರಿಗೆ ಇಷ್ಟ. (ಯಥಾರ್ಥ ಅವರಿಗೆ ಈಗ ಕಹಿಯಾಗಿಯೇ ಇರುತ್ತದೆ.) ಆದ್ದರಿಂದ ಅವರು (ಯಥಾರ್ಥ ತಿಳಿದರೂ) ಹಿಂದೆ ಮಾಡುತ್ತಾ ಬಂದಿರುವ (ದುಷ್ಟ) ಕಾರ್ಯಗಳೇ ಈಗಲೂ ಸಹ ಮಾಡುತ್ತಿದ್ದಾರೆ.

## ಎಷ್ಟು ಹದೀಸುಗಳು :–

ಶೇಖರಿಸಿದ ಹದೀಸುಗಳು ಮತ್ತು ಪ್ರವಕ್ತ ಮುಹಮ್ಮದ್‌ಗೆ ಸಂಬಂಧಪಟ್ಟಿರುವವು ನೂರಾರು ಸಾವಿರಾರು, ಸುಮಾರು 7,00,000. ಇವುಗಳಲ್ಲಿ ಬಹಳ ಮಟ್ಟಿಗೆ ಬಹಳ ಅಸತ್ಯಗಳು ಮತ್ತು ಕಲ್ಪಿತಗಳು ಮತ್ತು ಯಾವ ಮುಸ್ಲೀಮ್ ಪಂಡಿತರು ಹದೀಸುಗಳು ಯಾವುವು ಸತ್ಯ, ಯಾವುವು ಸತ್ಯವಲ್ಲವೋ ಹೇಳುವವರಿಂದ ನಿರಾಕರಿಸಲ್ಪಟ್ಟಿವೆ. ಈಗ ನಾವು ಕೆಲವು ಮಂದಿ ಪ್ರಖ್ಯಾತ ಹದೀಸು ಶೇಖರಣಕರ್ತರು ಮತ್ತು ಅವರು ಶೇಖರಿಸಿರುವವು ನೋಡೋಣ.

1) ಮಾಲಿಕ್ ಇಬ್ನ್ ಅನಾಸ್ ಸುಮಾರು 500 ಹದೀಸುಗಳನ್ನು ತನ್ನ ಪ್ರಖ್ಯಾತ ಗ್ರಂಥ "ಅಲ್–ಮುವಾತ್ತಾ"ರಲ್ಲಿ ಶೇಖರಿಸಿದ್ದಾನೆ.

2) ಅಹ್ಮದ್ ಇಬ್ನ್ ಹಂಬಲ್ ಸುಮಾರು 40,000 ಹದೀಸುಗಳನ್ನು ತನ್ನ ಪ್ರಖ್ಯಾತ ಗ್ರಂಥ "ಮುಸ್ನಾದ್"ನಲ್ಲಿ ಶೇಖರಿಸಿದ್ದಾನೆ. ಆತನು ಆ 40,000 ಹದೀಸುಗಳೆಂದು 7,00,000 ಹದೀಸುಗಳಿಂದ ಆಯ್ಕೆ ಮಾಡಿಕೊಂಡಿದ್ದಾರೆ.

ಅಂದರೇ ಇನ್ನೊಂದು ವಿಧವಾಗಿ ಹೇಳಬೇಕೆಂದರೇ, ಆತನು 6,60,000 ಹದೀಸುಗಳು ಅಸತ್ಯಗಳೆಂದು ನಿರೂಪಿಸಲ್ಪಟ್ಟಿವೆ ಅಥವಾ ಕಲ್ಪಿತಗಳು ಮತ್ತು ಅವು ಧೃಡೀಕರಿಸಿರುವವು ಅಲ್ಲದೆ ಹೋಗಬಹುದು. ಅಂದರೇ ಸುಮಾರು 94% ಅಸತ್ಯಗಳು ಮತ್ತು ಕಲ್ಪಿತಗಳು.

3) ಬುಖಾರಿ ಸುಮಾರು 6,00,000 ಹದೀಸುಗಳು ಶೇಖರಿಸಿದ್ದಾನೆ ಆದರೇ 7275 ಹದೀಸುಗಳನ್ನು ಮಾತ್ರವೇ ಸ್ವೀಕರಿಸಿದ್ದಾನೆ ಮತ್ತು 5,92,725 ಹದೀಸುಗಳನ್ನು ನಿರೂಪಿತ ಆಗದಿರುವವು, ಅಸತ್ಯಗಳು ಕಟ್ಟು ಕಥೆಗಳು ಎಂದು ನಿರ್ಧಾರಿಸಿಕೊಂಡಿದ್ದಾರೆ. ಅಂದರೇ ಅವು ಸುಮಾರು 99% ತಾನು ಶೇಖರಿಸಿರುವವುಗಳಲ್ಲಿ ಇವೆ.

4) ಮೊಸ್ಲೇಮ್ 3,00,000 ಹದೀಸುಗಳನ್ನು ಶೇಖರಿಸಿದ್ದಾನೆ ಆದರೇ 4,000 ಮಾತ್ರವೇ ಸ್ವೀಕರಿಸಿದ್ದಾನೆ. 2,96,000 ಹದೀಸುಗಳನ್ನು ನಿರಾಕರಿಸಿದ್ದಾನೆ. ಅಂದರೇ ಸುಮಾರು 99% ತಾನು ಶೇಖರಿಸಿದ ಹದೀಸುಗಳು. (ಇದನ್ನನುಸರಿಸಿ ಹದೀಸುಗಳಲ್ಲಿ ಎಷ್ಟು ಅಸತ್ಯಗಳು ಇವೆಯೋ ಅರ್ಥವಾಗುತ್ತದೆ.)

ಈ ವಿಷಯಗಳು ನಮಗೆ ಒಂದು ಅವಗಾಹನೆ ಕೊಡುತ್ತವೆ. ಏನೆಂದರೇ ಹಿಂದೆ ದ್ವಾರದಿಂದ ಇಸ್ಲಾಮ್ ಮತದೊಳಗೆ ಎಷ್ಟು ಕಲುಷಿತ ಸೇರಿದೆಯೋ ಮತ್ತು ಸೇರುವುದಕ್ಕೆ ಪ್ರಯತ್ನ ಮಾಡಿದೆಯೋ ಈಗ ನಾವು ಅರ್ಥ ಮಾಡಿಕೊಳ್ಳಬೇಕು ದೇವರು ಏಕೆ ಒಂದೇ ಒಂದು ಹದೀಸು ಎಂದು ನಿರ್ಧಾರಿಸಲ್ಪಟ್ಟ ತನ್ನ ಗ್ರಂಥವನ್ನು ಕಾಪಾಡುತ್ತೇನೆಂದು, ಸಂರಕ್ಷಿಸುತ್ತೇನೆಂದು ಪ್ರತಿಜ್ಞೆ ಮಾಡಿದ್ದಾನೋ, ಆ ಗ್ರಂಥವೇ ಸ್ವೀಕರಿಸಬೇಕಾದ ಹದೀಸು ಮತ್ತು ಉತ್ತಮವಾದ ಹದೀಸು. ಅದೇ ಖುರ್‌ಆನ್ ಗ್ರಂಥ.

## ದೇವರನ್ನು ಅವಮಾನಪಡಿಸುವ ಹದೀಸುಗಳು :–

ಕೆಳಗೆ ಕೆಲವು ಹದೀಸು ಉದಾಹರಣೆಗಳು ಕೊಡಲಾಗಿವೆ. ಯಾವುವು ದೇವರನ್ನು ಅವಮಾನಪಡಿಸುತ್ತಿವೆಯೋ ನೋಡಿರಿ.

ದೇವರು ತನ್ನ ಕುರಿತು ಖುರ್‌ಆನ್‌ನಲ್ಲಿ ಹೇಳಿದ ಮಾತುಗಳು ನಾವು ನೆನಪಿಗೆ ತಂದುಕೊಳ್ಳುವುದಕ್ಕೆ ನಮಗೆ ಉಪಯೋಗಕರವಾಗುತ್ತವೆ.

(6–113) ಯಾರ ದೃಷ್ಟಿಯೂ ಆತನನ್ನು ಸೇರುವುದಿಲ್ಲ. ಆತನು ಮಾತ್ರ ಎಲ್ಲರ ನೋಟವನ್ನು ನೋಡಬಲ್ಲನು. ಆತನು ಎಷ್ಟೋ ಸೂಕ್ಷ್ಮ ದೃಷ್ಟಿ ಇರುವವನು, ಪ್ರತಿವೊಂದನ್ನು ತಿಳಿದುಕೊಳ್ಳುವವನು.

(42–11) ವಿಶ್ವ ವ್ಯವಸ್ಥೆಯಲ್ಲಿ ಆತನನ್ನು ಹೋಲಿರುವುದು ಯಾವುದೂ ಇಲ್ಲ.

ಮೋಸೇ ದೇವರನ್ನು ನೋಡಬೇಕೆಂದು ಕೇಳಿದಾಗ (7–143) ದೇವರು ತನ್ನನ್ನು ಮೋಸೇ ನೋಡಲಾರನು ಎಂದು ಮೋಸೇಗೆ ಹೇಳಿದ್ದಾನೆ.

ಈಗ ನಾವು ಬುಖಾರಿ ಮತ್ತು ಮೊಸ್ಲೇಮ್ ದೇವರನ್ನು ಕುರಿತು ವರ್ಣಿಸುತ್ತಾ ತಮ್ಮ ಗ್ರಂಥಗಳಲ್ಲಿ ಹೇಳಿದ ಕಟ್ಟುಕಥೆಗಳು ಎಲ್ಲವು ಅವು ಪ್ರವಕ್ತವೊಂದರ ಮಾತುಗಳು ಎಂದು ಹೇಳಿರುವವು (ಹೇಳಿದ್ದಾರೆ).

1) ದೇವರು ತನ್ನ ವಿಶ್ವಾಸರಿಗೆ ಕಾಣಿಸುತ್ತಾನೆ, ಅವರು ತುಂಬಿದ ಚಂದ್ರನನ್ನು ನೋಡಿದಂತೆ ನೋಡುತ್ತಾರೆ **(ಬುಖಾರಿ ಭಾಗ 9, ಬುಕ್ 93, ನಂಬರ್ 529). (ದೇವರು ಕಾಣಿಸುವುದಿಲ್ಲ ಎಂದು ಖುರ್‌ಆನ್ ಹೇಳಿದೆ.)**

2) ದೇವರು ತನ್ನ ಪಾದವನ್ನು ನರಕಾಗ್ನಿ ಮೇಲೆ ಇಟ್ಟಿದ್ದಾನೆ. ಅದರೊಂದಿಗೆ ಅದು ತುಂಬಿಕೊಳ್ಳುತ್ತದೆ ಎಂದು **(ಬುಖಾರಿ ಭಾಗ 8, ಬುಕ್ 78, ನಂಬರ್ 654).** (ಖುರ್‌ಆನ್ ಪ್ರಕಾರ ಪೂರ್ತಿ ಅಸತ್ಯ)

3) ದೇವರು ಮನುಷ್ಯನಹಾಗೆ ನಗುತ್ತಾನೆ! **(ಮೊಸ್ಲೇಮ್ ಬುಕ್ 1, ನಂಬರ್ 349). (ದೇವರು ಮನುಷ್ಯರ ಹಾಗೆ ಇಲ್ಲ)**

## ಅಬೂ ಹುರೈರಾ ಮತ್ತು ಎಷ್ಟೋ ಅಸತ್ಯಗಳು :–

ಅಬೂ ಹುರೈರಾ ಯೆಮೆನ್ ದೇಶದಿಂದ ಹಿಜ್ರಾ ಏಳನೆ ಶತಾಬ್ದದಲ್ಲಿ ಬಂದಿದ್ದಾನೆ ಮತ್ತು ಇಸ್ಲಾಮ್ ಮತದೊಳಕ್ಕೆ ಬದಲಾಗಿದ್ದಾನೆ. ಸುಮಾರು ಎರಡು ವರ್ಷಗಳು ಪ್ರವಕ್ತ ಮುಹಮ್ಮದ್ ಸಾನ್ನಿಧ್ಯದಲ್ಲಿ ಇದ್ದಾನೆ. ಆತನು 5000 ಕ್ಕಿಂತ ಹೆಚ್ಚು ಹದೀಸುಗಳು ಹೇಳಿದ್ದಾನೆ. 5374 ಖಚಿತವಾಗಿ ಅಂದರೆ ಎಲ್ಲ ಕೇವಲ ಎರಡು ವರ್ಷಗಳಿಗಿಂತ ಕಡಿಮೆ ಪ್ರವಕ್ತರೊಂದಿಗೆ ಬೆರೆತಿರುವ ಕಾಲದಲ್ಲಿ (ಆಯಿಷಾ,  ಅಬೂ ಬೇಕರ್ ಮತ್ತು ಒಮರ್ ಹೇಳಿದ ಕಡಿಮೆ ಹದೀಸುಗಳೊಂದಿಗೆ ಹೋಲಿಸಿದಾಗ) ಆತನು ಹೇಳಿದ ಹದೀಸುಗಳು ಬಹಳ ಮಟ್ಟಿಗೆ "ಆಹದ್" ಹದೀಸುಗಳು ಎಂದು ಕರೆಯಲ್ಪಡುತ್ತಿದ್ದವು ಅಂದರೆ! ಕೇವಲ ಒಬ್ಬನೇ ವ್ಯಕ್ತಿ ಸಾಕ್ಷಿಯಾಗಿ ಇರುವ ಹದೀಸುಗಳು, ಆ ಒಬ್ಬ ವ್ಯಕ್ತಿ ಅಬೂ ಹುರೈರಾ ಮಾತ್ರವೇ. ಪ್ರವಕ್ತವೊಂದರ ಕೆಲವು ಮಂದಿ ಸನ್ನಿಹಿತರು ಮತ್ತು ಪ್ರವಕ್ತರ ಹೆಂಡತಿ ಆಯಿಷಾ ಆತನನ್ನು (ಅಬೂ ಹುರೈರಾ) ಅಸತ್ಯಗಳನ್ನು ನುಡಿಯುವವನೆಂದು ಆರೋಪಿಸಿದ್ದಾರೆ. ಆತನು ಹದೀಸುಗಳಿಗೆ ಹಿರಿಮೆಯನ್ನು ಕೈಗೂಡಿಸುವುದಕ್ಕೆ ಒಂದು ಹುದ್ದೆ ಹೊಂದುವುದಕ್ಕೆ ಪ್ರವಕ್ತರನ್ನು ಕುರಿತು ಅಸತ್ಯಗಳನ್ನು ಹೇಳುತ್ತಿದ್ದನು ಎಂದು. ನಡೆಸಲ್ಪಟ್ಟ ಎರಡನೆ ಖಲೀಫಾ ಒಮರ್ ಇಬ್ನ್ ಅಲ್–ಖತ್ತಾಬ್, ಅಬೂ ಹುರೈರಾ ಪ್ರವಕ್ತರನ್ನು ಕುರಿತು ಅಸತ್ಯಗಳನ್ನು ಹೇಳುವುದು ನಿಲ್ಲಿಸದಂತೆ ಹೋದರೇ ದೇಶದಿಂದ ಕಳುಹಿಸುತ್ತೇನೆಂದು ಅಬೂ ಹುರೈರಾನನ್ನು ಒಮರ್ ಇಬ್ನ್ ಅಲ್–ಖತ್ತಾಬ್ ಹೆದರಿಸಿದ್ದಾನೆ, ಒಮರ್ ಸಾಯಿಸಲ್ಪಡುವವರೆಗೂ ಆತನು ಸುಮ್ಮನೇ ಇದ್ದು ಪುನಃ ಶುರು ಮಾಡಿದ್ದಾನೆ. ಆತನು ಮುಸ್ಲೀಮ್‌ರ ಖಲೀಫಾನನ್ನು ಆನಂದಿಸುವಂತೆ ಮಾಡುವುದಕ್ಕಾಗಿ ಹದೀಸುಗಳೆಂದು ಹೇಳುವುದು ಹಾಗೇ ಮುಂದುವರಿಸಿದ್ದಾನೆ. ಆತನು ಸಿರಿಯಾದಲ್ಲಿ ಮುಆವಿಯಾ ವೊಂದರ ರಾಜ ಭವನದಲ್ಲಿ ಜೀವಿಸಿದ ಕಾಲದಲ್ಲಿ ಕೂಡ ಹದೀಸುಗಳು ಹೇಳಿದ್ದಾನೆ. ಅಬೂ ಹುರೈರಾ ತನ್ನ ಪ್ರೇಕ್ಷಕರಿಗೆ ಹದೀಸುಗಳನ್ನು ಹೇಳುತ್ತಾ ಹೀಗೆ ಹೇಳಿದ್ದಾನೆ ತಾನು ಯಾವಾಗಾದರೂ ಒಮರ್ ಜೀವಿಸಿರುವಾಗ ಹದೀಸುಗಳು ಹೇಳಿದ್ದರೇ ತನಗೆ ಒಮರ್ (ಕೊರಡಾ) ಹೊಡತೆಗಳು ಕೊಡುತ್ತಿದ್ದನು ಎಂದು.

ಅಬೂ ಜಾಫರ್ ಅಲ್ ಇಸ್ಕಫಿ ಹೀಗೆ ಹೇಳಿದ್ದಾನೆ. ಏನೆಂದರೇ ಖಲೀಫಾ ಮತ್ತು, ಮುಆವಿಯಾಹ್ ಕೆಲವು ಮಂದಿ ಪ್ರಜೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಬೂ ಹುರೈರಾನನ್ನು ಕೂಡಾ ಕಟ್ಟು ಕಥೆಗಳು ಹೇಳುವುದಕ್ಕೆ ಆತನನ್ನು ಕಡಿಮೆ ಮಾಡುವುದಕ್ಕೆ, ಅಲೀ ಇಬ್ನ್ ಅಬೂ ತಾಲಿಬ್ ಪ್ರವಕ್ತವೊಂದರ ಬಂಧು (ಕಜಿನ್) ಮುಆವಿಯಾ ವೊಂದರ ರಾಜ ಭವನದಲ್ಲಿ ಅಬೂ ಹುರೈರಾ ಜೀವಿಸಿದ್ದಾನೆ ಮತ್ತು ಮುಆವಿಯಾಗೆ ರಾಜಕೀಯದಲ್ಲಿ ಸಹ ಸೇವೆಗಳನ್ನು ಮಾಡಿದ್ದಾನೆ. ಆತನು ಅಲೀ ಇಬ್ನ್ ಅಬೂ ತಾಲಿಬ್‌ನ್ನು ಹೀಯಾಳಿಸುವಂತೆ, ಅವಮಾನಪಡಿಸುವ ಕೆಲವು ಹದೀಸುಗಳನ್ನು ತಯಾರು ಮಾಡಿದ್ದಾನೆ. ಇನ್ನೂ ಅಬೂ ಬಾಕರ್, ಒಮರ್ ಮತ್ತು ಉತ್ಮನ್‌ಗಿಂತ ಕಡಿಮೆಯವನು ಅಲೀ ಇಬ್ನ್ ಅಬೂ ತಾಲಿಬ್ ಎಂದು ತೋರಿಸುವುದಕ್ಕೆ, ಇದು ಕೇವಲ ಮುಆವಿಯಾನಿ ಸಂತೋಷಪಡಿಸುವುದಕ್ಕೋಸ್ಕರ ಹಾಗೆ ಮಾಡಿದ್ದಾನೆ. ಮುಆವಿಯಾಹ್ ಪರಿಪಾಲನೆ ಕಾಲದಲ್ಲಿ, ಇಮಾಂ ಅಥವಾ ಖಲೀಫಾ ಮಾತುಗಳನ್ನು ದೇವರ ಮಾತುಗಳ ಹಾಗೆ ಪಾಲಿಸುವುದಕ್ಕೆ ಎಷ್ಟೋ ಹದೀಸುಗಳು ಅಬೂ ಹುರೈರಾಯಿಂದ ತಯಾರಿಸಲ್ಪಟ್ಟಿವೆ. ಅವು ಖುರ್‌ಆನ್ ನಿಯಮಕ್ಕೆ (ರೂಲ್‌ಗೆ) ವಿರುದ್ಧವಾಗಿ ಇವೆ. ಖುರ್‌ಆನ್ ನಿಯಮ ಎಲ್ಲ ವಿಷಯಗಳು ಪ್ರಜಾಸ್ವಾಮ್ಯ ಬದ್ಧವಾಗಿ ಇರಬೇಕು ಎಂದು ಹೇಳುತ್ತಿದ್ದನು. (ಅಬೂ ಹುರೈರಾ ಆ ಸಮಯದಲ್ಲಿ ಖಲೀಫಾ ವೊಂದರ ರಾಜಭವನದಲ್ಲಿ ನಿವಾಸಿಸುತ್ತಿದ್ದಾನೆಂದು ಮರೆತು ಹೋಗಬಾರದು.)

ಅಬೂ ಹುರೈರಾ ಹೇಳಿದ ಎಷ್ಟೋ ಹದೀಸುಗಳು ಇತರ ಹದೀಸು ಗಳೊಂದಿಗೆ ವಿಭೇದಿಸುತ್ತವೆ. ತಾನು ಹೇಳಿದ ಹದೀಸುಗಳೊಂದಿಗೆ ಕೂಡಾ, ಮತ್ತು ಇತರ ಪ್ರಜೆಗಳ ಹದೀಸುಗಳೊಂದಿಗೆ, ಖುರ್‌ಆನ್‌ನೊಂದಿಗೆ ಸಾಧಾರಣ ವಿಚಕ್ಷಣೆಯೊಂದಿಗೆ ಆತನ ಹದೀಸುಗಳು ವಿಭೇದಿಸುತ್ತವೆ.

ಅಬೂ ಹುರೈರಾ ಕಾಬ್ ಅಲ್ ಅಹಬರ್ ವೊಂದರ ಹದೀಸುಗಳು ಸಹ ಹೇಳಿದ್ದಾನೆ, ಕಾಬ್‌ಅಲ್ ಅಹಬರ್ ಮುಸ್ಲೀಮ್ ಆಗಿ ಬದಲಾದ ಒಬ್ಬ ಯೂದನು. ಆತನು ಯೂದರ ಕಲುಷಿತ ಗ್ರಂಥಗಳನ್ನು ಉಪಯೋಗಿಸಿ

ಖುರ್‌ಆನ್‌ನನ್ನು ವಿವರಿಸುವುದಕ್ಕೆ ಪ್ರಯತ್ನ ಮಾಡಿದ್ದಾನೆ. ಆತನು ಕೆಲವು ದಾರುಣವಾದ ಹದೀಸುಗಳನ್ನು ತಯಾರು ಮಾಡಿದ್ದಾನೆ. ಅವು ಪೂರ್ತಿಯಾಗಿ ಖುರ್‌ಆನ್‌ಗೆ ವಿರುದ್ಧವಾಗಿ ಇವೆ. ಅವು ತೋರಾದಲ್ಲಿನ ತಪ್ಪು ಕಥೆಗಳಿಂದ ತೆಗೆದುಕೊಂಡಿರುವವು.

ಇಸ್ಲಾಮ್ ಚರಿತ್ರೆ ಕಾರರು ಅಬೂ ಹುರೈರಾಗೆ ಪರಿಪಾಲನಾಧಿಕಾರವನ್ನು (governer ship) ಕೊಟ್ಟನಂತರ ಕಥೆಯನ್ನು ಹೇಳಿದ್ದಾರೆ. ಆತನು ಎರಡು ವರ್ಷಗಳಲ್ಲಿ ಬಹಳ ಧನವಂತನಾಗಿದ್ದಾನೆ. ಅದರೊಂದಿಗೆ ಒಮರ್ ಆತನನ್ನು ಕರೆದು ಹೀಗೆ ಹೇಳಿದ್ದಾನೆ. "ನೀನು, ಅಲ್ಲಾಹ್ ವೊಂದರ ಶತ್ರು, ನೀನು ಅಲ್ಲಾಹ್ ವೊಂದರ ಧನವನ್ನು ಕದ್ದಿದ್ದೀಯ. ನಾನು ನಿನ್ನನ್ನು ಬಹರೇನ್ (ದೇಶ) ವೊಂದರ ಎಮಿರ್ (ಅಧಿಕಾರಿ/ಪಾಲಕನು)ನ್ನು ಮಾಡಿದ್ದೇನೆ. ನಿನಗೆ ಒಂದು ಜೊತೆ ಷೂ (ಚೆಪ್ಪಲಿ) ಕೂಡಾ ಇಲ್ಲದಿರುವಾಗ, ನೀನು ಈ ಹಣವೆಲ್ಲವನ್ನೂ ಎಲ್ಲಿಂದ ಪಡೆದಿದ್ದೀಯ (4,00,000 ದಿರ್ಹಾಮ್)?" ಒಮರ್ 10,000 ದಿರ್ಹಾ ಮುಗಳು ಆತನಿಂದ ತೆಗೆದುಕೊಂಡಿರುವುದು ಎಂದು ಹೇಳಲಾಗಿದೆ (ಅಬೂ ಹುರೈರಾ ಕೇವಲ 20,000 ದಿರ್ಹಾಮುಗಳಿಗೆ ಮಾತ್ರವೇ ಹದೀಸುಗಳು ಬರೆಯುವುದಕ್ಕೆ ಒಪ್ಪಿಕೊಂಡಿದ್ದಾನೆ)

ಹದೀಸುಗಳನ್ನು ಕಲ್ಪಿತ ಮಾಡುವುದರಲ್ಲಿ ಹೆಚ್ಚಾಗಿ ಅಬೂ ಹುರೈರಾ ಆರೋಪಿಸಲ್ಪಟ್ಟಿದ್ದಾನೆ. ಪ್ರವಕ್ತರವರ ಚಿಕ್ಕ ಹೆಂಡತಿ ಆಯಿಷಾ ಆತನನ್ನು ನಿಂದಿಸಿದಳು. ಆತನು ಸರಿಯಲ್ಲದ ಅಥವಾ ಅಸಂಪೂರ್ಣ ಕಥೆಗಳನ್ನು ಹೇಳುವುದನ್ನು ಮತ್ತು ಪ್ರವಕ್ತ ಯಾವಾಗಲೂ ಹೇಳದ ಹದೀಸುಗಳನ್ನು ತಯಾರು ಮಾಡಿರುವುದಕ್ಕೆ ಆಯಿಷಾ ಆತನನ್ನು ನಿಂದಿಸುವುದು ನಡೆದಿದೆ. ಸ್ತ್ರೀಯರ ಮೇಲೆ ಮತ್ತು ನಾಯಿಗಳ ಮೇಲೆ ಆತನಿಗೆ ಬೇರೆ ದುರಭಿಪ್ರಾಯ ಇದೆಯೆಂದು ಆತನಿಗೆ ಹೆಸರು ಇತ್ತು. ಆತನು ಮುಸ್ಲೀಮ್ ಮಹಿಳೆಯರನ್ನು ತೀವ್ರವಾಗಿ ಅವಮಾನಿಸುವ ಕೆಲವು ಹದೀಸುಗಳನ್ನು ತಯಾರು ಮಾಡಿದ್ದಾನೆ. ಇನ್ನೂ ಕೆಲವು ಹದೀಸುಗಳು ನಾಯಿಗಳನ್ನು ಸಾಯಿಸೆಂದು ಕರೆಯನ್ನು ಕೊಡುವವುಗಳನ್ನು ಸಹ ತಯಾರು ಮಾಡಿದ್ದಾನೆ. ಸ್ತ್ರೀಯರನ್ನು ಬೆಳೆಯುವ ಹೊಲಗಳೊಂದಿಗೆ

ಹೋಲಿಸುವುದು ಯಾವ ಕಡೆಯಿಂದ ಆದರೂ ಹೆಂಡತಿಯನ್ನು ಹೊಂದ ಬಹುದೆನ್ನುವುದು ಸ್ತ್ರೀಯರನ್ನು ಹೀಯಾಳಿಸಿದಂತಲ್ಲವೆ? (ಹದೀಸು ಮಕರಂದ ಎರಡನೆ ಭಾಗ 175 ನೇ ಪುಟವನ್ನು ನೋಡಿರಿ.)

## ಆಯಿಷಾ ಮತ್ತು ಅಬೂ ಹುರೈರಾ ಬೇಧವಾಗಿ :–

ಇಬ್ನ್ ಕೂತೈಬಾ ಅಲ್–ದಿನೋರಿ ಯಿಂದ ರಚಿಸಲ್ಪಟ್ಟಿರುವ ಪ್ರಖ್ಯಾತ ಗ್ರಂಥ "ಟಾ ಔಯೀಲ್ ಮುಖ್ತಲಾಫ್ ಅಲ್ ಹಡಿತ್" ರಲ್ಲಿ, ಆಯಿಷಾ ಅಬೂ ಹುರೈರಾರೊಂದಿಗೆ ಹೇಳುತ್ತಿರುವ ಕಥೆ. "ಪ್ರವಕ್ತ ಹೇಳಿದಾಗ ನಾವು ಕೇಳದಿರುವವು ನೀವು ಪ್ರವಕ್ತ ಹದೀಸುಗಳನ್ನು ಹೇಳುತ್ತಿದ್ದೀಯ." ಆತನು ಹೀಗೆ ಹೇಳಿದ್ದಾನೆ (ಬುಖಾರಿ ನಿವೇದಿಸಿದ ಪ್ರಕಾರವಾಗಿ) "ನೀನು (ಆಯಿಷಾ) ಯಾವಾಗಲೂ ಕನ್ನಡಿಯೊಂದಿಗೆ ನಿನ್ನ ಅಲಂಕಾರದಲ್ಲಿ ಮುಗ್ಧಳಾಗಿ ಇರುತ್ತೀಯಾ." ಆಕೆ (ಆಯಿಷಾ) ಆತನಿಗೆ ಹೀಗೆ ಸಮಾಧಾನ ಕೊಟ್ಟಿದ್ದಾಳೆ "ನೀನು ಮಾತ್ರವೇ ನಿನ್ನ ಹೊಟ್ಟೆಯಿಂದಲೂ, ನಿನ್ನ ಹಸಿವಿನಿಂದಲೂ ನಿರಂತರ ವಾಗಿ ಇದ್ದೀಯ. ನಿನ್ನ ಹಸಿವೇ ನಿನ್ನನ್ನು ಬಿಜೀಯಾಗಿ ಇಟ್ಟಿದೆ, ನೀವು ಗುಂಪಾಗಿ ಹೋಗಿ ಪ್ರಜೆಗಳ ಹಿಂದೆ ಬೀಳುತ್ತಿದ್ದೀಯ, ಅವರನ್ನು ಆಹಾರ ಬೇಡಿಕೊಳ್ಳುತ್ತಿದ್ದೀಯ ಮತ್ತು ಅವರು ನಿನ್ನನ್ನು ತಪ್ಪಿಸಿಕೊಂಡು ನಿನ್ನ ಹತ್ತಿರದಿಂದ ದೂರವಾಗಿ ಹೋಗುತ್ತಿದ್ದಾರೆ ಮತ್ತು ಕೊನೆಗೆ ನೀನು ಹಿಂದಕ್ಕೆ ಬಂದು ನನ್ನ ಕೊಠಡಿಯ ಮುಂದೆಯಿಂದ ಹೋಗುತ್ತೀಯ, ಪ್ರಜೆಗಳು ನೀನು ಹುಚ್ಚನು ಎಂದು ಅಂದುಕೊಂಡು ಎಲ್ಲರೂ ನಿನ್ನನ್ನು ತುಳಿಯುತ್ತಾರೆ."

## ಬುಖಾರಿ ವೊಂದರ ಷಾಹೀ : ಕಲುಷಿತಕ್ಕೆ ಉದಾಹರಣೆ

ಬಹಳ ಮಂದಿ ಮುಸ್ಲೀಮ್‌ರು ಹದೀಸುಗಳನ್ನು ಕುರಿತು ಗೌರವದಿಂದ ಮಾತನಾಡುತ್ತಾರೆ, ಆ ಮಾತುಗಳು ಕೆಲವು ಬಾರಿ ಖುರ್‌ಆನ್‌ನೊಂದಿಗೆ ಸಮಾನವಾಗಿ ಮತ್ತು ಕೆಲವು ಬಾರಿ ಖುರ್‌ಆನ್‌ನನ್ನು ಕೂಡಾ ಮೀರಿರುತ್ತವೆ. ಖುರ್‌ಆನ್ ಮನುಷ್ಯರಿಗೆ ದೈವ ಗ್ರಂಥ. (ದೇವರು) ವಿಶ್ವಾಸಿಗಳು ಯಾವುದನ್ನು

ಮಾರ್ಗದರ್ಶಿ ಮತ್ತು ಸಂಪೂರ್ಣ ಆನಂದಕ್ಕೋಸ್ಕರ ಯಾವುದನ್ನು ನೋಡಬೇಕೋ ಅದನ್ನು ಕುರಿತು ಸಂದೇಹಕ್ಕೆ ಆಸ್ಕಾರ ಕೊಡುವುದಿಲ್ಲ. ದೇವರ ಮಾತುಗಳು ನಂಬದವರು ಸಾಧಾರಣವಾಗಿ ಹದೀಸುಗಳ ಆಶ್ರಯ ಹೊಂದುತ್ತಾರೆ. ಅವುಗಳನ್ನು ಖುರ್‌ಆನ್‌ನಲ್ಲಿ ಮಾತುಮಾತಿಗೂ ಖಂಡಿಸಿದ್ದಾರೆ. ದೇವರು ಖುರಾನ್‌ನನ್ನು "ಉತ್ತಮ ಹದೀಸು" ಎಂದು ವರ್ಣಿಸಿದ್ದಾನೆ, (39–23) "ಅಲ್ಲಾಹ್ ಅತ್ಯುತ್ತಮವಾದ ವಿಷಯವನ್ನು ಅವತರಿಸುವಂತೆ ಮಾಡಿದ್ದಾನೆ. ಅದು ಪರಸ್ಪರ ಹೋಲಿಕೆ ಹೊಂದಿರುವ, ಪದೇಪದೇ ಪುನರಾವೃತ್ತ ಆಗುತ್ತಾ ಇರುವ ಆಯತ್‌ಗಳೊಂದಿಗೆ ಕೂಡಿದ ಗ್ರಂಥ ರೂಪದಲ್ಲಿ ಇದೆ. ಅದರಿಂದ ತಮ್ಮ ಪ್ರಭುವಿಗೆ ಭಯಪಡುವವರ ಶರೀರಗಳ ಮೇಲೆ ಮಗಳು ಎದ್ದು ನಿಲ್ಲುತ್ತವೆ. ಆ ನಂತರ ಅವರ ಶರೀರಗಳು, ಹೃದಯಗಳು ಅಲ್ಲಾಹ್ ಸ್ಮರಣೆಕಡೆ ಮೆತ್ತಗಾಗುತ್ತವೆ. ಇದು ಅಲ್ಲಾಹ್ ಮಾರ್ಗದರ್ಶಕತ್ವ. ಅದರಿಂದ ಆತನು ತಾನು ಕೋರಿದವರನ್ನು ಸನ್ಮಾರ್ಗಕ್ಕೆ ತರುತ್ತಾನೆ. ಮತ್ತು ಅಲ್ಲಾಹ್ ಯಾರನ್ನು ಮಾರ್ಗದಿಂದ ತಪ್ಪಿಸುತ್ತಾನೋ ಆತನಿಗೆ ಮಾರ್ಗ ತೋರಿಸುವವನು ಯಾರೂ ಇರುವುದಿಲ್ಲ." ಮತ್ತು ನಾವು ಖುರ್‌ಆನ್ ಹೊರತು ಯಾವ ಇತರ ಹದೀಸನ್ನು ನಂಬಬಾರದು (45–6) "ಇವು ಅಲ್ಲಾಹ್ ವಾಕ್ಯಗಳು. ಇವುಗಳನ್ನು ನಾವು ನಿನಗೆ ಇರುವುದು ಇದ್ದಂತೆ ಕೇಳಿಸುತ್ತಿದ್ದೇವೆ. ಇನ್ನು ಅವರು ಅಲ್ಲಾಹ್ ಮತ್ತು ಆತನ ಸೂಚನೆಗಳ(ನ್ನು ಅಲ್ಲ ಎಂದ) ನಂತರ ಇನ್ನು ಯಾವ ವಿಷಯವನ್ನು ವಿಶ್ವಾಸಿಸುತ್ತಾರೆ?" ಮತ್ತು (7–185) "ಏನು, ಆಕಾಶಗಳ ಮತ್ತು ಭೂಮಿವೊಂದರ ವ್ಯವಸ್ಥೆಯನ್ನು, ಅಲ್ಲಾಹ್ ಸೃಷ್ಟಿಸಿದ ಇತರ ವಸ್ತುಗಳನ್ನು ಅವರು ಗಮನಿಸಲಿಲ್ಲವಾ? ಅವರ ಸಮಯ ಹತ್ತಿರ ಬಂದಿರಬಹುದೆನ್ನುವ ವಿಷಯವನ್ನು ಕುರಿತು ಸಹ ಅವರು ಆಲೋಚಿಸಲಿಲ್ಲವಾ? ಮತ್ತು ಖುರ್‌ಆನ್ ನಂತರ, ಅವರು ವಿಶ್ವಾಸಿಸುವ ಇನ್ನೊಂದು ವಸ್ತು ಏನಿರುತ್ತದೆ?"

ಬುಖಾರಿ ಎಷ್ಟೋ ಮಂದಿ ಪಂಡಿತರೊಂದಿಗೆ ಕೇವಲ ಒಬ್ಬ ಪಂಡಿತನು ಮಾತ್ರವೇ, ಪ್ರವಕ್ತ ಮತ್ತು ಆತನ ನಂತರ ಖಲೀಫರು ಎಲ್ಲರೂ ಹದೀಸುಗಳು ಬೇಡವೆಂದು ಆದೇಶಗಳನ್ನು ಕೊಟ್ಟರೂ ಸಹ ಬುಖಾರಿ ಹದೀಸುಗಳನ್ನು

ಶೇಖರಿಸಬೇಕೆಂದು ನಿರ್ಣಯಿಸಿಕೊಂಡಿದ್ದಾನೆ. ಇಂದಿನ ಕ್ರಿಸ್ಟಿಯಾನಿಟೀ ಹೆಚ್ಚಾಗಿ ಪಾಲ್ ವೊಂದರ ಕಲುಷಿತದಿಂದ ಕಟ್ಟುಕಥೆಗಳಿಂದ ಬಂದಿರುವುದಾದರೂ, ಈ ದಿನ ಆಚರಿಸಲ್ಪಡುತ್ತಿರುವ ಸಾಂಪ್ರದಾಯ ಸುನ್ನಿ ಇಸ್ಲಾಮ್ ಬುಖಾರಿ ಅಂತಹ ಪ್ರಜೆಗಳು ನಿಜವಾದ ಇಸ್ಲಾಮ್ ಮತವನ್ನು ಕಲುಷಿತ ಮಾಡುವುದರಿಂದ ತಯಾರಾಗಿ ಬಂದಿರುವ ಮತ.

ಮುಸ್ಲಿಮ್ ಪ್ರಜೆಗಳು ಹದೀಸುಗಳ ಗ್ರಂಥಗಳಿಗೋಸ್ಕರ ಖುರ್‌ಆನ್ ಗ್ರಂಥವನ್ನು ಬಿಟ್ಟ ನಂತರವೇ, ಅವರ ಮತ ನಂಬಲಾರದಷ್ಟು ಕಲುಷಿತವಾಗಿದೆ. ಇಂದಿನ ಆಚರಣೆಯಲ್ಲಿ ಇರುವ ಇಸ್ಲಾಮ್ ಕೇವಲ ಬುಖಾರಿ, ಮೊಸ್ಲೇಮ್, ನಿಸೇ ಟೆರ್ಮಿತೇ, ಅಬೂ–ದಾವುದ್ ಮತ್ತು ಇತರರ ಪ್ರತಿಬಿಂಬ ಮಾತ್ರವೇ. ಅದು ಇನ್ನು ಎಷ್ಟರಮಟ್ಟಿಗೆ ಪ್ರವಕ್ತ ಮುಹಮ್ಮದ್ ಕೊಟ್ಟಿರುವ ನಿಜವಾದ ಸಂದೇಶ ಅಲ್ಲ.

ಬುಖಾರಿ ಹದೀಸುಗಳ ನಿರ್ಧಾರಣೆಯನ್ನು ನೋಡುತ್ತೇನೆ ಎಂದ ನಿಯಮವನ್ನು ಉಲ್ಲಂಘಿಸುವುದು ಮಾತ್ರವೇ ಅಲ್ಲದೆ, ಇನ್ನೂ ಆತನ ವ್ಯಕ್ತಿಗತ ಅಭಿಪ್ರಾಯಗಳೂ, ರಾಜಕೀಯ ಕೂಟಮಿ ಮತ್ತು ಅಲೀ ಇಬ್ನ್ ಅಬೂ ತಾಲಿಬ್‌ವಂತಹ ವ್ಯಕ್ತಿಗಳ ಮೇಲೆ ದ್ವೇಷ ಆತನು ತನ್ನ ಗ್ರಂಥಗಳಲ್ಲಿ ಬರೆಯುವು ದಕ್ಕೋಸ್ಕರ ಆರಿಸಿಕೊಂಡ ಹದೀಸುಗಳ ಮೇಲೆ ಪ್ರಭಾವ ತೋರಿಸಿವೆ, ಮತ್ತು ಯಾವ ಹದೀಸುಗಳನ್ನು ನಿರಾಕರಿಸಬೇಕೋ ಸಹ ಅದರ ಮೇಲೆ ಪ್ರಭಾವ ತೋರಿಸಿವೆ. ಆತನು ಹದೀಸುಗಳಲ್ಲಿ ಏನಿದೆಯೋ ಎಂದು ಹೆಚ್ಚಾಗಿ ಹಿಡಿಸಿ ಕೊಳ್ಳಲಿಲ್ಲ. ಆತನು ಖುರ್‌ಆನ್‌ಗೆ ವಿರುದ್ಧವಾಗಿ ಇರುವ ಎಷ್ಟೋ ಹದೀಸುಗಳನ್ನು ಬರೆದಿದ್ದಾನೆ, ಇತರ ಹದೀಸುಗಳೊಂದಿಗೆ ಮತ್ತು ಸಾಧಾರಣ ವಿಚಕ್ಷಣೆಗೆ ವಿರುದ್ಧವಾಗಿ ಇವೆ, ದೇವರನ್ನು ಅವಮಾನಪಡಿಸುವಂತಹವು, ಪ್ರವಕ್ತ ಮುಹಮ್ಮದ್‌ರನ್ನು ಅವಮಾನಪಡಿಸುವವು, ಪ್ರವಕ್ತ ಹೆಂಡತಿಯರನ್ನು ಮತ್ತು ಆತನ ಕುಟುಂಬವನ್ನು ಅವಮಾನಪಡಿಸುತ್ತಿದ್ದವು. ಮುಆವಿಯಾಹ್ ಕಡೆ ಬುಖಾರಿ ವಿಧಾನ ಮತ್ತು ಅಲೀ ಇಬ್ನ್–ಅಬೂ ತಾಲಿಬ್‌ಗೆ ವಿರುದ್ಧವಾಗಿ ಸಂಬಂಧಿಸಿ ಆತನ (ಬುಖಾರಿ) ವಿಧಾನ ಕೇವಲ ಬುಖಾರಿ ವೊಂದರ ಅಕ್ರಮ

ರಾಜಕೀಯದಿಂದ ಮತ್ತು ಅಲೀಯನ್ನು ಕಡಿಮೆ ಮಾಡಿ ಆತನ ಬದ್ದ ಶತ್ರು ಮುಆವಿಯಾಹ್ ಪೂರ್ತಿ ಅಕ್ರಮಗಳ ವ್ಯಕ್ತಿ ಮತ್ತು ಚಿಕ್ಕ ಚಿಕ್ಕ ಇಸ್ಲಾಮ್ ಧರ್ಮಗಳನ್ನು ಪಾಲಿಸದವನು ಆದರೂ ಕೂಡಾ ಆತನನ್ನು (ಮುಆವಿಯಾಹ್) ಸ್ವಚ್ಛವಾದ ಸಕ್ರಮವಾದ ವ್ಯಕ್ತಿಯಾಗಿ ವರ್ಣಿಸುವ ಹದೀಸುಗಳನ್ನು ಗ್ರಂಥದಲ್ಲಿ ಬರೆಯುವುದರಲ್ಲಿ ಆತನ (ಬುಖಾರಿ) ಪಕ್ಷಪಾತ ವೈಖರಿ. ಬುಖಾರಿ ತನ್ನ ಗ್ರಂಥದಲ್ಲಿ ಎಷ್ಟೋ ಹದೀಸುಗಳನ್ನು ಹೇಳಿದ್ದಾನೆ. ಅವು ಈ ದಿನ 'ಸಾಹೀಹ್ (ಧೃಢೀಕರಿಸಲ್ಪಟ್ಟಿರುವವು) ಎಂದು ಅಸತ್ಯಗಳನ್ನು ನುಡಿಯುವವರು ಅಕ್ರಮಗಳನ್ನು ಮಾಡುವವರು ಬರೆದಿರುವವು ನಂಬಲಾರದಂತಹವು ಎನ್ನಲ್ಪಟ್ಟವುಗಳಾಗಿ ಪ್ರಜೆಗಳಿಂದ ಹೆಸರು ಹೊಂದಿವೆ. ಆತನ ನಂತರ ಬಂದಿರುವ ಮುಸ್ಲೀಮ್ ಪಂಡಿತರು ಬುಖಾರಿವೊಂದರ ಲೋಪಗಳನ್ನು ಮತ್ತು ಇತರ ಹದೀಸು ಪಂಡಿತರನ್ನು ಇನ್ನೂ ಆತನಂತಹ ಸುನ್ನಾಹ್ (ಸಂಪ್ರದಾಯ/ವಿಧಾನ)ವನ್ನು ಹೊರಗಿಡುವುದಕ್ಕೆ ಹೆದರಿದ್ದಾರೆ. ಇದಕ್ಕೋಸ್ಕರ ಒಂದು ಉದಾಹರಣೆ. "ಅಲ್–ಮುಸ್ತಡ್ರೇಕ್" ಎನ್ನುವ ಪ್ರಖ್ಯಾತ ಗ್ರಂಥದಲ್ಲಿ ರಚನಕಾರರು ಹೀಗೆ ಹೇಳಿದ್ದಾನೆ. ಬುಖಾರಿ ತನ್ನ ಗ್ರಂಥದಲ್ಲಿ ಮೊಸ್ಲೇಮ್ ನಿರಾಕರಿಸಿದ 434 ವ್ಯಕ್ತಿಗಳಿಂದ ಶೇಖರಿಸಿದ ಹದೀಸುಗಳನ್ನು ತನ್ನ (ಬುಖಾರಿ) ಗ್ರಂಥದಲ್ಲಿ ಬರೆದಿದ್ದಾನೆ. ಅವರನ್ನು ಮೊಸ್ಲೇಮ್ ತನ್ನ ಗ್ರಂಥ 'ಸಾಹೀಹ್ ಮೊಸ್ಲೇಮ್' ಗೋಸ್ಕರ ಆ 434 ಜನರನ್ನು ನಂಬುವಂತಹವರು ಅಲ್ಲ ಎಂದು ನಿರಾಕರಿಸಿದ್ದಾನೆ. ಇನ್ನೊಂದು ಕಡೆ ಮೋಸ್ಲೇಮ್ ತನ್ನ ಗ್ರಂಥದಲ್ಲಿ ಬುಕಾರೀ ನಿರಾಕರಿಸಿದ ಹದೀಸುಗಳು ಹೇಳಿದ 625 ಜನರನ್ನು ತನ್ನ ಗ್ರಂಥದಲ್ಲಿ ಸ್ವೀಕರಿಸಿದ್ದಾನೆ.

ಹದೀಸುಗಳಿಂದ ಇಸ್ಲಾಮ್ ವೊಂದರ ಕಲುಷಿತ, ಪ್ರವಕ್ತ ಜೀವಿಸಿರುವ ಕಾಲದಲ್ಲಿ ಮತ್ತು ಆತನು ಮರಣಿಸಿದ ನಂತರ ಮೊದಲಾಗಿದೆ. ಈ ಹದೀಸು ಶೇಕರಣಗಳು ದೇವರಿಂದ ಖಂಡಿಸಲ್ಪಟ್ಟಿವೆ. ಇನ್ನೂ ಪ್ರವಕ್ತ ಮತ್ತು ಸಹಾಬಾ (ಪ್ರವಕ್ತ ವೊಂದರ ಸನ್ನಿಹಿತರು)ಯಿಂದ ಕೂಡಾ ಖಂಡಿಸಲ್ಪಟ್ಟಿವೆ. ಹಿಜ್ರಾ ಎರಡನೆ ಶತಾಬ್ದದ ಕೊನೆಗೆ ಬರುವಷ್ಟರಲ್ಲಿ ಪ್ರಖ್ಯಾತ ಆರು ಗ್ರಂಥಗಳನ್ನು ರಚಿಸುವ ಸಮಯಕ್ಕೆ ಈ ಕೆಲಸ ಅತ್ಯಂತ ತೀವ್ರಸ್ಥಿತಿಗೆ ಸೇರಿಕೊಂಡಿದೆ. ಖುರ್‌ಆನ್

ಹೇಳುತ್ತಿದೆ ತೀರ್ಪು ದಿನದಂದು ಪ್ರವಕ್ತ ದೇವರಿಗೆ ಮುಸ್ಲೀಮ್ಸ್ ಖುರ್‌ಆನ್ ಗ್ರಂಥವನ್ನು ಬಿಟ್ಟುಹಾಕುವುದರ ಕುರಿತು ಫಿರ್ಯಾದು ಮಾಡುತ್ತಾನೆ ಎಂದು.

## ಇತರ ಸಾಹೀಹ್, ಅಸತ್ಯಗಳು ಮತ್ತು ಕಲ್ಪಿತಗಳು :–

ಈ ಭಾಗದಲ್ಲಿ ಕೆಲವು ದಾರುಣವಾದ ಅಸತ್ಯಗಳು ಮತ್ತು ಕಲ್ಪಿತಗಳು ಹೇಳಲ್ಪಟ್ಟಿವೆ. ಯಾವನ್ನು ಹದೀಸು ಪಂಡಿತರು ಧೃಢೀಕರಿಸಲ್ಪಟ್ಟಿರುವವು (ಸಾಹೀಹ್) ಎಂದು ಹೇಳಿದ್ದಾರೋ, ಈ ಹದೀಸುಗಳು ಹದೀಸು ಶೇಖರಣೆಗಳಲ್ಲಿ ನಿರ್ಧಾರಿಸಲ್ಪಟ್ಟಿವೆ, ಅವುಗಳನ್ನು ಹೇಳಿದವರು (ಇಸ್ನಾದ್) ನಂಬುವಂತಹವರು ಎಂದು ಭಾವಿಸುವವರೆಗು ಆ ಹದೀಸುಗಳು ಧೃಢೀಕರಿಸಲ್ಪಡುತ್ತವೆ. ಇದು ಹದೀಸುಗಳಲ್ಲಿ ಯಾವ ವಿಷಯ ಇದೆ ಎನ್ನುವುದಕ್ಕೆ ಸಂಬಂಧ ಇಲ್ಲದಂತೆ ಅವು ಖುರ್‌ಆನ್‌ಗೆ ವಿರುದ್ಧವಾಗಿ ಇರುವ ಅಥವಾ ಅದರಲ್ಲಿ ಸಾಧಾರಣ ವಿಚಕ್ಷಣ ಇಲ್ಲದಂತೆ ಹೋದರೂ ಅದು ದೊಡ್ಡ ವಿಷಯ ಅಲ್ಲ. ಕೆಳಗೆ ಹೇಳಿರುವವು ಈ ಸಾಹೀಹ್ ಅಸತ್ಯಗಳೊಂದರ ಉದಾಹರಣೆಗಳು ಮಾದರಿ ಮಾತ್ರವೇ :

**1) ನಿಂತು ಕುಡಿಯಬೇಡಿ.**

ಸಾಹೀಹ್ ಮೊಸ್ಲೇಮ್, ಬುಕ್ 23, ನೆಂಬರ್ 5017

"ಅಬೂ ಹುರೈರಾ ಹೀಗೆ ಹೇಳಿದ್ದಾನೆ. ದೇವರು ದೂತ ಹೇಳಿದ್ದಾನೆ 'ನಿಂತಿರುವಾಗ ಕುಡಿಯಬೇಡ, ಯಾರಾದರೂ ಮರೆತುಹೋಗಿ ಹಾಗೆ ಮಾಡಿದ್ದರೇ, ಅವರು ಕುಡಿದಿರುವುದನ್ನೆಲ್ಲಾ ವಾಂತಿ ಮಾಡಿಕೊಳ್ಳಬೇಕು"

**2) ನಿಂತಿರುವ ಸ್ಥಿತಿಯಲ್ಲಿ ಮೂತ್ರ ಮಾಡಿರಿ.**

ಸಾಹೀಹ್ ಬುಖಾರಿ Vol.3, Book 43, Number 651.

"ದೇವರ ವೊಂದರ ವಾರ್ತಕನು ನಿಂತಿರುವಾಗ ಮೂತ್ರ ಮಾಡಿದ್ದಾನೆ."

**3) ನಿಂತಿರುವಾಗ ಮೂತ್ರ ಮಾಡಬೇಡಿ.**

ಸುನನ್ ಇಬ್ನ್ ಮಜಾಹ್, Vol.1, Book 1, Number 308.

"ನಿಂತು ಮೂತ್ರವನ್ನು ಮಾಡಬೇಡಿ"

**4) ದೇವರ ರೂಪದಲ್ಲಿ ಮನುಷ್ಯ.**

ಸಹೀಹ್ ಮೊಸ್ಲೇಮ್, Book 40, Number 6809.

ಅಬೂ ಹುರೈರಾ ಹೇಳಿದ್ದಾನೆ. ದೇವರ ವೊಂದರ ದೂತ ಹೇಳಿದ್ದಾನೆ "ಹಿರಿಯನಾದ ಅಲ್ಲಾಹ್ ಆದಮ್‌ನ್ನು ತನ್ನ ಸ್ವಂತ ರೂಪದಲ್ಲಿ ಸೃಷ್ಠಿಸಿದ್ದಾನೆ. ಅಬೂ ಹುರೈರಾ ಹೇಳಿದ ಇನ್ನೊಂದು ಅಸತ್ಯ ಮತ್ತು ಕಲ್ಪಿತ ಮತ್ತು ಮೊಸ್ಲೇಮ್ ತನ್ನ ಗ್ರಂಥದಲ್ಲಿ ಸ್ವೀಕರಿಸಿದೆ.

**5) ಆದಮ್ 60 ಬಾಹುಗಳ ಎತ್ತರ ಮತ್ತು 7 ಬಾಹುಗಳ ಅಗಲ**

ಮುಸ್ನಾದ್ ಅಹ್ಮದ್:

ಅಬೂ ಹುರೈರಾ ಹೀಗೆ ಹೇಳಿದ್ದಾನೆ, ಪ್ರವಕ್ತ ಹೇಳಿದ್ದಾನೆ "ದೇವರು ಆದಮ್‌ನ್ನು 60 ಬಾಹುಗಳ ಎತ್ತರ ಮತ್ತು 7 ಬಾಹುಗಳ ಅಗಲದಿಂದ ತಯಾರು ಮಾಡಿದ್ದಾನೆ" ಮತ್ತು ಸಾಹೀಹ್ ಮೊಸ್ಲೇಮ್‌ರಲ್ಲಿ Book 40, Number 6795. ಆದಮ್ 60 (ಗಜಾಲ) ಎತ್ತಿರ ! ಎಂದು ಹೇಳಲ್ಪಟ್ಟಿದೆ.

**6) ಸ್ತ್ರೀಯರು, ನಾಯಿಗಳು ಮತ್ತು ಕತ್ತೆ**

ಸಾಹೀಹ್ ಮೊಸ್ಲೇಮ್, Book 4, Number 1032.

"ದೂತ ಹೇಳಿದ್ದಾನೆ ಒಂದು ಕತ್ತೆಯಾಗಲೀ, ಸ್ತ್ರೀಯಾಗಲೀ, ಕಪ್ಪು ನಾಯಿಯಾಗಲೀ ಪ್ರಾರ್ಥನೆ ಮಾಡುವವನ ಮುಂದೆ ಹೋಗಿದೆಯೆಂದರೇ ಆ ಪ್ರಾರ್ಥನೆ ಕೆಲಸಕ್ಕೆ ಬರುವುದಿಲ್ಲ."

ಇದು ಸ್ತ್ರೀಯರಿಗೆ ಎಷ್ಟು ಘೋರ ಅವಮಾನ? ನಿಜಕ್ಕೂ ಈ ಮಾತುಗಳು ದೇವರ ಪ್ರವಕ್ತರಿಂದ ಬಂದಿರುತ್ತವಾ?

**7) ಸ್ತ್ರೀಯರಲ್ಲಿ ಕೆಟ್ಟ ಶಕುನ :**

ಸಾಹೀಹ್ ಬುಖಾರಿ Vol.7, Book 62, Number 30.

"ಸ್ತ್ರೀಯರಲ್ಲಿ, ಕುದುರೆಯಲ್ಲಿ, ಮನೆಯಲ್ಲಿ ಕೆಟ್ಟ ಶಕುನ (ಒಮೆನ್) ಇದೆ".

ಸ್ತ್ರೀಯರಿಗೆ ವಿರುದ್ಧವಾಗಿ ಮತ್ತೊಂದು ಪಕ್ಷಪಾತ ವಿಷಯ ಹದೀಸುಗಳೆಂದು ಬರೆದಿರುವವರ ವೊಂದರ ಪದ್ಧತಿ. ಖುರ್‌ಆನ್ ನಿಂದ ಬಂದಿರುವ ನಿಜವಾದ ಇಸ್ಲಾಮ್ ಸ್ತ್ರೀಯರಿಗೆ ಸಂಪೂರ್ಣ ಗೌರವವನ್ನು ಕೊಡುತ್ತದೆ ಮತ್ತು ಅಂತಹ ವರ್ಣನೆಗಳನ್ನು ಎಂದಿಗೂ ಉಪಯೋಗಿಸುವುದಿಲ್ಲ.

**8) ಬೇಧ ಮತ್ತು ಬೇಧ ಇಲ್ಲದಿರುವುದು ದೂತರೊಂದಿಗೆ, ವಿರುದ್ಧ :**

ಸಾಹೀಹ್ ಬುಖಾರಿ Vol.4, Book 55, Number 608.

ಇಬ್ನ್ ಅಬ್ಬಾಸ್ ಹೀಗೆ ಹೇಳಿದ್ದಾನೆ, ಪ್ರವಕ್ತ ಹೇಳಿದ್ದಾನೆ "ಯಾರೇಯಾಗಲೀ ನಾನು ಯೂನಸ್ (ಜೋನಾ) ಇಬ್ನ್ ಮತ್ತಗಿಂತ ಮೇಲು ಎಂದು ಅನ್ನಬಾರದು".

ಮೇಲಿನ ಹದೀಸು ಹೇಳಿದ್ದರೂ ಸಹ, ನಾವು ಹದೀಸು ಗ್ರಂಥಗಳಲ್ಲಿ ಮುಹಮ್ಮದ್ ಪ್ರವಕ್ತ, ಇತರ ಪ್ರವಕ್ತರಿಗಿಂತ ಇತರ ಮನುಷ್ಯರಿಗಿಂತ ದೊಡ್ಡವನು ಎಂದು ಹೇಳಿದ ಎಷ್ಟೋ ಕಥೆಗಳನ್ನು ನೋಡಬಹುದು. ಈ ಹದೀಸುಗಳು ಮೇಲೆ ಹೇಳಿದ ಹದೀಸುಗೆ ವಿರುದ್ಧ ಮತ್ತು ಖುರ್‌ಆನ್ ಬೋಧನೆಗಳಿಗೆ ವಿರುದ್ಧ. ವಿಶ್ವಾಸಿಗಳಾದ ಎಲ್ಲರಿಗೋಸ್ಕರ ಖುರ್‌ಆನ್ ಸ್ಪಷ್ಟವಾದ ಆದೇಶ ಹೊಂದಿದೆ. ಏನೆಂದರೇ ಪ್ರವಕ್ತರಲ್ಲಿ ವ್ಯತ್ಯಾಸಗಳು ಕಲ್ಪಿಸಿಕೊಳ್ಳಬೇಡಿ (2–285) "ತನ್ನ ಪ್ರಭುವು ಕಡೆಯಿಂದ ಅವತರಿಸುವಂತೆ ಮಾಡಲ್ಪಟ್ಟಿರುವುದನ್ನು ಪ್ರವಕ್ತ ವಿಶ್ವಾಸಿಸಿದ್ದಾನೆ. ಅದನ್ನು ವಿಶ್ವಾಸಿಗಳು ಸಹ (ಸತ್ಯವೆಂದು ನಂಬಿದ್ದಾರೆ) ಅವರೆಲ್ಲಾ ಅಲ್ಲಾಹ್‌ನ್ನು, ಆತನ ದೂತರನ್ನು, ಆತನ ಗ್ರಂಥಗಳನ್ನು ಆತನ

ಪ್ರವಕ್ತರನ್ನೂ ವಿಶ್ವಾಸಿಸಿದ್ದಾರೆ. ನಾವು ಆತನು (ಕಳುಹಿಸಿದ) ಪ್ರವಕ್ತರ ಮಧ್ಯೆ ಎಂತಹ ವಿಚಕ್ಷಣೆ, ಭೇದಭಾವವನ್ನು ಪಾಲಿಸುವುದಿಲ್ಲ" (ಎಂದು ಅವರು ಹೇಳುತ್ತಾರೆ.) "ನಾವು ಕೇಳಿದ್ದೇವೆ. ವಿಧೇಯರಾಗಿದ್ದೇವೆ. ನಮ್ಮ ಪ್ರಭೂ! ನಾವು ನಿನ್ನ ಕ್ಷಮಾಭಿಕ್ಷೆಯನ್ನು ಅರ್ಥಿಸುತ್ತಿದ್ದೇವೆ. ಕೊನೆಗೆ ನಾವು ಪುನಃ ಬರಬೇಕಾಗಿರು ವುದು ನಿನ್ನ ಹತ್ತಿರಕ್ಕೇ" ಎಂದು ಅನ್ನುತ್ತಾರೆ. ಹದೀಸು ಗ್ರಂಥಗಳನ್ನು ಅನುಸರಿ ಸುತ್ತಿದ್ದೇವೆ ಎಂದು ಹೇಳುವವರು ಪ್ರವಕ್ತರಲ್ಲಿ ವ್ಯತ್ಯಾಸಗಳು ಕಲ್ಪಿಸಿಕೊಳ್ಳಬೇಡಿ ಎಂದು ಪುನಃ ಪುನಃ ಹೇಳಿದ ಹದೀಸುಗಳನ್ನು ಕುರಿತು ಹಿಡಿಸಿಕೊಳ್ಳಲಿಲ್ಲ.

(ಎಲ್ಲ ಕುಲದವರೂ ನಾನು ಹೇಳಿದ ಮೂರು ಮತಗಳ ಸಾರಾಂಶವನ್ನು ಓದಿ ಮನಸ್ಸು ಬದಲಾವಣೆ ಹೊಂದಿದವರಾಗಿ ತಯಾರಾಗಿದ್ದಾರೆ. ಆ ವಿಷಯಕ್ಕೆ ಉದಾಹರಣೆಯಾಗಿ ಒಬ್ಬ ಮುಸ್ಲೀಮ್, ಒಬ್ಬ ಕ್ರೈಸ್ತವನು ಬರೆದ ಉತ್ತರಗಳನ್ನು ಓದಿರಿ.)

## ಪತ್ರಗಳು

### ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ ಪಾದ ಪದ್ಮಗಳಿಗೆ ನನ್ನ ಸಾಷ್ಟಾಂಗ ವಂದನೆಗಳು.

ನನ್ನ ಹೆಸರು ಸಾಕಾ ಧನುಂಜಯ, S/O ಅಚ್ಚಪ್ಪ, ವಯಸ್ಸು 48 ವರ್ಷಗಳು, ಕುಲ ಪದ್ಮಶಾಲಿ, ನಿವಾಸ ಬೆಂಗಳೂರು, ಯಲಹಂಕ ಅಗ್ರಹಾರ ಲೇಅವುಟ್.

ನಾನು ಪ್ರಸ್ತುತ ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜೈಲ್‌ನಲ್ಲಿ ಸಜಾ ಖೈದಿಯಾಗಿ ಇದ್ದೇನೆ. ನನಗೆ ಜೀವಿತ ಖೈದಿಯಾಗಿ ಕೋರ್ಟು ಶಿಕ್ಷೆ ಹಾಕಿದೆ. ನನ್ನ ಸಜಾ ಖೈದಿ ನೆಂಬರ್. 9203 (Convict Prison) ರೂಮ್ ನಂಬರ್ C-7 (Block NO-7) ನಲ್ಲಿ ಇರುತ್ತಿದ್ದೇನೆ.

ನಾನು ಬಾಲ್ಯದಿಂದ ರಾಮನು ಮತ್ತು ಆಂಜನೇಯ ಭಕ್ತನಾಗಿ ಇದ್ದೂ, ನನ್ನ ಜೀವನದಲ್ಲಿ ಬರುವ ಸಮಸ್ಯೆಗಳಿಗೆ, ಬಾಧೆಗಳಿಗೆ ಅನುಗುಣವಾಗಿ ಬೇರೇ ಬೇರೆ ದೇವತೆಗಳನ್ನು ಸಹ ಪೂಜಿಸುತ್ತಿದ್ದೆನು. ಆದರೇ ಎಷ್ಟು ಮಂದಿ ದೇವತೆಗಳನ್ನು ಪೂಜಿಸಿದರೂ ನನ್ನ ಸಮಸ್ಯೆಗಳು, ಬಾಧೆಗಳು ಹೋಗಲಿಲ್ಲ. ನಾನು ಬಾಲ್ಯದಿಂದ ದೈವಭಕ್ತಿಯಿಂದ ಜ್ಞಾನ ತಿಳಿದುಕೊಳ್ಳಬೇಕೆಂದು ಬಹಳ ಶ್ರದ್ಧೆಯಿಂದ ಕೆಲವು ಆಶ್ರಮಗಳಿಗೆ ಸಹ ಹೋಗಿ, ಜ್ಞಾನ ಬೋಧನೆಗಳು ಕೇಳುತ್ತಿದ್ದೆನು. ಅದರಲ್ಲಿ ಭಾಗವಾಗಿಯೇ ಕೈವಾರ ತಾತಯ್ಯನ ಮಠದಲ್ಲಿ (ಪೋತುಲೂರಿ ವೀರಬ್ರಹ್ಮಯ್ಯರವರ ಅನುಬಂಧ ಮಠ)ಕ್ಕೆ ಹೋಗಿ ತತ್ತ್ವ ಜ್ಞಾನಬೋಧನೆಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದೆನು. ಆದರೇ ನನ್ನ ಬಾಧೆಗಳು ಇನ್ನೂ ಬೆಳೆಯುತ್ತಲೇ ಇದ್ದವು.

ನಾನು ಜ್ಞಾನ ಎಂದು, ಭಕ್ತಿ ಎಂದು ತಿರುಗುತ್ತಾ ಇದ್ದರೇ ನಮ್ಮ ಕುಟುಂಬದವರೆಲ್ಲರೂ ವಿರೋಧಿಸುತ್ತಾ ಇರುತ್ತಿದ್ದರು. ಆದರೂ ನಾನು ಹಾಗೇ ಮಾಡುತ್ತಿರುವುದರಿಂದ, ನನ್ನ ಕುಟುಂಬದವರು, ಬಂಧುಗಳು ಎಲ್ಲರೂ ದೂರವಾಗಿದ್ದಾರೆ. ನಾನು ಮದುವೆ ಸಹ ಮಾಡಿಕೊಳ್ಳಲಿಲ್ಲ. ನನಗೆ ಜೀವನದ ಮೇಲೆ ನಿರಾಶೆ ಉಂಟಾಗುತ್ತಿತ್ತು, ಬಾಧೆಗಳು ಭರಿಸುತ್ತಾ, ಜ್ಞಾನ ತಿಳಿದು ಕೊಳ್ಳಬೇಕೆಂಬ ಶ್ರದ್ಧೆಯಿಂದ ಬಹಳ ಕಡೆಗೆ ಹೋಗಿ, ಗುರುಗಳ ಹತ್ತಿರಕ್ಕೆ, ಪಂಡಿತರ ಹತ್ತಿರಕ್ಕೆ, ಬಾಬಾಗಳ ಹತ್ತಿರಕ್ಕೆ ಕೂಡಾ ಹೋಗಿ ಬಹಳ ಬೋಧನೆಗಳನ್ನು ಕೇಳುತ್ತಿದ್ದನು. ನನಗೆ ಜ್ಞಾನ ಸಂಬಂಧ ಎಷ್ಟೋ ಪ್ರಶ್ನೆಗಳು ಬರುತ್ತಿದ್ದವು, ಅವರನ್ನು ಕೇಳಿದರೇ ಅವರು ಹೇಳುವ ಸಮಾಧಾನದಲ್ಲಿ ನನಗೆ ತೃಪ್ತಿಯಾಗಿ ಸಮಾಧಾನ ದೊರಕುತ್ತಿರಲಿಲ್ಲ.

ಈ ವಿಧವಾಗಿ ನಾನು ಜೀವನ ಕಳೆಯುತ್ತಿರುವಾಗ, ನಾನು ಕೆಲಸ ಮಾಡುವ ಚಿಂತಾಮಣಿ ಟೌನ್‌ನಲ್ಲಿ ಇರುವ ಕೋನಕಪಲ್ಲಿ ಗ್ರಾಮದಲ್ಲಿ ಹ್ಯಾಂಡ್ಲೂಮ್ ಮಗ್ಗದ ಪರಿಶ್ರಮದಲ್ಲಿ ನಮ್ಮ ಪರಿಶ್ರಮ, ಯಜಮಾನಿಗೆ ಆತನ ಹೆಂಡತಿಗೆ ಮಧ್ಯೆ ಜಗಳ ಬಂದು ಆಕೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಾಗ, ಆ ಆಪಾಧನೆ ನನ್ನ ಮೇಲೆ ಹಾಕಲ್ಪಟ್ಟು ನನಗೆ ಜೀವಿತ

ಖೈದೀಯಾಗಿ ಶಿಕ್ಷೆ ಬಿದ್ದಿದೆ. ಜೈಲು ಜೀವನ ಕಳೆಯುತ್ತಾ ಓದು ಬಹಳ ಬಾರದ ಕಾರಣದಿಂದ ಇನ್ನೂ ಓದಿಕೊಳ್ಳಬೇಕೆನ್ನುವ ಕೋರಿಕೆ ಹೊಂದಿ ಕನ್ನಡ, ತೆಲುಗು ಭಾಷೆಗಳು ಕಲಿತುಕೊಂಡು ವಾರ್ತಾ ಪತ್ರಿಕೆಗಳು, ಇತರ ದೈವ ಗ್ರಂಥಗಳು ಓದುತ್ತಾ, ಓದನ್ನು ಮುಂದುವರೆಸುತ್ತಾ, ಕೇಸು ಟ್ರೈಲ್ ನಡೆಸಿಕೊಳ್ಳುತ್ತಾ, ಭಗವದ್ಗೀತೆಯನ್ನು ಓದಿಕೊಳ್ಳುತ್ತಿದ್ದೇನೆ.

ಜೈಲಿಗೆ ಬಂದ ಒಂದು ವರ್ಷ ಕಾಲಕ್ಕೆ ಒಂದು ದಿನ ನಮ್ಮ ಜೈಲ್‌ನಲ್ಲಿ ನಮ್ಮ ರೂಮ್‌ಗೆ ಕ್ರೈಸ್ತವ ಬೋಧಕರು ಬಂದು ಬೈಬಲ್ ಕುರಿತು, ಏಸನ್ನು ಕುರಿತು ಬೋಧಿಸಿದ್ದಾರೆ. ನಾನು ಬೋಧನೆ ನಂತರ ಫಾದರ್‌ನನ್ನು ಭೇಟಿಮಾಡಬೇಕೆಂದು ಅನಿಸಿತು. ಏಕೆಂದರೇ ಅವರ ಬೋಧನೆಗಳಲ್ಲಿ ನಿಮ್ಮ ಪಾಪಗಳು ಹೋಗುತ್ತವೆ, ಬಾಧೆಗಳು, ಕಷ್ಟಗಳು ಹೋಗಿ ಕೇಸಿನಿಂದಲೂ ಸಹ ಹೊರಬರುತ್ತೀರಾ ಎಂದು ಹೇಳಿದ್ದಾರೆ. ಅದು ಕೇಳಿದ ನಾನು ಫಾದರ್‌ರವರಿಗೆ ನನ್ನ ಬಾಧೆಗಳನ್ನು ಹೇಳಿಕೊಂಡಿದ್ದೇನೆ. ಆಗ ಫಾದರ್‌ರವರು ಏಸು ಪ್ರಭುವನ್ನು ನಂಬಿಕೊಂಡು, ಬೈಬಲ್ ಓದಿಕೊಳ್ಳುತ್ತಾ, ಪ್ರತಿ ದಿನ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇರು ಎಂದು ಒಬ್ಬ ಬೈಬಲ್ ಕೊಟ್ಟು ಪ್ರಶಂಸಿಸಿದರು. ಅಂದಿನಿಂದ ಏಸು ಭಕ್ತನಾಗಿ ಬದಲಾಗಿ, ಹಿಂದೂ ಗ್ರಂಥಗಳನ್ನು, ದೇವತೆಗಳನ್ನು ಬಿಟ್ಟುಹಾಕಿದ್ದೇನೆ. ನಾನು ಪೂರ್ತಿ ವಿಶ್ವಾಸಿಯಾಗಿ ಬದಲಾಗಿ, ಏಸು ಭಕ್ತನಾಗಿ ಇದ್ದು, ಬೈಬಲ್ ಓದುತ್ತಾ, ಪ್ರಾರ್ಥನೆಗಳು ಮಾಡುತ್ತಾ, ಚರ್ಚಿಗೆ ಹೋಗಿ ಕ್ರೈಸ್ತವ ಬೋಧನೆಗಳು ಕೇಳುತ್ತಾ, ಇತರರಿಗೆ ಕೂಡಾ ಬೋಧನೆಗಳು ಹೇಳುತ್ತಾ ನನ್ನ ಜೀವನ ಕಳೆಯುತ್ತಿದ್ದೇನೆ. ಆದರೂ ನನ್ನ ಬಾಧೆಗಳು, ಸಮಸ್ಯೆಗಳು ಹಾಗೇ ಇವೆ. ಕೇಸು ಕೂಡಾ ಪರಿಷ್ಕಾರ ಆಗುತ್ತಿಲ್ಲ. ಈ ವಿಷಯವನ್ನು ಕುರಿತು ಫಾದರ್‌ನನ್ನು ಕೇಳಿದಾಗ, ಎಷ್ಟೋ ವರ್ಷಗಳಿಂದ ಇರುವವರಿಗೇ ಸಮಸ್ಯೆಗಳು ಹೋಗಲಿಲ್ಲ. ನಿನಗೆ ಆಗಲೇ ಹೋಗುತ್ತವಾ? ಇನ್ನೂ ಸ್ವಲ್ಪ ದಿನ ವಿಶ್ವಾಸದಿಂದ ಪ್ರಾರ್ಥನೆ ಮಾಡುತ್ತಾ ಇರು ಎಂದು ಹೇಳಿದಾಗ ನಾನೂ ಹಾಗೇ ಮಾಡುತ್ತಾ ಇದ್ದೆನು. ನನ್ನ ಕೇಸು ಟ್ರೈಲ್ ಮುಗಿದುಹೋಗಿ ನಾನು ಕ್ರೈಸ್ತನಾಗಿ ಬದಲಾದ ಒಂದುವರೆ ವರ್ಷಕ್ಕೆ ಕೇಸು ಜಡ್ಜಿಮೆಂಟ್ ನಡೆದು, ನನಗೆ ಜೀವಿತ ಖೈದು ಶಿಕ್ಷೆ ಬಿದ್ದಿದೆ.

ಈ ವಿಷಯವನ್ನು ಕುರಿತು ಫಾದರ್‌ನನ್ನು ಕೇಳಿದಾಗ ಅವರು ಇಂತಹವರು ಏಸನ್ನು ವಿಶ್ವಾಸಿಸುವುದರಿಂದ ನಂತರ ಬೆಯಿಲ್ ಸಿಕ್ಕಿದೆ ಎಂದು, ಒಬ್ಬ ವ್ಯಕ್ತಿ ಕೇಸು ಹೊಡೆದುಹಾಕಲ್ಪಟ್ಟಿದೆಯೆಂದು ಅವರನ್ನು ಕುರಿತು ಹೇಳಿದ್ದಾರೆ. ನಾನು ಹಾಗೇ ಬೈಬಲ್ ಓದಿಕೊಳ್ಳುತ್ತಾ, ಪ್ರಾರ್ಥನೆಗಳು ಮಾಡಿಕೊಳ್ಳುತ್ತಾ, ಜ್ಞಾನ ಬೋಧನೆಗಳು ಕೇಳುತ್ತಾ ಕೆಲವು ಅರ್ಥವಾಗದ ವಾಕ್ಯಗಳನ್ನು ಕೇಳಿದರೇ ಯಾಕೋ ಅವರ ಸಮಾಧಾನ ತೃಪ್ತಿ ಎನಿಸದೇ ಇತ್ತು. ಈ ವಿಧವಾಗಿ ನನ್ನ ಜೀವನ ಮುಂದುವರೆಯುತ್ತಿರುವಾಗ!

ಒಂದು ದಿನ ಸುಮಾರು 7 ಅಥವಾ 8 ತಿಂಗಳ ಕೆಳಗೆ ನಮ್ಮ ರೂಮ್ ಪಕ್ಕದಲ್ಲಿ ಇರುವ ರೂಮ್‌ನಲ್ಲಿ ಇರುವ ದಿಲೀಪ್ ಎನ್ನುವ ವ್ಯಕ್ತಿಯೊಂದಿಗೆ ಒಬ್ಬ ವ್ಯಕ್ತಿ ದೈವಜ್ಞಾನವನ್ನು ಕುರಿತು ತೆಲುಗುದಲ್ಲಿ ಬೋಧಿಸುತ್ತಿರುವಾಗ, ನಾನು ಕೇಳಿ ಪಕ್ಕದಲ್ಲೇ ನಿಂತು ಕೇಳುತ್ತಾ, ಈತನು ಯಾರು ಗಡ್ಡ ಇಟ್ಟುಕೊಂಡು ಮುಸ್ಲೀಮ್‌ಯಾಗಿ ಕಾಣಿಸುತ್ತಾ ತೆಲುಗುದಲ್ಲಿ ದೈವಜ್ಞಾನ ಹೇಳುತ್ತಿದ್ದಾನೆಂದು ಸ್ವಲ್ಪ ಶ್ರದ್ಧೆ ಇಟ್ಟು ಕೇಳಿದ್ದೇನೆ. ಆತನ ಮಾತುಗಳಲ್ಲಿ ನಂಬಿಕೆ ಸತ್ಯ ಹೇಳಿದಂತೆ ಅನಿಸಿ, ಕುಳಿತುಕೊಂಡು ಬೋಧನೆ ಮುಗಿಯುವವರೆಗು ಶ್ರದ್ಧೆಯಿಂದ ಕೇಳಿದ್ದೇನೆ. ಆತನು ಹೇಳಿದ ಬೋಧನೆ ಇಲ್ಲಿಯವರೆಗು ಎಲ್ಲೂ ಕೇಳಲಿಲ್ಲ ಎನಿಸಿತು. ಬೋಧ ಮುಗಿದುಹೋದ ನಂತರ ಆತನೊಂದಿಗೆ ಪರಿಚಯ ಮಾಡಿಕೊಂಡಾಗ, ಆತನ ಹೆಸರು ಅಮೀರ್‌ಅಲಿ ಎಂದು ಹೇಳಿದ್ದಾರೆ. ಆ ನಂತರ ಆತನು ನನ್ನೊಂದಿಗೆ ನಿಮಗೆ ದೇವರ ಮೇಲೆ ಭಕ್ತಿ, ಜ್ಞಾನದ ಮೇಲೆ ಶ್ರದ್ಧೆ ಇದ್ದರೇ, ದಿಲೀಪ್ ಹತ್ತಿರ ಜ್ಞಾನ ಗ್ರಂಥಗಳು ಇವೆ. ಅದರಲ್ಲಿ ನಿಮಗೆ ಇಷ್ಟವಾದ ಒಂದನ್ನು ತೆಗೆದುಕೊಂಡು ಓದು ಎಂದು ಹೇಳಿದ್ದಾರೆ. ಆದರೂ ನನಗೆ ಗ್ರಂಥ ಓದುವುದು ಇಷ್ಟವಾಗಿ ಅನಿಸಲಿಲ್ಲ. ಏಕೆಂದರೇ ಬೈಬಲ್ ಓದುತ್ತಿದ್ದೆ, ಬೇರೇ ಗ್ರಂಥಗಳು ಓದಬೇಡವೆಂದು ನಮ್ಮ ಫಾದರ್ ಸಹ ಹೇಳಿದ್ದಾರೆ. ಆದರೇ ಅಮೀರ್ ಅಲಿ ಹೇಳಿದ ಬೋಧನೆ ನನಗೆ ಅದೇ ದಿನ ಪದೇ ಪದೇ ನೆನಪಿಗೆ ಬರುತ್ತಿದೆ. ಆತನು ಹೇಳಿದ ಬೋಧನೆ ಸತ್ಯ ಎನಿಸಿತು. ನನ್ನ ಮನಸಿನಲ್ಲಿ ಅದೇ ದಿನ ಸಂಜೆ ಆತನು ಹೇಳಿದ ಗ್ರಂಥ ಓದಬೇಕೆಂದೆನಿಸಿತು, ದಿಲೀಪ್

ಹತ್ತಿರಕ್ಕೆ ಹೋಗಿ ಆ ಗ್ರಂಥಗಳು ನೋಡಿ ಅದರಲ್ಲಿ **"ದೇವಾಲಯ ರಹಸ್ಯಗಳು"** ಎನ್ನುವ ಗ್ರಂಥವನ್ನು ತೆಗೆದುಕೊಂಡು ಬಂದು ಓದಿದ್ದೇನೆ. ದೇವಾಲಯದಲ್ಲಿ ಇರುವ ರಹಸ್ಯಗಳು ಗ್ರಂಥದ ಮೂಲಕ ತಿಳಿದು ಅದ್ಭುತ ಎನಿಸಿತು. ಆಗ ದೇಹವೇ ದೇವಾಲಯವೆಂದು, ದೇವರು ದೇಹದಲ್ಲೇ ಇದ್ದಾನೆಂದು ತಿಳಿದು ನನ್ನ ಹೃದಯದಲ್ಲಿ ಎಷ್ಟೋ ಆನಂದ, ತೃಪ್ತಿ ಉಂಟಾಯಿತು. ನನ್ನ ಮನಸ್ಸಿನಲ್ಲಿ ಉಳಿದ ಗ್ರಂಥಗಳು ಸಹ ಓದಬೇಕೆನ್ನುವ ಪ್ರೇರಣೆ ಬೆಳೆಯಿತು. ನಂತರ ಅಮೀರ್ ಅಲೀಯೊಂದಿಗೆ ಎರಡನೆ ಸಾರಿ ಭೇಟಿಯಾದಾಗ ಜ್ಞಾನಪರವಾಗಿ ಚರ್ಚಿಸಿದ ನಂತರ ನನ್ನಲ್ಲಿ ಇರುವ ಕೆಲವು ಪ್ರಶ್ನೆಗಳಿಗೆ ಆತನ ಮೂಲಕ ತಿಳಿದ ಸಮಾಧಾನದಲ್ಲಿ ಸತ್ಯವಿದೆಯೆನ್ನುವ ನಂಬಿಕೆ, ವಿಶ್ವಾಸ ಉಂಟಾಯಿತು. ಆಗ ಆತನು ನನ್ನೊಂದಿಗೆ ಸ್ವಾಮಿಯವರ ಗ್ರಂಥಗಳು ಉಳಿದಿರುವವು ಸಹ ಓದಿರಿ, ಪ್ರಪಂಚದಲ್ಲಿ ಇಲ್ಲಿಯವರೆಗು ಯಾರಿಗೂ ತಿಳಿಯದ ಜ್ಞಾನ ರಹಸ್ಯಗಳು ಸ್ವಾಮಿಯವರ ಗ್ರಂಥಗಳ ಮೂಲಕ ತಿಳಿಯುತ್ತವೆ ಎಂದು ಹೇಳಿ ಪುನಃ ಭೇಟಿಯಾಗೋಣ, ಅಲ್ಲಿಯವರೆಗು ಗ್ರಂಥಗಳು ಓದುತ್ತಾ ಇರು ಎಂದು ಹೇಳಿ ಹೊರಟು ಹೋಗಿದ್ದಾನೆ. ಇಲ್ಲಿಯವರೆಗು ನಾನು ಓದಿದ ಗ್ರಂಥಗಳು 1. ದೇವಾಲಯ ರಹಸ್ಯಗಳು 2. ಪ್ರಬೋಧ 3. ಸುಬೋಧ 4. ಶಿಲುಬೆ ದೇವರಾ? 5. ಏಸು ಮರಣಿಸಿದ್ದಾನಾ ಹತವಾಗಿದ್ದಾನಾ? 6. ತಾಯಿ ತಂದೆ 7. ಸಮಾಧಿ 8. ತ್ರೈತಾಕಾರ ರಹಸ್ಯ 9. ಶ್ರೀಕೃಷ್ಣನು ದೇವರಾ ಭಗವಂತನಾ? 10. ದೆವ್ವಗಳ ಭೂತಗಳ ಯಥಾರ್ಥ ಸಂಘಟನೆಗಳು 11. ಜನನ ಮರಣ ಸಿದ್ಧಾಂತ 12. ವಾರ್ತಕನು ವರ್ತಕನು 13. ಪ್ರತಿಮೆxವಿಗ್ರಹ 14.ಸತ್ಯಾನ್ವೇಷಿ ಕಥೆ 15. ಯಜ್ಞಗಳು 16. ನಮ್ಮ ಹಬ್ಬಗಳು 17. ಇಂದೂ ಸಂಪ್ರದಾಯಗಳು 18. ಭಗವದ್ಗೀತೆ 19. ದೇವರ ಗುರುತು 963, ಮಾಯ ಗುರುತು 666 20. ಪ್ರಸಿದ್ಧಿ ಬೋಧ 21. ನಾಸ್ತಿಕರು ಆಸ್ತಿಕರು 22. ಕರ್ಮಪತ್ರ 23. ದೇವರ ಚಿಹ್ನೆ 24. ದೇವರ ಮುದ್ರೆ 25. ಮತಾತೀತ ದೇವರ ಮಾರ್ಗ 26. ನಿಗೂಢ ತತ್ತ್ವಾರ್ಥ ಬೋಧಿನಿ 27. ಗಿಡ ಮೊದಲಾ? ಬೀಜ ಮೊದಲಾ? 28. ಒಬ್ಬನೇ ಇಬ್ಬರು. 29 ಕೃಷ್ಣ ಮೂಸ 30. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು

31. ಹಿಂದೂ ಧರ್ಮಕ್ಕೆ ರಕ್ಷಣೆ ಅವಶ್ಯವಾ? 32. ಆಧ್ಯಾತ್ಮಿಕ ಪ್ರಶ್ನೆಗಳು ಉತ್ತರಗಳು. 33. ಭಗವಾನ್ ರಾವಣ ಬ್ರಹ್ಮ.

ಈ ಗ್ರಂಥಗಳು ಎಲ್ಲವೂ ಅಮೀರ್ ಅಲಿ ಯಿಂದ ತೆಗೆದುಕೊಂಡು ಓದಿದ್ದೇನೆ. ಈಗ ವೇದಗಳು, ಉಪನಿಷತ್ತುಗಳನ್ನು ಕುರಿತಿರುವ ಗ್ರಂಥಗಳು ಕೊಟ್ಟಿದ್ದಾರೆ. ಓದುತ್ತಿದ್ದೇನೆ. ಇನ್ನೂ ಗ್ರಂಥಗಳು ಓದಬೇಕೆನ್ನುವ ಕಾಂಕ್ಷೆ ಬೆಳೆಯುತ್ತಲೇ ಇದೆ. ಈ ಗ್ರಂಥಗಳ ಮೂಲಕ ತಿಳಿದ ನಿಜವಾದ ಜ್ಞಾನ ಏನೆಂದರೇ ಜೀವಾತ್ಮ, ಆತ್ಮ, ಪರಮಾತ್ಮ ಎಂದು ಮೂರು ಆತ್ಮಗಳ ಜ್ಞಾನ ಇಲ್ಲಿಯವರೆಗು ಯಾರೂ ಹೇಳಲಿಲ್ಲ ಎಂದು ತಿಳಿದಿದೆ. ದೇವರಿಗೂ, ಭಗವಂತನಿಗೂ ವ್ಯತ್ಯಾಸ ತಿಳಿದಿದೆ. ಆತ್ಮ ಕೆಲಸ ತಿಳಿದಿದೆ. ಪರಮಾತ್ಮ ಅಂಶವೇ ಭಗವಂತನಾಗಿ ಕೃಷ್ಣನಾಗಿ ಬಂದಿದ್ದಾನೆಂದು ತಿಳಿದಿದೆ. ಧರ್ಮಗಳು, ಅಧರ್ಮಗಳು ತಿಳಿದಿವೆ. ನಿರಾಕಾರ, ಸಾಕಾರವನ್ನು ಕುರಿತು ತಿಳಿದಿದೆ. ಮುಖ್ಯವಾಗಿ ಶರೀರ 24 ಭಾಗಗಳು ಪ್ರಕೃತಿ ಎಂದು ಅದರಲ್ಲಿ ಮೂರು ಆತ್ಮಗಳು ಜೀವಾತ್ಮ, ಆತ್ಮ, ಪರಮಾತ್ಮರು ಇವೆಯೆಂದು ನಾನು ಜೀವಾತ್ಮ ಕರ್ಮಗಳು ಅನುಭವಿಸುವವನು ಎಂದು, ಆತ್ಮ ಅನುಭವಿಸುವಂತೆ ಮಾಡುವುದೆಂದು, ಪರಮಾತ್ಮ ಸಾಕ್ಷಿ ಭೂತನೆಂದು ತಿಳಿದಿದೆ ಬ್ರಹ್ಮಯೋಗ, ಕರ್ಮಯೋಗ, ಭಕ್ತಿಯೋಗ ಸಹ ತಿಳಿದಿದೆ.

ದ್ವಿತೀಯ ದೈವಗ್ರಂಥ ಬೈಬಲ್‌ಯಿಂದ ಮುಂಬರುವ ಆದರಣಕರ್ತ ಸಾಕ್ಷಾತ್ತೂ ಯೋಗೀಶ್ವರರವರೇ, ಪರಿಶುದ್ಧಾತ್ಮ ಎಂದು ತಿಳಿದಿದೆ. ಭಗವದ್ಗೀತಾ ಶ್ಲೋಕಗಳ ಸಾರಾಂಶ ಒಟ್ಟಾರೆ ಶರೀರದಲ್ಲಿ ಇರುವ ಜ್ಞಾನವನ್ನು ಕುರಿತೇ ಹೇಳಿದೆಯೆಂದು ತಿಳಿದಿದೆ. ಭಗವದ್ಗೀತೆಯಲ್ಲಿನ ಭಾಗವೇ ಬೈಬಲ್ ಜ್ಞಾನ ಎಂದು ತಿಳಿದಿದೆ. ಸಾಕಾರ ರೂಪದಲ್ಲಿ ಭಗವಂತನು ಹೇಳಿರುವುದೇ ನಿಜವಾದ ಜ್ಞಾನ ಎಂದು, ಅಧರ್ಮಗಳ ಆಚರಣೆ ಮೂಲಕ ಕರ್ಮಗಳು ಅಂಟಿಕೊಂಡು ಜನ್ಮಗಳು ಉಂಟಾಗುತ್ತವೆಯೆಂದು, ಧರ್ಮಗಳ ಆಚರಣೆ ಮೂಲಕ ಕರ್ಮಗಳು ನಾಶ ಮಾಡಿ, ಮೋಕ್ಷ ಪ್ರಾಪ್ತಿಸುವಂತೆ ಮಾಡುತ್ತವೆ ಎಂದು ತಿಳಿಯಿತು.

ದೇವರು ಒಬ್ಬನೇ, ದೇವರ ಜ್ಞಾನ ಒಂದೇ, ದೇವರ ಮೋಕ್ಷ ಒಂದೇ ಎನ್ನುವ ನಿಜ ತಿಳಿಯಿತು. ಮತಗಳು ಮಾನವರ ಸೃಷ್ಠಿ ಎಂದು ತಿಳಿದಿದೆ. ಪ್ರಪಂಚದಲ್ಲಿ ಯಾವ ಮಾನವನೂ ಇಷ್ಟು ದೊಡ್ಡ ಜ್ಞಾನ ಹೇಳಲಾರನೆಂದು, ದೈವಶಕ್ತಿ ಹೊರತು ಮಾನವ ಶಕ್ತಿ ಹೇಳಿದ ಜ್ಞಾನ ಅಲ್ಲ ಎಂದು, ಈ ಜ್ಞಾನದ ಮೂಲಕ ಸಾಕ್ಷಾತ್ತು ಪರಮಾತ್ಮ ಅಂಶ ಆದ ಭಗವಂತನೇ ಯೋಗೀಶ್ವರರವರು ಎಂದು, "ಭಗವಾನ್ ರಾವಣ ಬ್ರಹ್ಮ" ಮತ್ತು "ವೇದಗಳು ಮನುಷ್ಯನಿಗೆ ಅವಶ್ಯವಾ?" ಎನ್ನುವ ಗ್ರಂಥಗಳ ಮೇಲೆ ಇರುವ ನಾಲ್ಕು ದೈವಾಂಶಗಳು **1. ಭಗವಾನ್ ರಾವಣ ಬ್ರಹ್ಮ 2. ಶ್ರೀಕೃಷ್ಣನು 3. ಏಸು ಪ್ರಭುವು 4. ಯೋಗೀಶ್ವರರು** ಇವರು ನಾಲ್ವರು ಸಾಕ್ಷಾತ್ತು ಪರಮಾತ್ಮ ಅಂಶ ಆದ ಭಗವಂತರೆಂದು ತಿಳಿದಿದೆ. ಪ್ರಪಂಚ ಮೂಢರನ್ನು ಜ್ಞಾನಿಗಳಾಗಿ ಮಾಡಲು ಬಂದಿರುವ ಭಗವಂತರೆಂದು ಪೂರ್ತಿಯಾಗಿ ವಿಶ್ವಾಸಿಸುತ್ತಿದ್ದೇನೆ. ತ್ರಿಮತ ಏಕೈಕ ಗುರುವು, ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ ಎಂದು, ನಿಮ್ಮ ಗ್ರಂಥಗಳ ಮೇಲೆ ಇರುವ ವಿಷಯ 100% ನಿಜ. ತಮ್ಮ ದೈವಜ್ಞಾನ ಗ್ರಂಥಗಳ ಮೂಲಕ ನಮ್ಮ ಜೀವನ ಧನ್ಯವಾಯಿತು. ಉಳಿದ ಜೀವನವೂ ಸಹ ಜ್ಞಾನ ತಿಳಿದುಕೊಳ್ಳುತ್ತಾ, ಆಚರಿಸುತ್ತಾ ಧರ್ಮ ಪ್ರಚಾರ ಮಾಡುತ್ತಾ ಕಳೆಯಬೇಕೆಂದು ನಿಶ್ಚಯಿಸಿಕೊಂಡು ಸಂಪೂರ್ಣ ಜ್ಞಾನವನ್ನು ಆಚರಿಸುವ ಶಕ್ತಿಯನ್ನು ಅನುಗ್ರಹಿಸೆಂದು ನನ್ನ ಪೂರ್ಣ ಮನಸ್ಸಿನಿಂದ, ನನ್ನ ಪೂರ್ಣ ಹೃದಯದಿಂದ, ನನ್ನ ಪೂರ್ಣ ಆತ್ಮದಿಂದ ಸಾಕಾರ ರೂಪ ಆದ ಯೋಗೀಶ್ವರರ ಪಾದ ಪದ್ಮಗಳ ಮೇಲೆ ಶಿರಸ್ಸನ್ನು ಇಟ್ಟು ಶರಣು ಕೋರುತ್ತಿದ್ದೇವೆ. ಭಗವದ್ಗೀತೆ ಶ್ಲೋಕಗಳು 3–9 ಮತ್ತು 17–66 ಪ್ರಕಾರ ಸಾಕಾರ ರೂಪ ಆದ ನೀವು ನಮಗೆ ಪಾಪವಿಮೋಚನೆ ಮಾಡಿ ಮುಕ್ತಿಯನ್ನು ಒದಗಿಸಗಬೇಕೆಂದು ಈ ಜನ್ಮದಲ್ಲಿ ನಿಮ್ಮ ದರ್ಶನ ಭಾಗ್ಯವನ್ನು ಕೊಟ್ಟು, ಉಂಟಾಯಿತು. ಧನ್ಯನನ್ನು ಮಾಡೆಂದು ಮತ್ತೊಮ್ಮೆ ಸಾಷ್ಟಾಂಗ ವಂದನೆ ನಿಮ್ಮ ಪಾದಪದ್ಮಗಳಿಗೆ ಮಾಡುತ್ತಾ...

ನಿಮ್ಮ ಸಂಪೂರ್ಣ ವಿಶ್ವಾಸಿ

**ಧನುಂಜಯ್**

## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ

### ಪಾದ ಪದ್ಮಗಳಿಗೆ ನನ್ನ ಸಾಷ್ಟಾಂಗ ವಂದನೆಗಳು.

ಸಾಕ್ಷ್ಯಾತ್ತೂ ಖುದಾಗೆ (ಸಜ್ದಾ ಕರ್ತಾಹು) ಸಾಷ್ಟಾಂಗ ವಂದನಗಳು ಸಮರ್ಪಿಸಿಕೊಳ್ಳುತ್ತಿದ್ದೇನೆ.

ನಾನು ಅಂದರೆ ಜೀವಾತ್ಮನಾಗಿ ಇರುವ ನನ್ನ ಶರೀರ ವೊಂದರ ಹೆಸರು ಸಯ್ಯದ್ ಸಲ್ಮಾನ್‌ಷಾ S/O ಸಯ್ಯದ್ ಮುಸ್ಲೀಮ್‌ಷಾ ನನ್ನ ವಯಸ್ಸು 34 ವರ್ಷಗಳು. ವೃತ್ತಿ ಅಕ್ವೇರಿಯಂ (ಷೋಕೇಸುಗಳಲ್ಲಿ ಮೀನುಗಳು ಬೆಳಸಿ ಮಾರುವುದು) ಮತ ಮುಸ್ಲೀಮ್, ಓದು 9 ನೇ ತರಗತಿ ಇಂಗ್ಲೀಷು ಮೀಡಿಯಂ, ನಿವಾಸ ಬೆಂಗಳೂರು (ವಿವೇಕ್‌ನಗರ್).

ಪ್ರಸ್ತುತ ಸೆಂಟ್ರಲ್ ಜೈಲ್ ಬೆಂಗಳೂರಿನಲ್ಲಿ ಅಂಡರ್ ಟ್ರೈಲ್ ಖೈದೀಯಾಗಿ (UTP) ಇದ್ದೇನೆ. ನನ್ನ ಖೈದೀ ನೆಂಬರ್:7579/14 ರೂಮ್ ನೆಂಬರ್ 10ರಲ್ಲಿ ಜೈಲು ಜೀವನವನ್ನು ಅನುಭವಿಸುತ್ತಾ ಇದ್ದೇನೆ. ನನ್ನ ಕುಟುಂಬದ ವಿವರಗಳು ಏನೆಂದರೇ ನಮ್ಮ ಕುಟುಂಬದವರು ಕಳೆದ ಏಳು ತಲೆಮಾರಗಳಿಂದ ಮುಸ್ಲೀಮ್ ಪಂಡಿತರಾಗಿ (ಅಂದರೆ ಹಾಫಿಜೆ ಖುರಾನ್, ಆಲಿಮೆ ಖುರ್‌ಆನ್) ಇದ್ದಾರೆಂದು ತಿಳಿಸಿದ್ದಾರೆ. ಪ್ರಸ್ತುತ ನಾನು ಹೊರತು ನಮ್ಮ ಕುಟುಂಬದವರು ಎಲ್ಲರೂ ಮುಸ್ಲೀಮ್ ಪಾಂಡಿತ್ಯ ಹೊಂದಿದವರೇ. (ತಮ್ಮ ಗ್ರಂಥಗಳ ಮೂಲಕ ಜ್ಞಾನ ತಿಳಿದ ನಂತರ ಯಾರು ಪಂಡಿತರೋ ಎನ್ನುವ ವಿಷಯ ತಿಳಿದಿದೆ.)

ನಾನು ಸಾಧಾರಣ ಮುಸ್ಲೀಮ್ ಆಗಿ ಇದ್ದೂ, ನಮಾಜ್ ಮಾಡಿ ಕೊಳ್ಳುತ್ತಾ, ಪ್ರತಿ ದಿನ ಇರುತ್ತಾ ಜೀವನ ಕಳೆಯುತ್ತಾ ಇರುತ್ತಿದ್ದೆನು. ನನಗೆ ಸಾಧಾರಣವಾಗಿ ಸಹನೆ ಬಹಳ ಕಡಿಮೆ, ಕೋಪ ಹೆಚ್ಚಾಗಿ ಇರುತ್ತಿತ್ತು. ಹೆಚ್ಚು ಅಸಹನದಿಂದ, ಆವೇದನೆಯಿಂದ ಬಹಳ ಒತ್ತಡಕ್ಕೆ ಒಳಗಾಗುತ್ತಾ ಇರುತ್ತಿದ್ದೆನು. ಜ್ಞಾನಕ್ಕೆ ಸಂಬಂಧಿಸಿದ ಆಲೋಚನೆಗಳು ಬರುತ್ತಿದ್ದವು. ಆ ಕ್ರಮದಲ್ಲಿ ನಾನು ನಮ್ಮ ಮನೆಯಿಂದ ಯಾರಿಗೂ ಹೇಳದಂತೆ ಹೊರಟು ಹೋಗಿದ್ದೇನೆ. ಹಿಂದೂ

ಪುಣ್ಯ ಸ್ಥಳಗಳಾದ ದ್ವಾರಕಾ (ಗುಜರಾತ್) ನಗರಕ್ಕೆ ಹೋಗಿದ್ದೇನೆ. ಆ ನಂತರ ಗೋಲ್ಡೆನ್ ಟೆಂಪುಲ್ (ಅಮೃತ್‌ಸರ್), ಹರಿದ್ವಾರ್, ಋಷಿಕೇಷ್, ಢಿಲ್ಲೀಯಲ್ಲಿ ಇರುವ ಆಶ್ರಮಗಳು, ಮಂದಿರಗಳು, ದರ್ಗಾಗಳನ್ನು ಸಂದರ್ಶಿಸಿಕೊಳ್ಳುತ್ತಾ, ಹಿಂದೂಗಳ ಜೀವನ ವಿಧಾನಗಳು, ಆಚರಣೆಗಳು, ಪೂಜಾ ವಿಧಾನಗಳು ಮತ್ತು  ಮುಸ್ಲೀಮ್‌ರು ಜೀವನ ವಿಧಾನಗಳನ್ನು ಪರಿಶೀಲಿಸಿಕೊಳ್ಳುತ್ತಾ, ತಿಳಿದುಕೊಳ್ಳುತ್ತಾ, 12 ವರ್ಷಗಳು ನಮ್ಮ ಕುಟುಂಬದವರೊಂದಿಗೆ ಸಂಬಂಧ ಇಲ್ಲದಂತೆ ಕಳೆದು, ಪುನಃ 2008 ವರ್ಷದಲ್ಲಿ ಮನೆಗೆ ಬಂದಿದ್ದೇನೆ. ಮನೆಯಲ್ಲಿ ಇದ್ದು ಎರಡು ವರ್ಷಗಳು ಪ್ರೈವೇಟ್ ವರ್ಕ್ ಮಾಡಿಕೊಳ್ಳುತ್ತಾ ಇರುವಾಗ, ಒಬ್ಬ ಮುಸ್ಲೀಮ್ ಹುಡುಗಿಯೊಂದಿಗೆ ಪ್ರೀತಿಯಲ್ಲಿದ್ದು, ನಮ್ಮ ಕುಟುಂಬ ದವರೊಂದಿಗೆ ಆಕೆಯೊಂದಿಗೆ ಮದುವೆ ವಿಷಯವನ್ನು ಕುರಿತು ಚರ್ಚಿಸಿದರೇ ಅವರು ತಿರಸ್ಕರಿಸಿದ್ದಾರೆ. ಹುಡುಗಿ ಅವರ ತಾಯಿ ತಂದೆ ಸಹ ಒಪ್ಪಿಕೊಳ್ಳಲಿಲ್ಲ. ಆಗ ನಾನು ಹುಡುಗಿಯನ್ನು ಹೈದ್ರಾಬಾದ್‌ಗೆ ಕರೆದುಕೊಂಡು ಹೋಗಿ, ಅಲ್ಲಿ ಮದುವೆ ಮಾಡಿಕೊಂಡು, ಬಾಗ್ ಅಂಬರ್ ಪೇಟ್, ಹೈದ್ರಾಬಾದ್‌ನಲ್ಲಿ ನಾಲ್ಕು ತಿಂಗಳು ಇದ್ದು ಪುನಃ ಬೆಂಗಳೂರ್‌ಗೆ ಬಂದಿದ್ದೇನೆ. ನಾನು ನಮ್ಮ ಮನೆಗೆ ಹೋಗದಂತೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೆನು. ಅಂದಿನಿಂದ ನಾನು ಮುಸ್ಲೀಮ್ ಗ್ರಂಥಗಳು ಯಾವುವೂ ಓದಲಿಲ್ಲ. 2013 ನೇ ವರ್ಷದ ವರೆಗು ನಾನು ಸಾಧಾರಣ ಜೀವನ ಕಳೆಯುತ್ತಿರುವಾಗ ಕುಟುಂಬ ಕಲಹಗಳ ಕಾರಣದಿಂದ, ನಮ್ಮ ಚಿಕ್ಕಪ್ಪನನ್ನು ಹತ್ಯೆ ಮಾಡುವುದು ನಡೆದಿದೆ. ಅದು ನಾನು ಮಾಡಿದ್ದೇನೆಂದು ಯಾರಿಗೂ ತಿಳಿದಿಲ್ಲ. ಪುನಃ ಕುಟುಂಬ ಕಲಹಗಳ ಕಾರಣವಾಗಿ 2014 ರಲ್ಲಿ 7 ವರ್ಷಗಳು ಇರುವ ನನ್ನ  ತಂಗಿಯ ಮಗಳನ್ನು ಸಹ ನನ್ನ ಹೆಂಡತಿ ಸಹಾಯದಿಂದ ಹತ್ಯೆ ಮಾಡುವುದು ನಡೆದಿದೆ. ಆಗ ಹಳೆ ಹತ್ಯೆ ವಿಷಯವೂ ಸಹ ತಿಳಿದುಹೋಗಿದೆ. ಈ ಎರಡು ಹತ್ಯೆಗಳ ಕಾರಣವಾಗಿ ನಾನು, ನನ್ನ ಹೆಂಡತಿ 2014 ನೇ ವರ್ಷ ಜುಲೈ ತಿಂಗಳು 14ನೇ ತಾರೀಖಿನಂದು ಜೈಲಿಗೆ ಬರುವುದು ನಡೆದಿದೆ. ಅಂದಿನಿಂದ ಅಂದರೆ 14.07.2014 ರಿಂದ ಇಂದಿನವರೆಗು ಅಂದರೆ ನಾಲ್ಕು ವರ್ಷಗಳಿಂದ ಇಬ್ಬರೂ ಸಹ ಜೈಲಿನಲ್ಲೇ ಇದ್ದೇವೆ.

## ಖುರ್‌ಆನ್–ಹದೀಸು ಯಾವುದು ಮುಖ್ಯ?

ನಾನು ಜೈಲಿಗೆ ಬಂದ ನಂತರ ಜೈಲಲ್ಲೇ ಇರುವ ಕೆಲವು ಮಂದಿ ಮುಸ್ಲೀಮ್‌ರೊಂದಿಗೆ ಪರಿಚಯವಾಗಿ, 2014 ಜುಲೈ ರಿಂದ 2016 ಡಿಸೆಂಬರ್‌ವರೆಗು ಹದೀಸುಗಳು ಓದಿಕೊಳ್ಳುತ್ತಾ, ನಮಾಜ್ ಮಾಡುತ್ತಾ, ಪ್ರತಿ ದಿನ ಇದ್ದು ಕಳೆಯುತ್ತಿದ್ದೇನೆ. ನಾನು ಓದಿದ ಹದೀಸುಗಳು 1. ಸಹೀ ಬುಖಾರಿ (9 ವಾಲ್ಯೂಮ್‌ಗಳು), 2. ಅಬುದಾವೂದ್ 3. ತಿರ್ಮಿಜಿ 4. ಸಹಿ ಮುಸ್ಲೀಮ್ ಮತ್ತು ಮುಹಮ್ಮದ್ ಪ್ರವಕ್ತ ಜೀವನ ಚರಿತ್ರೆ (ಸರಾತುನ್ನಬಿ), ಅವರ ಶಿಷ್ಯರ ಖಲೀಫಾಗಳ ಚರಿತ್ರೆಗಳನ್ನು ಓದಿದ್ದೇನೆ. ಆದರೇ ಹದೀಸುಗಳು ಕೆಲವು ವಿಷಯಗಳಲ್ಲಿ ಒಂದರಲ್ಲಿ ಹೇಳಿರುವುದಕ್ಕೆ, ಮತ್ತೊಂದಕ್ಕೆ ವಿರುದ್ಧವಾಗಿ ಇರುತ್ತಿದ್ದವು. ನಮಾಜ್ ವಿಧಾನ ಒಂದು ಹದೀಸು ಮತ್ತೊಂದು ಹದೀಸು ಹೇಳುವ ವಿಧಾನಕ್ಕೆ ವಿರುದ್ಧವಾಗಿ ಇತ್ತು. ಜೈಲ್‌ನಲ್ಲಿ ಸಹ ನಾಲ್ಕು, ಐದು (ಫಿರ್ಕೇ) ವರ್ಗದವರು ಇದ್ದಾರೆ. ಒಟ್ಟಾರೆ ಮುಸ್ಲೀಮ್ ಸಮಾಜ 73 ವರ್ಗಗಳಾಗಿ ಇದ್ದಾರೆಂದು, 73ನೇ ವರ್ಗ ಒಂದು ಮಾತ್ರವೇ ಜನ್ನತ್ (ಸ್ವರ್ಗ) ದೊಳಗೆ ಹೋಗುತ್ತದೆಂದು ಹೇಳುತ್ತಿದ್ದರು. 73 ವರ್ಗಗಳಲ್ಲಿ ಆ ಒಂದು ಯಾವುದು ಎಂದರೆ ಎಲ್ಲರೂ ನಮ್ಮದು ನಮ್ಮದು ಮಾತ್ರವೇ ಜನ್ನತ್ ಒಳಗೆ ಹೋಗುತ್ತದೆ. ಉಳಿದ ವರ್ಗದವರು ಹೋಗುವುದಿಲ್ಲ ಎನ್ನುತ್ತಿದ್ದರು. ಯಾವ ವರ್ಗ ಜನ್ನತ್‌ನಲ್ಲಿ ಹೋಗುವುದಿಲ್ಲವೆಂದು ನಂಬಿಕೆ, ರುಜು ಏನು ಎಂದರೇ ಪ್ರಳಯ ದಿನ ಅಲ್ಲಾಹ್ ಹತ್ತಿರಕ್ಕೆ ಹೋದ ನಂತರ ತಿಳಿಯುತ್ತದೆ ಆದರೆ ಈಗ ಹೇಳಲಾರೆವು, ಯಾರಿಗೂ ತಿಳಿದಿಲ್ಲ ಎಂದು ಹೇಳುತ್ತಿದ್ದಾರೆ. ನಮಾಜ್ ಮಾಡಿಕೊಳ್ಳುತ್ತಾ, ರೋಜಾ ಇದ್ದೂ, ಬೋಧನೆಗಳು ಕೇಳುತ್ತಾ ಇದ್ದರೇ, ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟು ಸ್ವರ್ಗದೊಳಗೆ ಹೋಗುತ್ತೇವೆ ಎಂದು ಹೇಳುತ್ತಿದ್ದರು. ಜ್ಞಾನವನ್ನು ಕುರಿತು ಎಷ್ಟು ತಿಳಿದು ಕೊಳ್ಳುತ್ತಿದ್ದರೇ, ಹದೀಸುಗಳು ಓದುತ್ತಿರುವಾಗ ಪ್ರಶ್ನೆಗಳು, ಸಂದೇಹಗಳು ಇರುತ್ತಿದ್ದರೇ ಬೆಳೆಯುತ್ತಾ ಇವೆ ಆದರೇ ಸ್ಪಷ್ಟವಾದ ಸಮಾಧಾನ ದೊರಕುತ್ತಿಲ್ಲ. ತಿಳಿದವರೆಂದು ಹಿರಿಯರನ್ನು ಕೇಳಿದರೇ ಅವರು ಹೇಳುವ ಸಮಾಧಾನ ಅಸಂಪೂರ್ತಿಯಾಗಿ ಇತ್ತು. ಒಬ್ಬರು ಹೇಳುವುದಕ್ಕೂ ಮತ್ತೊಬ್ಬರು ಹೇಳುವುದಕ್ಕೂ ಹೊಂದಾಣಿಕೆ ಇಲ್ಲದಂತೆ ಇತ್ತು.

ಹೀಗೆ ನನ್ನ ಜೀವನ ಸಾಗುತ್ತಿರುವಾಗ 2016 ನೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಾನಿರುವ ರೂಮ್ (ಬ್ಯಾರಕ್) ಗೆ ಅಮೀರ್ ಅಲಿ ಎನ್ನುವ ವ್ಯಕ್ತಿ ಬಂದಿದ್ದಾನೆ. ಆತನು ಯಾವಾಗಲೂ ಏನೋ ಓದುತ್ತಾ, ಬರೆಯುತ್ತಾ ಇರುತ್ತಿದ್ದನು, ಯಾರೊಂದಿಗೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ನನಗೆ 2016 ನೇ ವರ್ಷ ನವಂಬರ್ ತಿಂಗಳಲ್ಲಿ ವಿಪರೀತವಾದ ಬಾಕ್‌ಪೆಯಿನ್ ಬಂದು ಬಹಳ ಬಾಧೆ ಬೀಳುತ್ತಿದ್ದೆ. ಆಗ ನನಗೆ ಬೇರೇ ಅವರಿಂದ ಅಮೀರ್ ಅಲಿಗೆ ತೋರಿಸು, ಆತನು ಯಾವುದೋ ಟ್ರೀಟ್‌ಮೆಂಟ್ ಮಾಡುತ್ತಾನಂತೆ ಎಂದು ತಿಳಿದು ಆತನಿಗೆ ನನ್ನ ಪ್ರಾಬ್ಲಮ್ ಕುರಿತು ಹೇಳಿದ್ದೇನೆ. ಆಗ ಆತನು ನನ್ನನ್ನು ಚೆಕ್ ಮಾಡಿ ಯಾವುದೋ ಪಾಯಿಂಟ್‌ಗಳ ಮೇಲೆ ಒತ್ತಿ ಟ್ರೀಟ್‌ಮೆಂಟ್ ಮಾಡಿದ್ದಾನೆ. ಆಗ ಹಿಂದೆಲೇ ನೋವು ಕಡಿಮೆಯಾಗಿ ರಿಲೀಫ್ ಆಯಿತು. ಅದರಿಂದ ಅವರೊಂದಿಗೆ ಪರಿಚಯ ಬೆಳೆದು ಜ್ಞಾನವನ್ನು ಕುರಿತು ಕೇಳುವುದು ನಡೆದಿದೆ. ಆಗ ಆತನು ಜ್ಞಾನವನ್ನು ಕುರಿತು ತಿಳಿದುಕೊಳ್ಳಬೇಕೆಂದು ಇದ್ದರೇ ಬಂದು ಕುಳಿತುಕೊಳ್ಳಿ ಚರ್ಚಿಸಿಕೊಳ್ಳೋಣ ಎಂದು ಅಂದಿದ್ದಾನೆ. ಅಂದಿನಿಂದ (2016 ಡಿಸೆಂಬರ್‌ಯಿಂದ) ಪ್ರತಿ ದಿನ ಸಂಜೆ ಲಾಕಪ್ ನಂತರ 7 ಗಂಟೆಯಿಂದ 9 ಗಂಟೆಯವರೆಗು, ನನಗಿರುವ ಸಂಶಯಗಳಿಗೆ ಖುರ್‌ಆನ್ ಆಯತ್‌ಗಳ ಮೂಲಕ ತೋರಿಸಿ ವಿವರಿಸುತ್ತಿದ್ದರು. ಒಂದು ತಿಂಗಳ ದಿನಗಳಲ್ಲಿ ನನ್ನ ಸಂದೇಹಗಳಿಗೆ ಬಹಳ ಉತ್ತರಗಳು ಸಿಗುತ್ತಿದ್ದವು. ಅಷ್ಟೇ ಅಲ್ಲದೆ ಎಷ್ಟೋ ತಿಳಿಯದ ರಹಸ್ಯಗಳು ಸಹ ತಿಳಿಸುತ್ತಿದ್ದರು. ಖುರ್‌ಆನ್‌ನಲ್ಲಿ ಶರೀರವನ್ನು ಕುರಿತಿರುವ ಆಯತ್‌ಗಳು ಹೀಗೆ ಇವೆಯೆಂದು, ಅಲ್ಲಾಹ್ ವಿಧಾನ ಹೀಗೆ ಇದೆಯೆಂದು ವಿವರಿಸುತ್ತಿದ್ದರು. ಇಲ್ಲಿಯವರೆಗು ಯಾರೂ ಹೇಳದಂತೆ ಇರುವವು, ಯಾರಿಗೂ ತಿಳಿಯದಿರುವವು ಹೇಳುತ್ತಿದ್ದರೇ ಒಟ್ಟಾರೆ ಸತ್ಯ, ನಿಜವಾದುದೆಂದು ಅನಿಸಿತು. ಆಗ ಇನ್ನೂ ಹೆಚ್ಚಿನ ಜ್ಞಾನ ವಿಷಯಗಳು ತಿಳಿದುಕೊಳ್ಳಬೇಕೆಂದು ಹಗಲು ಕೂಡಾ ಜ್ಞಾನವನ್ನು ಕುರಿತು ಹೇಳೆಂದು ಕೇಳುತ್ತಿದ್ದೆನು.

ಆಗ ಆತನು ಸುರಾ 3–7 ಆಯತ್‌ನ್ನು ತೋರಿಸಿ ಖುರ್‌ಆನ್‌ನಲ್ಲಿ ಮುಹ್ಕಮಾತ್ ಮತ್ತು ಮುತಷಾಬಿಹಾತ್ (ಸ್ಥೂಲ,ಸೂಕ್ಷ್ಮ) ಆಯತ್‌ಗಳು ಇವೆ,

ಇವು ಇಲ್ಲಿಯವರೆಗು ಮುಸ್ಲೀಮ್‌ರಿಗೆ ತಿಳಿಯದೆ ಖುರ್‌ಆನ್ ಒಟ್ಟಾರೆ ಆಯತ್‌ಗಳನ್ನು ಸ್ಥೂಲವಾಗಿ ಬರೆದುಕೊಂಡಿದ್ದರೆ. ಅದಕ್ಕೇ ಖುರ್‌ಆನ್ ಯಾರಿಗೂ ಸರಿಯಾಗಿ ಅರ್ಥವಾಗದೆ, ಯಾರಿಗೆ ಅರ್ಥವಾಗಿರುವುದು ಅವರು ಹದೀಸುಗಳ ರೂಪದಲ್ಲಿ ಬರೆದುಕೊಂಡು, 72 ವರ್ಗಗಳಾಗಿ ಸೀಳಿಹೋಗಿದ್ದಾರೆ. ಈ ಸೂಕ್ಷ್ಮ ಖುರ್‌ಆನ್ ಆಯತ್‌ಗಳನ್ನು ಪ್ರಬೋಧಾನಂದ ಯೋಗೀಶ್ವರರು ಎನ್ನುವ ಒಬ್ಬ ಸ್ವಾಮಿಯವರು ಇವುಗಳನ್ನು ಕುರಿತು ವಿವರಣೆಯನ್ನು ಗ್ರಂಥದಲ್ಲಿ ಬರೆದಿದ್ದಾರೆ. ಅವರ ಮೂಲಕವೇ ನನಗೆ ಈ ಜ್ಞಾನ ಸಿಕ್ಕಿದೆಯೆಂದು, ಅವರು ಮೂರು ಮತಗಳ ಜ್ಞಾನ ಹೇಳುತ್ತಾರೆ, ಬಹಳ ಗ್ರಂಥಗಳನ್ನು ಬರೆದಿದ್ದಾರೆ. ನಿನಗೆ ಶ್ರದ್ಧೆ ಇದ್ದರೇ ಜ್ಞಾನ ತಿಳಿದುಕೊಳ್ಳಬೇಕೆಂದು ಅನಿಸಿದರೇ, ನಿನಗೆ ಸ್ವಾಮಿಯವರು ಬರೆದ ಗ್ರಂಥಗಳು ನನ್ನ ಹತ್ತಿರ ಇವೆ. ಓದುತ್ತೇನೆಂದರೆ ಕೊಡುತ್ತೇನೆ ಅವು ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿಯೇ ಇವೆ. ಕೆಲವು ಉರ್ದೂ ಭಾಷೆಯಲ್ಲೂ ಇವೆ ಎಂದು ಹೇಳಿದ್ದಾರೆ. ಆಗ ನಾನು ನನಗೆ ಕನ್ನಡ ಭಾಷೆ ಬರುತ್ತದೆಂದು ಹೇಳಿದ್ದೇನೆ. ಆಗ ನನಗೆ ಮೊದಲಬಾರಿಯಾಗಿ 2017 ನೇ ವರ್ಷ ಜನವರಿಯಲ್ಲಿ **"ಧರ್ಮಶಾಸ್ತ್ರ ಯಾವುದು"** ಎನ್ನುವ ಗ್ರಂಥವನ್ನು ಕೊಟ್ಟಿದ್ದಾರೆ. ಅಂದಿನವರೆಗು ನನಗೆ ಧರ್ಮ ಎಂದರೇ, ಶಾಸ್ತ್ರ ಎಂದರೇ ಕೂಡಾ ಏನೂ ತಿಳಿದಿಲ್ಲ. ಆದರೇ ಈ ಗ್ರಂಥ ಓದಿದ ನಂತರ ಧರ್ಮ, ಶಾಸ್ತ್ರ ಎಂದರೇ ಏನೋ ತಿಳಿದಿದೆ. ಅಷ್ಟೇ ಅಲ್ಲದೆ ಬಹಳ ಜ್ಞಾನ ವಿಷಯಗಳು ತಿಳಿದಿವೆ. ಎಲ್ಲಾ ವಾಸ್ತವಗಳಾಗಿ ಅರ್ಥವಾಗಿವೆ. ಉಳಿದ ಗ್ರಂಥಗಳು ಕೂಡಾ ಓದಬೇಕೆನ್ನುವ ಶ್ರದ್ಧೆ ಬೆಳಿಯಿತು. ನಾನು 2017 ನೇ ವರ್ಷ ಜನವರಿ ಯಿಂದ 2018 ನೇ ವರ್ಷ ಏಪ್ರಿಲ್ ವರೆಗು ಓದಿದ ಒಟ್ಟಾರೆ ಗ್ರಂಥಗಳು 1. ಧರ್ಮಶಾಸ್ತ್ರ ಯಾವುದು? 2. ಪ್ರವಕ್ತರು ಯಾರು? 3. ಕರ್ಮಪತ್ರ 4. ಒಂದು ಮಾತು ಮೂರು ಗ್ರಂಥಗಳು 5. ದೇವರ ತೀರ್ಪು (ಜಡ್ಜಿಮೆಂಟ್ ಆಫ್ ಗಾಡ್) 6. ಮೂರು ಗ್ರಂಥಗಳು ಇಬ್ಬರು ಗುರುಗಳು ಒಬ್ಬ ಬೋಧಕನು 7. ಒಬ್ಬನೇ ಇಬ್ಬರು 8. ದೇವರ ಆಗಮನಕ್ಕೆ ಇದು ಸಮಯವಲ್ಲವೆ? 9. ಏಸು ಮರಣಿಸಿದ್ದಾನಾ ? ಹತವಾಗಿದ್ದಾನಾ? 10. ತ್ರೈತಾಕಾರ ರಹಸ್ಯ 11. ನಿನಗೆ ನನ್ನ ಲೇಖ 12. ಗೀತಾ ಪರಿಚಯ 13. ಸಾಯಿಬಾಬಾ ದೇವರಾ ಅಲ್ಲವಾ?

14. ಮಂತ್ರ–ಮಹಿಮೆ 15. ದೇವಾಲಯ ರಹಸ್ಯಗಳು 16. ಇಂದೂ ಸಂಪ್ರದಾಯಗಳು 17. ದೆವ್ವಗಳ–ಭೂತಗಳ ಯದಾರ್ಥ ಸಂಘಟನೆಗಳು 18. 1058 ಆಧ್ಯಾತ್ಮಿಕ ಪ್ರಶ್ನೆ–ಉತ್ತರಗಳು 19. ಭಗವದ್ಗೀತೆ 20. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ? 21. ದೇವರ ಚಿಹ್ನೆ 22. ಯಾವುದು ನಿಜವಾದ ಜ್ಞಾನ 23. ಮರಣದ ನಂತರ ಜೀವನ 24. ಜನನ ಮರಣ ಸಿದ್ಧಾಂತ 25. ಪುನರ್ಜನ್ಮ ರಹಸ್ಯ 26. ಸಮಾಧಿ 27. ವಿಶ್ವವಿದ್ಯಾಲಯ 28. ಸುಬೋಧ 29. ಶ್ರೀ ಕೃಷ್ಣನು ದೇವರಾ ಭಗವಂತನಾ? 30. ಹಿಂದೂ ಮತದಲ್ಲಿ ಸಿದ್ಧಾಂತ ಕರ್ತರು 31. ಧ್ಯಾನಂ–ಪ್ರಾರ್ಥನ–ನಮಾಜ್ 32. ಒಗಟುಗಳ ಜ್ಞಾನ 33. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು 34. ಹಿಂದೂ ಮತದಲ್ಲಿ ಕುಲವಿವಕ್ಷ 35. ಶಿಲುಬೆ ದೇವರಾ? 36. ವಾರ್ತಕನು – ವರ್ತಕನು 37. ಪ್ರಬೋಧ 38. ನಮ್ಮ ಹಬ್ಬಗಳು 39. ತಾಯಿ ತಂದೆ 40. ತ್ರೈತಾರಾಧನೆ 41. ಭಗವಾನ್ ರಾವಣ ಬ್ರಹ್ಮ 42. ಒಬ್ಬ ವ್ಯಕ್ತಿ ಎರಡು ಕೋನಗಳು 43. ಪ್ರಥಮ ದೈವ ಗ್ರಂಥ ಭಗವದ್ಗೀತೆ 44. ಮತ ಪಥ 45. ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ಎರಡನೆಯದು ವಜ್ರ ವಾಕ್ಯಗಳು ಮತ್ತು 46. ದ್ವಿತೀಯ ಗ್ರಂಥ ಬೈಬಲ್ ಕೂಡಾ ತೆಲುಗು ಭಾಷೆಯಲ್ಲಿನವು ಉರ್ದೂದಲ್ಲಿ ಟ್ರಾನ್ಸ್‌ಲೇಷನ್ ಮಾಡಿ ಪ್ರತಿ ದಿನ ಎರಡು ಗಂಟೆಗಳು ಹೇಳುತ್ತಿದ್ದರು. ಉಳಿದ ಗ್ರಂಥಗಳಲ್ಲಿ ಇರುವ ಡೌಟ್ಸ್ ಸಹ ಅಮೀರ್ ಅಲೀಯೊಂದಿಗೆ ಕೇಳಿ ತಿಳಿದು ಕೊಳ್ಳುತ್ತಿದ್ದೆನು.

ಮೇಲೆ ತಿಳಿಸಿದ ಗ್ರಂಥಗಳು ಒಂದೊಂದು ಗ್ರಂಥ ಓದುತ್ತಾ ಇದ್ದರೇ ನನಗೆ ಪ್ರತಿ ಒಂದು ಗ್ರಂಥದಲ್ಲಿ ತಿಳಿಯುವ ಜ್ಞಾನದೊಂದಿಗೆ ಆನಂದದಿಂದ ಹೊಸ ಅನುಭೂತಿಗಳು ಹೊಂದುತ್ತಾ ನನ್ನ ಹೃದಯ ರೋಮಾಂಚನವಾಗುತ್ತಿತ್ತು. ನನ್ನ ಗತ ಜೀವನದಲ್ಲಿ ಇರುವ ಕೋಪ ಕಡಿಮೆಯಾಗಿಹೋಗಿದೆ, ಸಹನೆ ಬೆಳೆಯಿತು. ನನ್ನಲ್ಲಿ ಊಹಿಸದ ಬದಲಾವಣೆ ಬಂದಿತು. ನನಗೆ ತಮ್ಮ ಜ್ಞಾನದ ಮೂಲಕ ಹೊಸ ಜನ್ಮ (ಅಂದರೇ ಬಿಂದು ಪುತ್ರನಿಂದ ನಾದ ಪುತ್ರನ ಜನ್ಮ) ಪ್ರಸಾದಿಸಲ್ಪಟ್ಟಿದೆಯೆಂದು ಆನಂದವಾಗಿ ಇದ್ದೇನೆ.

ಸಾಕ್ಷಾತ್ತೂ ಖುದಾ ಹೇಳಿದ ಜ್ಞಾನದ ಮೂಲಕ ತಿಳಿದ ನಿಗೂಢ ರಹಸ್ಯ ನಿಜ ಏನೆಂದರೆ ಮೂರು ಆತ್ಮಗಳ ಜ್ಞಾನ (ಜೀವಾತ್ಮ, ಆತ್ಮ, ಪರಮಾತ್ಮ) ಮೂರು ಗ್ರಂಥಗಳಲ್ಲಿ ಇದೆಯೆಂದು ಭಗವದ್ಗೀತೆ 14–16, 17 ಶ್ಲೋಕಗಳು ಬೈಬಲ್ ಮತ್ತಾಯ ಸುವಾರ್ತೆ 28–19 ವಾಕ್ಯ, ಖುರ್‌ಆನ್‌ನಲ್ಲಿ 50–21 ಆಯತ್‌ಗಳ ಮೂಲಕ ತಿಳಿದಿದೆ. ಮೂರು ದೈವ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಜ್ಞಾನ ದೇವರು ಒಬ್ಬನೇ, ದೇವರನ್ನು ಸೇರಬೇಕಾದ ಗಮ್ಯ ಕೂಡಾ ಒಂದೇ ಎನ್ನುವ ವಿಷಯ ತಿಳಿದುಹೋಗಿದೆ. ಮತಗಳನ್ನು ಮಾನವರು ತಯಾರು ಮಾಡಿಕೊಂಡಿದ್ದಾರೆಂದು ಅರ್ಥವಾಗಿದೆ.

ನಾನು ಮುಸ್ಲೀಮ್ ಆಗಿ ನನ್ನ ಜವಾಬ್ದಾರಿ ನಮಾಜ್, ರೋಜಾ, ಜಕಾತ್, ಹಜ್ ಮಾಡಿ, ಹದೀಸುಗಳಲ್ಲಿ ತಿಳಿಸಿದ ಪ್ರವಕ್ತ ಆದೇಶಗಳನ್ನು (ಸುನ್ನತ್‌ಗಳನ್ನು) ಆಚರಿಸಿದರೇ ನಾನು ನಿಜವಾದ ಮುಸ್ಲೀಮ್ ಆಗಿ ಬದಲಾಗಿ ಜನ್ನತ್ (ಸ್ವರ್ಗದಲ್ಲಿ) ಸೇರಿ ಹೋಗುತ್ತೇನೆಂದು ನಂಬಿದ್ದೇನೆ. ಆದರೇ ಖುದಾ ಬರೆದ ಗ್ರಂಥಗಳು ಓದಿದ ನಂತರ ನಿಜವಾದ ಜ್ಞಾನ ತಿಳಿದ ನಂತರ, ಅಸಲು ನಿಜವಾದ ಮುಸ್ಲೀಮ್ ಯಾರೋ ತಿಳಿದುಹೋಗಿದೆ. ನಿಜವಾದ ನಮಾಜ್, ಜಕಾತ್, ರೋಜಾ, ಹಜ್, ಅಲ್ಲಾಹ್ ಸೃಷ್ಠಿ ಆದಿಯಲ್ಲಿ ಇರುವ ಹೆಸರುಗಳು ಎಂದು ಅವುಗಳನ್ನು ಕುರಿತು ವಿವರಣೆ ಓದಿದ ನನಗೆ ಯಾವುದೋ ರಹಸ್ಯ ನಿಧಿ (ದೈವನಿಧಿ) ಸಿಕ್ಕಿದಷ್ಟು ಆನಂದ ಉಂಟಾಗಿದೆ. ಜನ್ನತ್ ದೋಜಖ್ (ಸ್ವರ್ಗ, ನರಕ) ಅಂದರೇ ಏನು? ಮೋಕ್ಷ (ಆಖಿರತ್) ಅಂದರೇ ಏನು? ಅವು ಎಲ್ಲಿ ಇವೆ? ಹೇಗೆ ಇವೆ? ಎನ್ನುವ ವಿಷಯ ತಿಳಿದಿದೆ. ನಮ್ಮ ಮುಸ್ಲೀಮ್‌ರಿಗೆ ತಿಳಿಯದ ಮೋಕ್ಷ (ಆಖಿರತ್, ನಜಾತ್) ಕೂಡ ಇದೆಯೆಂದು ಸ್ವಾಮಿಯವರ ಗ್ರಂಥಗಳ ಜ್ಞಾನದ ಮೂಲಕ ತಿಳಿದು ಆನಂದಭರಿತನಾಗಿದ್ದೇನೆ.

ತೌರಾತ್ ಎಂದರೇ ಭಗವದ್ಗೀತೆ ಎಂದು ಪ್ರಪಂಚಕ್ಕೇ ತಿಳಿಯದ ದೊಡ್ಡ ರಹಸ್ಯ ಜ್ಞಾನ ಹೇಳಿದ ಪ್ರಪಂಚದಲ್ಲೇ ಮೊದಲ ವ್ಯಕ್ತಿಯಾಗಿ ಕೀರ್ತಿ ಗಳಿಸಿದ್ದಾರೆ. ಖುರ್‌ಆನ್‌ನಲ್ಲಿ ತೌರಾತ್ ಎಂದರೇ ಏನೋ 5–44, 46, 48, 68 ಮತ್ತು 62–5 ಆಯತ್‌ಗಳ ಮೂಲಕ ರುಜು ಮಾಡಿದ್ದಾರೆ. ಖುರ್‌ಆನ್‌ನಲ್ಲಿ

25–1, 2–53, 8–8 ಪ್ರಕಾರ ಘುರ್‌ಖಾನ್) ಒಂದೇ ಎಂದು, ಆ ಆಯತ್‌ಗಳ ಮೂಲಕ ತೌರಾತ್ (ಭಗವದ್ಗೀತೆ) ಯಲ್ಲಿ ಇರುವ ಜ್ಞಾನ, ಖುರ್‌ಆನ್‌ನಲ್ಲಿ ಇರುವ ಜ್ಞಾನ ಒಂದೇಯೆಂದು ಮತ್ತು ತೌರಾತ್ ಖುರ್‌ಆನ್‌ಗೆ ಮಾತೃ ಗ್ರಂಥ (ಉಮ್ಮುಲ್ ಕಿತಾಬ್) ಎಂದು, ಬೈಬಲ್ ಕೂಡಾ ಭಗವದ್ಗೀತೆಯಲ್ಲಿ ಭಾಗವೇಯೆಂದು ಪರಮ ರಹಸ್ಯ ತಿಳಿದಿದೆ. ಮೂರು ಗ್ರಂಥಗಳು ಒಂದೇ ದೈವವನ್ನು ಕುರಿತು, ಮೂರು ಆತ್ಮಗಳ ಕುರಿತು ಹೇಳಿರುವವೆಂದು ಜೀವಾತ್ಮಗಳಾದ ನಮಗೆ ಮುಕ್ತಿಯನ್ನು ಪ್ರಸಾದಿಸುವವೇ ಮೂರು ಗ್ರಂಥಗಳು ಎಂದು ಸ್ವಾಮಿ ಅವರ ಜ್ಞಾನದ ಮೂಲಕ ತಿಳಿದಿದೆ.

ತೌರಾತ್ (ಭಗವದ್ಗೀತೆ)ಯಲ್ಲಿ ಹೇಳಿದ ಪ್ರಕಾರ ಧರ್ಮಗಳು, ಅಧರ್ಮಗಳು ಅಂದರೇ ಏನು, ಧರ್ಮಗಳು (ಬ್ರಹ್ಮ, ಕರ್ಮ, ಭಕ್ತಿ ಯೋಗಗಳು) ಆಚರಿಸಿದರೇ ಮೋಕ್ಷ ಬರುತ್ತದೆಂದು, ಅಧರ್ಮಗಳು (ದಾನಗಳು, ವೇದಗಳು, ಯಜ್ಞಗಳು, ತಪಸ್ಸುಗಳು) ಆಚರಿಸಿದರೇ ಪಾಪ, ಪುಣ್ಯ ಕರ್ಮಗಳು ಅಂಟಿಕೊಂಡು ಜನ್ಮಗಳು ಉಂಟಾಗುತ್ತವೆಂದು ತಿಳಿದಿದೆ. ಧರ್ಮಗಳು ತಿಳಿದು ಆಚರಿಸಿದರೇ ಮೋಕ್ಷ ಪ್ರಾಪ್ತಿಸುತ್ತದೆ ಎಂದು, ಈ ವಿಷಯವೇ ಖುರಾನ್‌ನಲ್ಲಿ ಇದೆಯೆಂದು ತಿಳಿದಿದೆ.

ಭಗವದ್ಗೀತೆಯೇ ತೌರಾತ್ ಗ್ರಂಥ ಎಂದು, ತೌರಾತ್ ಹೆಸರಿನೊಂದಿಗೆ ಗ್ರಂಥ ಎಲ್ಲೂ ಇಲ್ಲವೆಂದು ಬೈಬಲ್‌ನಲ್ಲಿ ಮೋಷೇಗೆ, ಖುರ್‌ಆನ್‌ನಲ್ಲಿ ಮೂಸಾಗೆ ಕೊಡಲಾಗಿರುವುದೇ ಭಗವದ್ಗೀತೆ ಗ್ರಂಥ ಎಂದು ಖುರಾನ್ 6–91 ಆಯತ್ ಮೂಲಕ ತಿಳಿದಿದೆ. ಸೃಷ್ಠಿ ಆದಿಯಲ್ಲಿ ದೇವರ ಜ್ಞಾನ ಭಗವದ್ಗೀತೆ ಶ್ಲೋಕ 4–1 ರಿಂದ ಪರಮಾತ್ಮ ಮೊದಲು ಸೂರ್ಯನಿಗೆ ಹೇಳಿದ್ದಾನೆ ಎಂದು, ಸೂರ್ಯನು ಮನುವಿಗೆ ಹೇಳಿದ್ದಾನೆಂದು, ಮನುವಿನಿಂದ ಇಕ್ಷ್ವಾಕನೆಂಬ ರಾಜನಿಗೆ ತಿಳಿದಿದೆಯೆಂದು, ಅದೇ ಜ್ಞಾನ (ಜಪರ ಜ್ಞಾನ) 5000 ವರ್ಷಗಳ ಕೆಳಗೆ ಅರ್ಜುನನಿಗೆ ಶ್ರೀಕೃಷ್ಣ ಭಗವಾನ್ ಹೇಳಿದ್ದಾರೆಂದು, ಶ್ರೀ ಕೃಷ್ಣ ಭಗವಾನನೇ ಮೋಷೇ (ಮೂಸಾ) ಗೆ ಸ್ವಪ್ನದಲ್ಲಿ ಭಗವದ್ಗೀತೆ ಗ್ರಂಥವನ್ನು ತೌರಾತ್ ಹೆಸರಿನಿಂದ ಕೊಟ್ಟಿದ್ದಾರೆಂದು ನಂತರ ಶ್ರೀಕೃಷ್ಣ ಭಗವಾನನೇ ಏಸುಪ್ರಭುವಾಗಿ

ಬಂದು ಬೈಬಲ್ (ಇಂಜೀಲ್) ಜ್ಞಾನ ಹೇಳಿದ್ದಾರೆಂದು ನಂತರ ಸೂರ್ಯನೇ ಹೆಸರು ಬದಲಾಯಿಸಿಕೊಂಡು ಜಿಬ್ರಯೇಲ್ ಆಗಿ ತೆರೆ ಹಿಂಬದಿಯಿಂದ ಮಹಮ್ಮದ್ ಪ್ರವಕ್ತರಿಗೆ ಹೇಳಿದ್ದಾರೆ ಎಂದು ತಮ್ಮ ಗ್ರಂಥಗಳ ಮೂಲಕ ತಿಳಿದಿದೆ. ಯಾರಿಗೂ ತಿಳಿಯದ ಪರಮ ರಹಸ್ಯಗಳು ತಿಳಿದು ಆನಂದಭರಿತನಾಗಿದ್ದಾನೆ.

ತೌರಾತ್ (ಭಗವದ್ಗೀತೆ) ಪ್ರಕಾರ ನನಗೆ ತಿಳಿದ ನಿಗೂಢ ಜ್ಞಾನ ಸೃಷ್ಠಿ ಆದಿಯಲ್ಲಿ ಪರಮಾತ್ಮ ನಾಲ್ಕು ಭಾಗಗಳು (ಪ್ರಕೃತಿ, ಜೀವಾತ್ಮ, ಆತ್ಮ, ಪರಮಾತ್ಮ) ಆಗಿ ವಿಭಜಿಸಲ್ಪಟ್ಟಿದ್ದಾನೆ ಎಂದು, ಪ್ರಕೃತಿ ಎನ್ನುವುದು ಚರ, ಅಚರ ಪ್ರಕೃತಿಯಾಗಿ ಎರಡು ಭಾಗಗಳಾಗಿ ಬದಲಾಗಿದೆಯೆಂದು, ಚರ ಪ್ರಕೃತಿಯಾಗಿ 24 ಭಾಗಗಳ ಶರೀರ, ಅದರಲ್ಲಿ ಜೀವಾತ್ಮ, ಆತ್ಮ, ಪರಮಾತ್ಮಗಳು ಬೆರೆತು 27 ಭಾಗಗಳು ಎಂದು, ಪ್ರಕೃತಿಯೇ ಮಾಯೆಯಾಗಿ ಗುಣಗಳ ರೂಪದಲ್ಲಿ (ಸೈತಾನ್) ತಲೆಯಲ್ಲಿ ಇದೆಯೆಂದು, ಬ್ರಹ್ಮ, ಕಾಲ, ಕರ್ಮ, ಗುಣ ಚಕ್ರಗಳು ಮನುಷ್ಯ ಕರ್ಮಗಳು ಅನುಭವಿಸುವುದಕ್ಕೆ ಮೂಲ ಎಂದು, ಜೀವಾತ್ಮ ಆದ ನಾನು ಗುಣಚಕ್ರದಲ್ಲಿ ರವ್ವಷ್ಟು ಆಗಿ ಇದ್ದೇನೆಂದು, ಆತ್ಮ ಶರೀರವೆಲ್ಲಾ ವ್ಯಾಪಿಸಿ ಇದೆಯೆಂದು, ಖುರಾನ್ 6–95 ಆಯತ್ ಪ್ರಕಾರ ಜೀವಾತ್ಮಗಳ ಜನ್ಮಗಳು ಮೂರು ವಿಧಗಳು ಅಂಡಜ, ಪಿಂಡಜ, ಉದ್ಭಿಜಗಳಾಗಿ ಇವೆಯೆಂದು, ಕರ್ಮಗಳು ಮೂರು ವಿಧಗಳು ಪ್ರಾರಬ್ಧ, ಆಗಾಮಿಕ, ಸಂಚಿತ ಕರ್ಮಗಳೆಂದು, ಮರಣಗಳು ಕೂಡಾ (ಮೂರು+ಒಂದು) ನಾಲ್ಕು ಎಂದು ಕಾಲ, ಅಕಾಲ, ತಾತ್ಕಾಲಿಕ, ಆಖರಿ ಮರಣಗಳು ಎಂದು ಅದ್ಭುತವಾದ ಅಗೋಚರ ಜ್ಞಾನ ತಿಳಿದಿದೆ.

ನಾನು ಜೀವಾತ್ಮನೆಂದು, ಪರಮಾತ್ಮ ಅಂಶನೆಂದು, ಕರ್ಮ ಬಂಧದಲ್ಲಿ ಸಿಲುಕಿಕೊಂಡು ಪ್ರಕೃತಿ ಕೈಯ್ಯಲ್ಲಿ ಇದ್ದೇನೆಂದು, ಕರ್ಮಗಳನ್ನು ನಾಶ ಮಾಡಿಕೊಂಡರೇನೇ ಜನ್ಮ, ಕರ್ಮ ಬಂಧನಗಳಿಂದ ಮುಕ್ತಿ ಉಂಟಾಗುತ್ತದೆಂದು, ಮುಕ್ತಿ ಉಂಟಾಗಬೇಕೆಂದರೇ ಭಗವದ್ಗೀತೆಯಲ್ಲಿ ಭಗವಾನನು ಹೇಳಿದ ಧರ್ಮಗಳು ಬ್ರಹ್ಮ, ಕರ್ಮ, ಭಕ್ತಿ ಯೋಗಗಳ ಮೂಲಕವೇ ಮೋಕ್ಷ ಪ್ರಾಪ್ತಿಸುತ್ತದೆ ಎಂದು ತಿಳಿದಿದೆ. 1. ಬ್ರಹ್ಮಯೋಗ ಮನಸ್ಸನ್ನು ನಿಯಂತ್ರಿಸುವುದು ಎಂದು 2. ಕರ್ಮಯೋಗ ಅಹಂ (ಅಹಂಭಾವಂ) ಇಲ್ಲದಂತೆ, ನಾನೇ ಕಾರ್ಯಗಳನ್ನು

ಮಾಡುತ್ತಿದ್ದೇನೆನ್ನುವ ಭಾವ ಇಲ್ಲದಂತೆ ಕಾರ್ಯಗಳು ಮಾಡುವುದು ಎಂದು 3. ಭಕ್ತಿಯೋಗ ಧರ್ಮಗಳ ಪ್ರಚಾರ, ದೈವ ಸೇವೆ ಎಂದು ಈ ಮೂರರ ಮೂಲಕವೇ ಕರ್ಮಗಳು ನಾಶ ಮಾಡಿಕೊಂಡು, ಜನ್ಮಗಳು ಇಲ್ಲದಂತೆ ಮಾಡಿ ಕೊಂಡು ಮೋಕ್ಷ ಹೊಂದಬೇಕೆಂದು ತಿಳಿದಿದೆ.

ಸೂಕ್ಷ್ಮದಲ್ಲಿ ಮೋಕ್ಷ ಎಂದರೇ ಭಗವಂತನನ್ನು ತಿಳಿದು ಸಾಕಾರವನ್ನು ಆರಾಧಿಸುವುದು ಭಗವದ್ಗೀತೆ ಶ್ಲೋಕಗಳು, 4–9, ಮತ್ತು 18–66 ಮೂಲಕ ತಿಳಿದಿವೆ. ಶಿಶು ಜನ್ಮಿಸಿದ ನಂತರ ಮೊದಲ ಶ್ವಾಸೆಯಲ್ಲಿ ಜೀವಾತ್ಮ ಪ್ರವೇಶಿಸಿದ ನಂತರವೇ ಪ್ರಾಣ ಬರುತ್ತದೆಂದು, ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ ಎರಡು ಶರೀರಗಳು ಇವೆಯೆಂದು ಹಾಗೇ ಸ್ಥೂಲ, ಸೂಕ್ಷ್ಮ ಕರ್ಮಗಳು ಕೂಡಾ ಎರಡು ವಿಧಗಳು ಎಂದು, ದೆವ್ವಗಳು, ಭೂತಗಳ ಕುರಿತು ರಹಸ್ಯಗಳು ತಿಳಿದಿವೆ. ಬ್ರಹ್ಮವಿದ್ಯೆ ಶಾಸ್ತ್ರ ಆಧ್ಯಾತ್ಮಿಕ ಜ್ಞಾನನಿಧಿ ಎಂದು ತಿಳಿದುಹೋಗಿದೆ. ಮನುಷ್ಯ ಶರೀರದಲ್ಲಿನ ಬ್ರಹ್ಮನಾಡಿಯಲ್ಲಿನ, ವಿಶ್ವ ಮಿಳಿತವಾಗಿದೆಯೆಂದು, ಷಟ್ ಶಾಸ್ತ್ರಗಳು, ಸರ್ವ ವಿದ್ಯೆಗಳು, ಹೊರಗೆ ಸಮಸ್ತ ಪ್ರಪಂಚ, ಪ್ರಪಂಚವನ್ನು ಸೃಷ್ಠಿಸಿದ ದೇವರು, ಮೋಕ್ಷಪ್ರಾಪ್ತಿ ಕೂಡಾ, ಸರ್ವವು ಬ್ರಹ್ಮನಾಡಿಯಲ್ಲಿ ಮಿಳಿತವಾಗಿವೆಯೆನ್ನುವ ನಿಜ ತಿಳಿದಿದೆ.

ಖುರ್‌ಆನ್ ಮತ್ತು ಮುಸ್ಲೀಮ್‌ರ ವಿಷಯದಲ್ಲಿ ಅವರು ಅಜ್ಞಾನದಿಂದ, ಅಪೋಹಗಳೊಂದಿಗೆ, ಭ್ರಮೆಗಳೊಂದಿಗೆ ಖುರ್‌ಆನ್ ಗ್ರಂಥದಲ್ಲಿನ ಜ್ಞಾನವನ್ನು ಹೇಗೆ ತಪ್ಪು ಭಾವವನ್ನು ಹೇಳಿಕೊಳ್ಳುತ್ತಿದ್ದಾರೋ, ತಮ್ಮ ಜ್ಞಾನ ಗ್ರಂಥಗಳ ಮೂಲಕ ನಿಜಗಳು ತಿಳಿದು ವಿಸ್ಮಯ, ಆಶ್ಚರ್ಯ ಉಂಟಾಯಿತು. ಖುರಾನ್‌ನಲ್ಲಿ ಅಡಗಿರುವ ರತ್ನಗಳು, ಮುತ್ತುಗಳನ್ನು ಸಾಧಾರಣ ಕಲ್ಲುಗಳಾಗಿ ಭಾವಿಸಿದ ನಮ್ಮ ಮುಸ್ಲೀಮ್‌ರಿಗೆ ಹಂಚಿರುವ ಜ್ಞಾನ ಪ್ರದಾತನಾಗಿ ನಿಮಗೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸುತ್ತಿದ್ದೇನೆ.

ಸೂರಾ 3 ಆಯತ್ 7 ಮೂಲಕ ಖುರಾನ್‌ನಲ್ಲಿ ಮುಹ್ಕಮಾತ್ (ಸ್ಥೂಲ), ಮುತಷಾಬಿಹಾತ್ (ಸೂಕ್ಷ್ಮ) ಆಯತ್‌ಗಳು ಇವೆಯೆಂದು, ಶರೀರದಲ್ಲಿ ಅಡಗಿರುವ ಸೂಕ್ಷ್ಮ ಜ್ಞಾನವನ್ನು ಕುರಿತು ತಿಳಿಯದ ಜ್ಞಾನವನ್ನು **ಅಂತಿಮ**

**ಗ್ರಂಥದಲ್ಲಿ, ಜ್ಞಾನ ವಾಕ್ಯಗಳು, ವಜ್ರ ವಾಕ್ಯಗಳು** ಎನ್ನುವ ಎರಡು ಜ್ಞಾನ ಗಣಿಗಳನ್ನು ನಮ್ಮ ಮುಸ್ಲೀಮ್ ಸಮಾಜಕ್ಕೆ ಕೊಟ್ಟಿರುವ ತಮ್ಮ ಋಣ ಏನು ಕೊಟ್ಟರೂ ತೀರುವುದಿಲ್ಲ. ಒಟ್ಟಾರೆ ಮುಸ್ಲೀಮ್ ಸಮಾಜಕ್ಕೇ ತಿಳಿಯದ ಅಗೋಚರ ಜ್ಞಾನವನ್ನು ತಿಳಿಸಿದ ಖುದಾಗೆ (ಅಲ್ಲಾಹ್ ಜ್ಞಾನ ಅಲ್ಲಾಹ್‌ಗೆ ಹೊರತು ಯಾರಿಗೂ ತಿಳಿದಿಲ್ಲ) ಭಗವಂತನಿಗು, ಆದರಣಕರ್ತಗೂ ನನ್ನ ಸಜ್‌ದಾ ಮಾಡುತ್ತಿದ್ದೇನೆ.

ಏಳು ಆಕಾಶಗಳು, ಭೂಮಿ ಅವುಗಳ ಮಧ್ಯದಲ್ಲಿರುವ ಸಮಸ್ತ ಅಂದರೇ ಶರೀರ ಎಂದು 30–8, 11–123, 74–30,31 ಆಯತ್‌ಗಳ ಮೂಲಕ, ಮುಸ್ಲೀಮ್‌ರಿಗೆ ಇಲ್ಲಿಯವರೆಗು ತಿಳಿಯದ ದೊಡ್ಡ ರಹಸ್ಯ ತಿಳಿಸಿದ್ದಾರೆ. ಶರೀರದಲ್ಲೇ ಮೂರು ಆತ್ಮಗಳು ಇವೆಯೆಂದು ಖುರಾನ್ ಆಯತ್ 50–21 ಮೂಲಕ **"ನಡೆಸಲ್ಪಡುವವನು ಜೀವಾತ್ಮ, ನಡೆಸುವವನು ಆತ್ಮ, ಸಾಕ್ಷಿಯಾಗಿ ನೋಡುವವನು ಪರಮಾತ್ಮ"** ಎಂದು, ಇವು ಭಗವದ್ಗೀತೆಯಲ್ಲಿ 14–16,17 ಮತ್ತು ಬೈಬಲ್‌ನಲ್ಲಿ ಮತ್ತಾಯ ಸುವಾರ್ತೆಯಲ್ಲಿ 28–19 ರಲ್ಲಿ ಮೂರು ದೈವಗ್ರಂಥಗಳಲ್ಲಿ ಇರುವ ವಿಷಯ ಮುಸ್ಲೀಮ್ ಸಮಾಜಕ್ಕೆ ಒಂದು ಕಣ್ತೆರೆಸುವಂತೆ ಇದೆ. ಮುಸ್ಲೀಮ್‌ರು ಆಚರಿಸುವ ನಮಾಜ್ ತಪಸ್ಸು ಎಂದು, ನಿಜವಾದ ನಮಾಜ್ ಶರೀರದಲ್ಲೇ ಇದೆಯೆಂದು 4–103, 3–191 ಆಯತ್‌ಗಳ ಮೂಲಕ ತಿಳಿದಿದೆ. ಜಕಾತ್ ಅಂದರೇ ನೂರು ರೂಪಾಯಿಗಳಿಗೆ 2.50 ರೂಪಾಯಿಗಳನ್ನು ಬಡವರಿಗೆ ಹಂಚುವುದು ಅಲ್ಲವೆಂದು ದೈವ ಸೇವ, ಧರ್ಮ ಪ್ರಚಾರವೆಂದು (ಭಗವದ್ಗೀತೆಯಲ್ಲಿ ಹೇಳಿದ ಬ್ರಹ್ಮ, ಕರ್ಮ, ಭಕ್ತಿ ಯೋಗಗಳು ಎಂದು) ಖುರಾನ್ 48–15,16,17 ಆಯತ್‌ಗಳೆಂದು, ರೋಜಾ ಎಂದರೇ ಅನ್ನ ತಿನ್ನದೇ ಇರುವುದಲ್ಲವೆಂದು, ಖುರ್‌ಆನ್ 2–187 ಆಯತ್ ಮೂಲಕ ಆತ್ಮನನ್ನು ಹೊಂದುವುದು ಉಪವಾಸವೆಂದು ತಿಳಿದಿದೆ. ಹಜ್‌ನಲ್ಲಿ ಮಾಡುವ ಆಚರಣೆ ಸಫಾ, ಮರ್ವಾ, ಚರ, ಅಚರ ಪ್ರಕೃತಿಗೆ ಗುರುತುಗಳೆಂದು ತಿಳಿಯದ ರಹಸ್ಯ ತಿಳಿದಿದೆ.

ಮುಸ್ಲೀಮ್‌ರಿಗೆ ಖುರ್‌ಆನ್‌ನಲ್ಲಿ ಸೂಕ್ಷ್ಮ ಆಯತ್‌ಗಳು ಅರ್ಥವಾಗದೇ ಸ್ಥೂಲವಾಗಿ ಹೇಳಿಕೊಂಡು ಒಟ್ಟಾರೆ ಮುಸ್ಲೀಮ್ ಸಮಾಜಕ್ಕೆ ಖುರ್‌ಆನ್

ದೂರ ಮಾಡಿ ಆಯತ್ 2–79 ಪ್ರಕಾರ ಮನುಷ್ಯರು ಹದೀಸುಗಳನ್ನು ಬರೆದುಕೊಂಡು ಅವು ಮಾತ್ರವೇ ಬೋಧಿಸುತ್ತಾ ಒಟ್ಟಾರೆ ಮುಸ್ಲೀಮ್ ಸಮಾಜಕ್ಕೆ 72 ವರ್ಗಗಳಾಗಿ ಸೀಳಿಸಿ, ಖುರ್‌ಆನ್‌ಗೆ, ಅಲ್ಲಾಹ್ ಗೆ ದೂರ ಮಾಡಿ ಖುರ್‌ಆನ್ ಆಯತ್‌ಗಳು 2–159, 41–40 ಪ್ರಕಾರ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ. ಸ್ವರ್ಗವೇ ಜೀವಿತ ಲಕ್ಷ್ಯವಾಗಿ ಇಟ್ಟುಕೊಂಡಿದ್ದಾರೆ. ಮುಸ್ಲೀಮ್‌ರಿಗೆ ಸ್ವರ್ಗ, ನರಕ ಹೊರತು, ಪರಲೋಕ (ಮೋಕ್ಷ) ಅಂದರೇ ಏನೋ ಅವು ಎಲ್ಲಿ ಇರುತ್ತವೋ ತಿಳಿಯದಂತಿದ್ದಾರೆ. ಆಯತ್‌ಗಳು 10–106, 107, 108 ಸ್ವರ್ಗ, ನರಕವನ್ನು ಕುರಿತು, 3–14, 6–127, 13–24, 30–7,8, 40–39, 40 ಪರಲೋಕವನ್ನು ಕುರಿತು ಖುರ್‌ಆನ್‌ನಲ್ಲಿ ಇದ್ದರೂ, ಮುಸ್ಲೀಮ್ ಹಿರಿಯರಿಗೆ ತಿಳಿಯದಂತೆ ಹೋಗುವುದು ದುರದೃಷ್ಟಕರ.

ಮುಸ್ಲೀಮ್‌ರಿಗೆ ಪುನರ್ಜನ್ಮಗಳು ಇವೆಯೆಂದು ಖುರ್‌ಆನ್ ಆಯತ್‌ಗಳು 7–29, 22–66, 36–68, 40–11 ಹೇಳುತ್ತಿವೆ. ಗತ ಜನ್ಮದಲ್ಲಿ ಮಾಡಿಕೊಂಡ ಕರ್ಮಗಳು ಅನುಭವಿಸುವುದಕ್ಕೇ ಜನ್ಮಗಳು ಇವೆಯೆಂದು ಆಯತ್ 10–4 ಹೇಳುತ್ತಿದೆ. ಮುಸ್ಲೀಮ್‌ರಿಗೆ ತಬ್ದೀರ್ (ಕರ್ಮ) ಅಂದರೇ ಪೂರ್ತಿಯಾಗಿ ತಿಳಿದಿಲ್ಲ. ಆಯತ್ 9–51, 57–22 ಹುಟ್ಟುವುದಕ್ಕಿಂತ ಮೊದಲೇ ಎಲ್ಲಾ ಬರೆಯಲ್ಪಟ್ಟಿವೆಯೆಂದರೇ ಏನು ಬರೆಯಲ್ಪಟ್ಟಿವೆಯೋ ತಿಳಿಯದೆ ಅಯೋಮಯದಲ್ಲಿ ಇದ್ದಾರೆ. 7–187, 30–56 ಪ್ರಳಯವನ್ನು ಕುರಿತು, 9–5, 5–32 ಜೀಹಾದ್ ಕುರಿತು, 72–6, 3–41 ಜಿನ್ನಾತರನ್ನು ಕುರಿತು, 40–40, 48–5 ಸ್ತ್ರೀಯರಿಗೆ ಸ್ವರ್ಗವನ್ನು ಕುರಿತು ಖುರಾನ್‌ನಲ್ಲಿ ಸ್ಪಷ್ಟವಾಗಿ ಇದ್ದರೂ ತಿಳಿಯದಂತಿದ್ದಾರೆ.

97–1,2,3,4,5 ಖುರ್‌ಆನ್ ಆಯತ್‌ಗಳ ಮೂಕ ಸೃಷ್ಟಿ ರಹಸ್ಯ ತಿಳಿದಿದೆ. ಅದಕ್ಕೆ ಭಿನ್ನವಾಗಿ ಮುಸ್ಲೀಮ್‌ರು ಲೈಲ ತುಲ್ ಖದ್ರಿ ಅಂದರೇ ರಂಜಾನ್ ಅವತರಿಸಿದ ದಿನ ಎಂದು ಹೇಳಿಕೊಳ್ಳುತ್ತಾ ಅಧರ್ಮ ಆಚರಣೆ ಮಾಡುತ್ತಿದ್ದಾರೆ. ತಮ್ಮ ಗ್ರಂಥಗಳ ಜ್ಞಾನದ ಮೂಲಕ ನಿಜವಾದ ಮುಸ್ಲೀಮ್‌ರಾಗಿ ಬದಲಾಗಿದ್ದೇನೆ. ತಮಗೆ ಸಾಷ್ಟಾಂಗ ನಮಸ್ಕಾರಗಳು.

## ಮುಸ್ಲೀಮ್ ಸಮಾಜಕ್ಕೆ ನನ್ನ ವಿಜ್ಞಪ್ತಿ ಏನೆಂದರೆ!

ಒಟ್ಟಾರೆ ಮುಸ್ಲೀಮ್ ಸಮಾಜ ಖುರ್‌ಆನ್‌ನಲ್ಲಿ ಅಲ್ಲಾಹ್ ಹೇಳಿದ ಖುರ್‌ಆನ್‌ನಲ್ಲಿ ಇರುವ ಸುರಾ 3 ಆಯತ್ 7 ರ ಪ್ರಕಾರ ಮುಹ್ಕಮಾತ್, ಮುತಷಾಬಿಹಾತ್ ಅಂದರೇ ಸ್ಥೂಲವಾಕ್ಯಗಳು, ಸೂಕ್ಷ್ಮವಾಕ್ಯಗಳು ಅಂದರೇ ಏನೋ ತಿಳಿಯದ ಅಜ್ಞಾನದಿಂದ, ಖುರ್‌ಆನ್ ಪ್ರವಕ್ತರಿಗೇ ಅರ್ಥವಾಗುತ್ತದೆ, ನಮಗೆ ಅರ್ಥವಾಗುವುದಿಲ್ಲವೆಂದು, ಪ್ರವಕ್ತ ಜೀವಿತ ವಿಧಾನವೇ ನಾವು ಆಚರಿಸಬೇಕೆಂದು ಮುಸ್ಲೀಮ್ ಹಿರಿಯರು, ಹದೀಸುಗಳು ಬರೆದು ಅವುಗಳನ್ನು ಮಾತ್ರವೇ ಬೋಧಿಸುತ್ತಾ ಖುರ್‌ಆನ್ ಜ್ಞಾನಕ್ಕೆ, ಅಲ್ಲಾಹ್‌ಗೆ ಒಟ್ಟಾರೆ ಮುಸ್ಲೀಮ್ ಸಮಾಜಕ್ಕೆ ದೂರ ಮಾಡಿ, ತೀರದ ಅನ್ಯಾಯ ಮಾಡಿ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ (ಆಯತ್‌ಗಳು 2–159, 41–40). ಖುರ್‌ಆನ್ ಆಯತ್ 6–91 ರಲ್ಲಿ ನಿಮ್ಮ ಹಿರಿಯರಿಗೆ ತಿಳಿಯದ ವಿಷಯಗಳು ಎಷ್ಟೋ ತೌರಾತ್‌ನಲ್ಲಿ ತಿಳಿಯಲ್ಪಟ್ಟಿವೆಯೆಂದು ಇದೆ. ಖುರ್‌ಆನ್ ಆಯತ್ 2–79 ಪ್ರಕಾರ ಮನುಷ್ಯರು ಬರೆದ ಹದೀಸುಗಳನ್ನು ಬಿಟ್ಟು, ನಿಜವಾದ ಅಲ್ಲಾಹ್ ಭಕ್ತರಾಗಿ, ಖುರ್‌ಆನ್ ಆಯತ್ 51–56 ಪ್ರಕಾರ ಅಲ್ಲಾಹ್‌ನ್ನು, ನಿಜ ಜ್ಞಾನ ತಿಳಿದು ಆರಾಧಿಸೋಣ. ಮುಸ್ಲೀಮ್ ಹಿರಿಯರು ಅವರಿಗೇ ಖುರ್‌ಆನ್ ಪ್ರಕಾರ ನಿಜ ಜ್ಞಾನ ತಿಳಿಯದೆ ತಬ್ದೀರ್ ಕುರಿತು, ಪುನರ್ಜನ್ಮಗಳ ಕುರಿತು, ಪ್ರಳಯ ಕುರಿತು, ಜೀಹಾದ್ ಕುರಿತು ಸ್ವರ್ಗ, ನರಕ, ಮೋಕ್ಷ ಕುರಿತು, ಮುಖ್ಯವಾಗಿ ನಮಾಜ್, ಜಕಾತ್, ರೋಜಾ, ಹಜ್ ಕುರಿತು ಅರ್ಥವಾಗದೆ ತಪ್ಪು ಭಾವದೊಂದಿಗೆ ಹದೀಸುಗಳನ್ನು ಬರೆದು, ಖುರ್‌ಆನ್ ಜ್ಞಾನ ತಪ್ಪು ಭಾವವನ್ನು ಹೇಳಿ, ಮುಸ್ಲೀಮ್ ಸಮಾಜಕ್ಕೆ 72 ವರ್ಗಗಳಾಗಿ ಸೀಳಿಸಿದ್ದಾರೆ. ಸ್ವರ್ಗವನ್ನು ಹೊಂದುವುದೇ ಜೀವಿತ ಲಕ್ಷ್ಯವಾಗಿ ಹದೀಸುಗಳನ್ನು ಬೋಧಿಸುತ್ತಿದ್ದಾರೆ.

ಮುಸ್ಲೀಮ್‌ರೇ! ಇಂದಿಗಾದರೂ ಎಚ್ಚರಗೊಳ್ಳಿ. ಅಲ್ಲಾಹ್ ನಮಗೋಸ್ಕರ ಖುರ್‌ಆನ್ ಆಯತ್ 2–186 ಪ್ರಕಾರ ಒಬ್ಬ ವ್ಯಕ್ತಿಯಲ್ಲಿ ದೈವಶಕ್ತಿ ಮೂಲಕ ನಿಜವಾದ ಜ್ಞಾನವನ್ನು ತಿಳಿಸುವುದಕ್ಕೆ ಕಳುಹಿಸಿ ನಮ್ಮನ್ನು ನಿಜವಾದ

ಮುಸ್ಲೀಮ್‌ರಾಗಿ, ಸಂಪೂರ್ಣ ಮುಸ್ಲೀಮ್‌ರಾಗಿ ಮಾಡುವುದಕ್ಕೆ ಕಳುಹಿಸಿ, ಯೋಗೀಶ್ವರರ ಮೂಲಕ **"ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ವಜ್ರ ವಾಕ್ಯಗಳು"** ಎಂದು ಮುಸ್ಲೀಮ್ ಸಮಾಜಕ್ಕೆ ತಿಳಿಯದ ಖುರ್‌ಆನ್ ಸೂಕ್ಷ್ಮ ಆಯತ್‌ಗಳ ಜ್ಞಾನವನ್ನು ಅಲ್ಲಾಹ್ ಪ್ರೇರಣೆಯೊಂದಿಗೆ (ಸಂಕಲ್ಪ ದೊಂದಿಗೆ) ನಮಗೆ ಎರಡು ಗ್ರಂಥಗಳನ್ನು ಅವುಗಳಿಗೆ ಅನುಬಂಧ ಗ್ರಂಥಗಳನ್ನು ಬರೆದು ಕೊಟ್ಟಿದ್ದಾರೆ. ಆದ್ದರಿಂದ ಸ್ವರ್ಗಕ್ಕೆ ತೆಗೆದುಕೊಂಡು ಹೋಗುವ ಹದೀಸುಗಳನ್ನು ಬಿಟ್ಟು, ಮೋಕ್ಷಕ್ಕೆ ತೆಗೆದುಕೊಂಡು ಹೋಗುವ ಖುರ್‌ಆನ್ ಆಯತ್ 40–39, 41 ನ್ನು ತೆಗೆದುಕೊಂಡು ಆಚರಿಸಿ, 72 ವರ್ಗಗಳನ್ನು ಬಿಟ್ಟು ನಿಜವಾದ ಅಲ್ಲಾಹ್ ಮಾರ್ಗದೊಳಗೆ ಬರಬೇಕೆಂದು ಅದಕ್ಕಾಗಿ ಯೋಗೀಶ್ವರರ ಗ್ರಂಥಗಳನ್ನು ಅಸೂಯೆ ಇಲ್ಲದೆ ಓದಿ, ಅರ್ಥ ಮಾಡಿಕೊಂಡು ಆಚರಿಸಿ ನಿಜವಾದ 73 ನೇ ಅಲ್ಲಾಹ್ ವರ್ಗದೊಳಗೆ ಬಂದು ಮೋಕ್ಷ ಹೊಂದೋಣ (ಖುದಾ ಹಫಿಜ್). ಖುದಾಗೆ ನಿಮ್ಮ ಪ್ರಿಯ ಭಕ್ತನ ಮನವಿ. ನನಗೆ ಸಂಪೂರ್ಣ ಜ್ಞಾನ ಪ್ರಸಾದಿಸೆಂದು, ಭಗವದ್ಗೀತೆ ಶ್ಲೋಕ 17–66 ಪ್ರಕಾರ ಶರಣು ಬೇಡಿಕೊಳ್ಳುತ್ತಿದ್ದೇನೆ. ನನ್ನ ಜೀವನ ಧ್ಯೇಯ ದೈವ ಜ್ಞಾನ ತಿಳಿದುಕೊಳ್ಳುತ್ತಾ ದೈವಸೇವೆಯಾಗಿ ಧರ್ಮಪ್ರಚಾರ ಮಾಡಿಕೊಳ್ಳಬೇಕೆಂದು ನಿರ್ಣಯಿಸಿಕೊಂಡಿದ್ದೇನೆ. ಅದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳನ್ನು ಅನುಗ್ರಹಿಸಿ ರೆಂದು, ನಿಮ್ಮ ದರ್ಶನ ಭಾಗ್ಯವನ್ನು ಕೊಡಬೇಕೆಂದು, ಈ ಜ್ಞಾನ ಹೇಳಿರುವುದು ಸಾಕ್ಷ್ಯಾತ್ತೂ ಖುದಾ, ಭಗವಂತನೇ, ಆದರಣ ಕರ್ತನೇ ಎಂದು ಸಂಪೂರ್ಣವಾಗಿ ವಿಶ್ವಾಸಿಸುತ್ತಾ.... ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಿದ್ದೇನೆ.

ಇಂತಿ ನಿಮ್ಮ ಪ್ರಿಯ ಭಕ್ತನು
**ಸಯ್ಯದ್ ಸಲ್ಮಾನ್‌ಷಾ**

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**